# ಅಧ್ಯಾಯ 2



# ಅನುಭೋಗಿಯ ವರ್ತನೆಯ ಸಿದ್ಧಾಂತ

## *Theory of Consumer Behaviour*

ಈ ಅಧ್ಯಾಯದಲ್ಲಿ ನಾವು ವೈಯಕ್ತಿಕ ಅನುಭೋಗಿಯ ವರ್ತನೆಯನ್ನು ಅಭ್ಯಸಿಸುತ್ತೇವೆ. ವಿವಿಧ ಸರಕುಗಳ[1] ಮೇಲೆ ಅನುಭೋಗಿಯು ಹೇಗೆ ಆದಾಯವನ್ನು ಖರ್ಚು ಮಾಡುತ್ತಾನೆಂಬುದನ್ನು ಅನುಭೋಗಿಯೇ ತೀರ್ಮಾನಿಸಬೇಕು. ಅರ್ಥಶಾಸ್ತ್ರಜ್ಞರು ಇದನ್ನು ಆಯ್ಕೆಯ ಸಮಸ್ಯೆಯೆಂದು ಕರೆದಿದ್ದಾರೆ. ಸಹಜವಾಗಿ ಯಾವುದೇ ಅನುಭೋಗಿಯು ತನಗೆ ಗರಿಷ್ಟ ತೃಪ್ತಿ ನೀಡುವ ಸರಕುಗಳ ಸಂಯೋಜನೆಯನ್ನು ಪಡೆಯಲು ಬಯಸುತ್ತಾಳೆ. ಇದರಲ್ಲಿ ಉತ್ತಮ ಸಂಯೋಜನೆ ಯಾವುದಾಗಿರುತ್ತದೆ? ಇದು ಅನುಭೋಗಿಯ ಇಷ್ಟಗಳು (ಅಪೇಕ್ಷೆಗಳು) ಹಾಗೂ ಏನನ್ನು ಕೊಳ್ಳುವ ಸಾಮರ್ಥ್ಯ ಹೊಂದಿದ್ದಾಳೆಂಬುದನ್ನು ಅವಲಂಬಿಸಿರುತ್ತದೆ. ಅನುಭೋಗಿಯ ಇಷ್ಟಗಳನ್ನು ಆದ್ಯತೆಗಳೆಂದು ಸಹ ಕರೆಯುತ್ತೇವೆ. ಮತ್ತು ಅನುಭೋಗಿಯು ಏನನ್ನು ಕೊಂಡುಕೊಳ್ಳುತ್ತಾನೆಂಬುದನ್ನು ಆ ಸರಕಿನ ಬೆಲೆ ಮತ್ತು ಅನುಭೋಗಿ ಆದಾಯವನ್ನು ಅವಲಂಬಿಸಿರುತ್ತದೆ. ಅನುಭೋಗಿಯ ವರ್ತನೆಯನ್ನು ವಿವರಿಸಲು ಈ ಅಧ್ಯಾಯವು ಎರಡು ವಿಭಿನ್ನ ವಿಧಾನಗಳನ್ನು ಪರಿಚಯಿಸಿದೆ. (i) ಸಂಖ್ಯಾಸೂಚಕ (ಮೂಲಾಂಕ) ತುಷ್ಟಿಗುಣ ವಿಶ್ಲೇಷಣೆ ಮತ್ತು (ii) ಸ್ಥಾನ ದರ್ಶಕ ತುಷ್ಟಿಗುಣ ವಿಶ್ಲೇಷಣೆ.

**ಪೂರ್ವ ಸಂಕೇತನಗಳು ಮತ್ತು ಕಲ್ಪನೆಗಳು** ***Preliminary Notations and Assumptions***

ಸಾಮಾನ್ಯವಾಗಿ ಒಬ್ಬ ಅನುಭೋಗಿಯು ಹಲವಾರು ಸರಕುಗಳನ್ನು ಅನುಭೋಗಿಸುತ್ತಾಳೆ. ಆದರೆ ನಾವಿಲ್ಲಿ ಸರಳವಾಗಿ ಕೇವಲ ಎರಡು ಸರಕುಗಳು[2] ಲಭ್ಯವಿರುವ ಸನ್ನಿವೇಶದಲ್ಲಿ ಅನುಭೋಗಿಯ ಆಯ್ಕೆಯ ಸಮಸ್ಯೆಯನ್ನು ಪರಿಗಣಿಸೋಣ. ಬಾಳೆಹಣ್ಣು ಮತ್ತು ಮಾವಿನಹಣ್ಣುಗಳನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಈ ಎರಡು ಸರಕುಗಳನ್ನು ಒಳಗೊಂಡ ಯಾವುದೇ ಸಂಯೋಜನೆಯ ಮೊತ್ತವನ್ನು ಅನುಭೋಗದ ಒಂದು ಸಂಯೋಜನೆ (ಕಂತೆ–*Bundle*) ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ನಾವು ಬಾಳೆಹಣ್ಣುಗಳ ಪ್ರಮಾಣವನ್ನು ವ್ಯಕ್ತಪಡಿಸಲು $x_1$ ಚಲಕವನ್ನು, ಮಾವಿನಹಣ್ಣುಗಳ ಪ್ರಮಾಣವನ್ನು ವ್ಯಕ್ತಪಡಿಸಲು $x_2$ ಚಲಕವನ್ನು ಬಳಸುತ್ತೇವೆ. $x_1$ ಮತ್ತು $x_2$ ಸರಕುಗಳು ಧನಾತ್ಮಕವಾಗಿರಬಹುದು ಅಥವಾ ಶೂನ್ಯವಾಗಿರಬಹುದು. $(x_1, x_2)$ ಸಂಯೋಜನೆಯು, $x_1$ ಪ್ರಮಾಣದಷ್ಟು ಬಾಳೆಹಣ್ಣುಗಳನ್ನು ಮತ್ತು $x_2$ ಪ್ರಮಾಣದಷ್ಟು ಮಾವಿನಹಣ್ಣುಗಳನ್ನು ಒಳಗೊಂಡಿರುತ್ತದೆ. ನಿರ್ದಿಷ್ಟ ಮೌಲ್ಯದ $x_1$ ಮತ್ತು $x_2$ ಗಳು $(x_1, x_2)$ ನಿರ್ದಿಷ್ಟ ಸಂಯೋಜನೆಯನ್ನು ನೀಡುತ್ತದೆ. ಉದಾಹರಣೆಗೆ (5,10) ಸಂಯೋಜನೆಯು 5 ಬಾಳೆಹಣ್ಣುಗಳನ್ನು ಮತ್ತು 10 ಮಾವಿನಹಣ್ಣುಗಳನ್ನು ಒಳಗೊಂಡಿರುತ್ತದೆ; (10,5) ಸಂಯೋಜನೆಯು 10 ಬಾಳೆಹಣ್ಣುಗಳನ್ನು ಮತ್ತು 5 ಮಾವಿನಹಣ್ಣುಗಳನ್ನು ಒಳಗೊಂಡಿರುತ್ತದೆ.

### 2.1 ತುಷ್ಟಿಗುಣ *Utility*

ಒಬ್ಬ ಅನುಭೋಗಿಯು ಒಂದು ಸರಕಿಗಿರುವ ತನ್ನ ಬೇಡಿಕೆಯನ್ನು ಆ ಸರಕಿನಿಂದ ಪಡೆಯುವ ತುಷ್ಟಿಗುಣದ (ಅಥವಾ ತೃಪ್ತಿ) ಆಧಾರದ ಮೇಲೆ ತೀರ್ಮಾನಿಸುತ್ತಾಳೆ. ತುಷ್ಟಿಗುಣ ಎಂದರೇನು? ತುಷ್ಟಿಗುಣವು ಒಂದು ಸರಕಿಗಿರುವ

1 ನಾವು ಸಾಮಾನ್ಯವಾಗಿ ಸರಕು ಎಂಬ ಪದವನ್ನು ಬಳಸುತ್ತೇವೆ. ಆದರೆ ಇದರ ಅರ್ಥ ಸರಕು ಸೇವೆಗಳೆರಡನ್ನು ಹೊಂದಿರುತ್ತದೆ.

2 ಎರಡು ಸರಕುಗಳನ್ನು ಮಾತ್ರ ಪರಿಗಣಿಸಿರುವ ಕಲ್ಪನೆಯು ವಿಶ್ಲೇಷಣೆಯನ್ನು ಗಮನಾರ್ಹವಾಗಿ ಸರಳಗೊಳಿಸಿದೆ. ಮತ್ತು ಸರಳ ರೇಖಾಚಿತ್ರಗಳ ಮೂಲಕ ಮುಖ್ಯ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿದೆ.

ಬಯಕೆಗಳನ್ನು ತೃಪ್ತಿಪಡಿಸುವ ಸಾಮರ್ಥ್ಯವಾಗಿದೆ. ಒಂದು ಸರಕಿನ ಹೆಚ್ಚಿನ ಅವಶ್ಯಕತೆ ಅಥವಾ ಅದನ್ನು ಹೊಂದುವ ಪ್ರಬಲವಾದ ಅಪೇಕ್ಷೆ ಇದ್ದಾಗ ಆ ಸರಕಿನಿಂದ ಪಡೆಯುವ ತುಷ್ಟಿಗುಣವು ಹೆಚ್ಚಾಗಿರುತ್ತದೆ.

ತುಷ್ಟಿಗುಣವು ವ್ಯಕ್ತಿಗತವಾದದ್ದು (Subjective). ಒಂದೇ ಸರಕಿನಿಂದ ವಿಭಿನ್ನ ವ್ಯಕ್ತಿಗಳು ವಿಭಿನ್ನ ಮಟ್ಟದ ತುಷ್ಟಿಗುಣವನ್ನು ಪಡೆಯಬಹುದು. ಉದಾಹರಣೆಗೆ ಚಾಕೋಲೇಟ್‌ನ್ನು ಇಷ್ಟಪಡುವವರು, ಚಾಕೋಲೇಟ್‌ನ್ನು ಇಷ್ಟಪಡದಿರುವ ಕೆಲವರಿಗಿಂತ ಹೆಚ್ಚು ತುಷ್ಟಿಗುಣವನ್ನು ಪಡೆಯುವರು, ಹಾಗೆಯೇ ಒಂದು ಸರಕಿನಿಂದ ಪಡೆಯುವ ತುಷ್ಟಿಗುಣವು ಸ್ಥಳ ಮತ್ತು ಸಮಯದ(ಕಾಲದ) ಬದಲಾವಣೆಯೊಂದಿಗೆ ಬದಲಾಗುತ್ತದೆ. ಉದಾಹರಣೆಗೆ 'ರೂಮ್ ಹೀಟರ್' ನಿಂದ ಪಡೆಯುವ ತುಷ್ಟಿಗುಣವು ವ್ಯಕ್ತಿಯು ಲಡಕ್‌ನಲ್ಲಿರುವಳೋ ಅಥವಾ ಚೆನ್ನೈನಲ್ಲಿರುವಳೋ (ಸ್ಥಳ) ಅಥವಾ ಇದು ಬೇಸಿಗೆ ಕಾಲವೋ ಅಥವಾ ಚಳಿಗಾಲವೋ ಎಂಬುದನ್ನು ಅವಲಂಬಿಸಿರುತ್ತದೆ.

### 2.1.1 ಸಂಖ್ಯಾಸೂಚಕ (ಮೂಲಾಂಕ) ತುಷ್ಟಿಗುಣ ವಿಶ್ಲೇಷಣೆ. *Cardinal Utility Analysis*

ಸಂಖ್ಯಾಸೂಚಕ ತುಷ್ಟಿಗುಣ ವಿಶ್ಲೇಷಣೆಯು ತುಷ್ಟಿಗುಣವನ್ನು ಸಂಖ್ಯೆಗಳಲ್ಲಿ ವ್ಯಕ್ತಪಡಿಸಬಹುದೆಂದು ಕಲ್ಪಿಸುತ್ತದೆ. ಉದಾಹರಣೆಗೆ ಒಂದು ಷರ್ಟ್ (Shirt) ನಿಂದ ಪಡೆಯುವ ತುಷ್ಟಿಗುಣವನ್ನು ನಾವು ಮಾಪನ ಮಾಡಬಹುದು ಮತ್ತು ಆ ಷರ್ಟ್ 50 ಘಟಕಗಳಷ್ಟು ತುಷ್ಟಿಗುಣವನ್ನು ನೀಡುತ್ತದೆ ಎಂದುಕೋಳ್ಳೋಣ. ಇದನ್ನು ಮತ್ತಷ್ಟು ಚರ್ಚಿಸುವುದರ ಮೊದಲು ತುಷ್ಟಿಗುಣದ ಪ್ರಮುಖ ಎರಡು ಮಾಪನಗಳ ಬಗ್ಗೆ ಗಮನಹರಿಸುವುದು ಉಪಯುಕ್ತವೆನಿಸುತ್ತದೆ.

**ತುಷ್ಟಿಗುಣದ ಮಾಪನಗಳು** *Mesures of Utility*

**ಒಟ್ಟು ತುಷ್ಟಿಗುಣ Total Utility :–** ಸ್ಥಿರ ಪ್ರಮಾಣದ ಒಂದು ಸರಕಿನ ಒಟ್ಟು ತುಷ್ಟಿಗುಣವು ನೀಡಲಾದ ಸ್ವಲ್ಪ ಮೊತ್ತದ x ಸರಕಿನ ಅನುಭೋಗದಿಂದ ಪಡೆದ ಒಟ್ಟು ತೃಪ್ತಿಯಾಗಿದೆ.

ಅನುಭೋಗಿಗೆ ಹೆಚ್ಚಿನ 'x' ಸರಕು ಹೆಚ್ಚಿನ ತೃಪ್ತಿಯನ್ನು ನೀಡುತ್ತದೆ. TU ಅನುಭೋಗಿಸಿದ ಸರಕಿನ ಪ್ರಮಾಣವನ್ನು ಅವಲಂಬಿಸಿರುತ್ತದೆ. ಆದ್ದರಿಂದ x ಸರಕಿನ n ಘಟಕವನ್ನು ಅನುಭೊಗಿಸುವುದರಿಂದ ಪಡೆದ ಒಟ್ಟು ತುಷ್ಟಿಗುಣವನ್ನು $TU_n$ ಸೂಚಿಸುತ್ತದೆ.

**ಸೀಮಾಂತ ತುಷ್ಟಿಗುಣ Marginal Utility :** ಒಂದು ಸರಕಿನ ಹೆಚ್ಚುವರಿ ಘಟಕದ ಅನುಭೋಗದ ಕಾರಣದಿಂದ ಒಟ್ಟು ತುಷ್ಟಿಗುಣದಲ್ಲಾದ ಬದಲಾವಣೆಯೇ ಸೀಮಾಂತ ತುಷ್ಟಿಗುಣ (MU). ಉದಾಹರಣೆಗೆ ನಮಗೆ 4 ಬಾಳೆಹಣ್ಣುಗಳು 28 ಘಟಕಗಳಷ್ಟು ಒಟ್ಟು ತುಷ್ಟಿಗುಣವನ್ನು ನೀಡುತ್ತವೆಂದು ಮತ್ತು 5 ಬಾಳೆಹಣ್ಣುಗಳು 30 ಘಟಕಗಳಷ್ಟು ಒಟ್ಟು ತುಷ್ಟಿಗುಣವನ್ನು ನೀಡುತ್ತವೆಂದು ಭಾವಿಸೋಣ. ಸ್ಪಷ್ಟವಾಗಿ 5ನೇ ಬಾಳೆಹಣ್ಣಿನ ಅನಭೋಗವು 2 ಘಟಕಗಳಷ್ಟು ಒಟ್ಟು ತುಷ್ಟಿಗುಣದ ಹೆಚ್ಚಳಕ್ಕೆ ಕಾರಣವಾಗಿದೆ. (30 ಘಟಕಗಳು – 28 ಘಟಕಗಳು). ಆದ್ದರಿಂದ 5ನೇ ಬಾಳೆಹಣ್ಣಿನ ಸೀಮಾಂತ ತುಷ್ಟಿಗುಣ 2 ಘಟಕಗಳಾಗಿರುತ್ತವೆ.

$$MU_5 = TU_5 - TU_4 = 30 - 28 = 2$$

ಸಾಮಾನ್ಯವಾಗಿ $MU_n = TU_n - TU_{n-1}$ ಇಲ್ಲಿ n ಒಂದು ಸರಕಿನ n ನೇ ($n^{th}$) ಘಟಕವನ್ನು ಸೂಚಿಸುತ್ತದೆ.

ಒಟ್ಟು ತುಷ್ಟಿಗುಣ ಮತ್ತು ಸೀಮಾಂತ ತುಷ್ಟಿಗುಣವನ್ನು ಈ ಕೆಳಗಿನಂತೆಯೂ ಸಂಬಂಧೀಕರಿಸಬಹುದು.

$$TU_n = MU_1 + MU_2 + \ldots\ldots + MU_{n-1} + MU_n$$

ಇದರ ಸರಳ ಅರ್ಥವೆಂದರೆ ಬಾಳೆಹಣ್ಣುಗಳ n ಘಟಕಗಳ ಅನುಭೋಗದಿಂದ ಪಡೆದ ಒಟ್ಟು ತುಷ್ಟಿಗುಣ (TU) ಮೊದಲನೇ ಬಾಳೆಹಣ್ಣಿನ ಸೀಮಾಂತ ತುಷ್ಟಿಗುಣ ($MU_1$) ಎರಡನೇ ಬಾಳೇಹಣ್ಣಿನ ಸೀಮಾಂತ ತುಷ್ಟಿಗುಣ ($MU_2$) ಮತ್ತು ಇತ್ಯಾದಿ ಅಂದರೆ $n^{th}$ ಘಟಕದ ಸೀಮಾಂತ ತುಷ್ಟಿಗುಣದ ಒಟ್ಟು ಮೊತ್ತವಾಗಿರುತ್ತದೆ.

ಕೋಷ್ಟಕದ ಸಂಖ್ಯೆ 2.1 ಮತ್ತು ರೇಖಾ ಚಿತ್ರ 2.1 ಒಂದು ಸರಕಿನ ವಿಭಿನ್ನ ಪ್ರಮಾಣದ (ಮೊತ್ತದ) ಅನುಭೋಗದಿಂದ ಪಡೆದ ಒಟ್ಟು ತುಷ್ಟಿಗುಣ ಮತ್ತು ಸೀಮಾಂತ ತುಷ್ಟಿಗುಣದ ಮೌಲ್ಯಗಳ ಒಂದು ಕಾಲ್ಪನಿಕ

ಉದಾಹರಣೆಯನ್ನು ತೋರಿಸುತ್ತದೆ. ಸಹಜವಾಗಿ ಒಂದು ಸರಕಿನ ಅನುಭೋಗದ ಹೆಚ್ಚಳದೊಂದಿಗೆ ಸೀಮಾಂತ ತುಷ್ಟಿಗುಣ ಇಳಿಮುಖವಾಗುವುದನ್ನು ನೋಡಬಹುದು. ಇದು ಏಕೆಂದರೆ ಸರಕನ್ನು ಸ್ವಲ್ಪ ಪ್ರಮಾಣದಲ್ಲಿ ಹೊಂದಿದಾಗ ಅದನ್ನು ಮತ್ತಷ್ಟು ಹೊಂದುವ ಅಪೇಕ್ಷೆ ಕಡಿಮೆಯಾಗುತ್ತಾ ಹೋಗುತ್ತದೆ ಇದನ್ನ ಕೋಷ್ಟಕ ಮತ್ತು ರೇಖಾನಕ್ಷೆಯಲ್ಲೂ ತೋರಿಸಬಹುದು.

**ಕೋಷ್ಟಕ 2.1 ಒಂದು ಸರಕಿನ ವಿಭಿನ್ನ ಪ್ರಮಾಣದ ಅನುಭೋಗದಿಂದ ಪಡೆದ ಸೀಮಾಂತ ಮತ್ತು ಒಟ್ಟು ತುಷ್ಟಿಗುಣದ ಮೌಲ್ಯಗಳು.**

| ಘಟಕಗಳು | ಒಟ್ಟು ತುಷ್ಟಿಗುಣ | ಸೀಮಾಂತ ತುಷ್ಟಿಗುಣ |
|---|---|---|
| 1 | 12 | 12 |
| 2 | 18 | 6 |
| 3 | 22 | 4 |
| 4 | 24 | 2 |
| 5 | 24 | 0 |
| 6 | 22 | – 2 |

$MU_2$ ಗಿಂತ $MU_3$ ಕಡಿಮೆಯಿದೆಯಂದು ಗಮನಿಸಿ. ಒಟ್ಟು ತುಷ್ಟಿಗುಣವು ಹೆಚ್ಚಾಗುತ್ತಾ ಹೋಗುತ್ತದೆ. ಆದರೆ ಇಳಿಮುಖದರದಲ್ಲಿ ಎಂಬುದನ್ನು ಸಹ ನೀವು ಗಮನಿಸಬಹುದು. ಅನುಭೋಗಿಸಿದ ಸರಕಿನ ಪ್ರಮಾಣದಲ್ಲಾದ ಬದಲಾವಣೆಯ ಕಾರಣದಿಂದ ಒಟ್ಟು ತುಷ್ಟಿಗುಣದಲ್ಲಿ ಆದ ಬದಲಾವಣೆಯ ದರವೇ ಸೀಮಾಂತ ತುಷ್ಟಿಗುಣ. ಸರಕಿನ ಅನುಭೋಗದ ಪ್ರಮಾಣ ಹೆಚ್ಚಾದಂತೆ ಸೀಮಾಂತ ತುಷ್ಟಿಗುಣವು, 12 ರಿಂದ 6, 6 ರಿಂದ 4 ಹೀಗೆ ಇಳಿಮುಖವಾಗುತ್ತದೆ.




**ರೇಖಾಚಿತ್ರ 2.1 : ಒಂದು ಸರಕಿನ ವಿಭಿನ್ನ ಪ್ರಮಾಣದ ಅನುಭೋಗದಿಂದ ಪಡೆದ ಸೀಮಾಂತ ಮತ್ತು ಒಟ್ಟು ತುಷ್ಟಿಗುಣದ ಮೌಲ್ಯಗಳು.** ಸರಕಿನ ಅನುಭೋಗದ ಹೆಚ್ಚಳದೊಂದಿಗೆ ಸೀಮಾಂತ ತುಷ್ಟಿಗುಣ ಇಳಿಮುಖವಾಗುತ್ತದೆ.

ಇದು ಇಳಿಮುಖ ಸೀಮಾಂತ ತುಷ್ಟಿಗುಣದ ನಿಯಮವನ್ನು ಅನುಸರಿಸುತ್ತದೆ. **ಇತರೆ ಸರಕುಗಳ ಅನುಭೋಗವನ್ನು ಸ್ಥಿರವಾಗಿಟ್ಟು, ಒಂದು ಸರಕಿನ ಅನುಭೋಗವನ್ನು ಹೆಚ್ಚಿಸಿದಂತೆ, ಆ ಸರಕಿನ ಪ್ರತಿ ಹೆಚ್ಚುವರಿ ಘಟಕದಿಂದ ಪಡೆಯುವ ಸೀಮಾಂತ ತುಷ್ಟಿಗುಣ ಕಡಿಮೆಯಾಗುತ್ತದೆಂದು ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮ ಹೇಳುತ್ತದೆ.**

TU ಸ್ಥಿರವಾಗಿದ್ದಾಗ MU ಶೂನ್ಯವಾಗುತ್ತದೆ. ಉದಾಹರಣೆಯಲ್ಲಿ 5ನೇ ಘಟಕದ ಅನುಭೋಗದಲ್ಲಿ TU ಬದಲಾಗಿಲ್ಲ, ಮತ್ತು ಆದ್ದರಿಂದ $MU_5 = 0$ ಅಲ್ಲಿಂದ TU ಕಡಿಮೆಯಾಗಲು ಪ್ರಾರಂಬಿಸಿದೆ. ಮತ್ತು MU ಋಣಾತ್ಮಕವಾಗಿದೆ.

**ಒಂದು ಸರಕಿನ ಸನ್ನಿವೇಶದಲ್ಲಿ ಬೇಡಿಕೆ ರೇಖೆಯ ನಿಷ್ಪತ್ತಿ (ಇಳಿಮುಖ ಸೀಮಾಂತ ತುಷ್ಟಿಗುಣದ ನಿಯಮ)**

***Derivation of Demand Curve in the case of a single commodity (Law of Diminishing Marginal Utility)***

ಒಂದು ಸರಕಿನ ಬೇಡಿಕೆ ರೇಖೆಯನ್ನು ಪಡೆಯಲು ಸಂಖ್ಯಾಸೂಚಕ ತುಷ್ಟಿಗುಣದ ವಿಶ್ಲೇಷಣೆಯನ್ನು ಬಳಸಬಹುದು. ಬೇಡಿಕೆ ಎಂದರೇನು ಮತ್ತು ಬೇಡಿಕೆ ರೇಖೆ ಎಂದರೇನು? ನೀಡಲಾದ (given) ಸರಕುಗಳ ಬೆಲೆ ಮತ್ತು ಅನುಭೋಗಿಯ ಆದಾಯದಲ್ಲಿ ಒಬ್ಬ ಅನುಭೋಗಿಯು ಕೊಂಡುಕೊಳ್ಳಲು ಇಚ್ಛಿಸುವ ಮತ್ತು ಪಾವತಿಸುವ ಸಾಮರ್ಥ್ಯ ಹೊಂದಿರುವ ಒಂದು ಸರಕಿನ ಪ್ರಮಾಣವನ್ನು ಆ ಸರಕಿಗಿರುವ ಬೇಡಿಕೆಯೆಂದು ಕರೆಯಲಾಗುತ್ತದೆ. x ಸರಕಿಗಿರುವ ಬೇಡಿಕೆ ಅದರ ಬೆಲೆಯೊಂದಿಗೆ (price of x) ಹಲವು

ಅಂಶಗಳನ್ನು ಅವಲಂಬಿಸಿರುತ್ತದೆ. ಅವುಗಳೆಂದರೆ ಇತರೆ ಸರಕುಗಳ ಬೆಲೆ, ಅನುಭೋಗಿಯ ಆದಾಯ ಮತ್ತು ಅನುಭೋಗಿಯ ಅಭಿರುಚಿ ಹಾಗೂ ಆದ್ಯತೆಗಳು. ಇತರೆ ಸರಕುಗಳ ಬೆಲೆ ಮತ್ತು ಅನುಭೋಗಿಯ ಆದಾಯವನ್ನು ಸ್ಥಿರವಾಗಿಟ್ಟುಕೊಂಡು, ಅನುಭೋಗಿಯು ವಿವಿಧ ಬೆಲೆಗಳಲ್ಲಿ ಕೊಂಡುಕೊಳ್ಳಲು ಇಚ್ಛಿಸುವ ಒಂದು ಸರಕಿನ ವಿಭಿನ್ನ ಪ್ರಮಾಣಗಳನ್ನು ರೇಖಾತ್ಮಕವಾಗಿ ನಿರೂಪಿಸುವುದೇ ಬೇಡಿಕೆ ರೇಖೆ.

ರೇಖಾಚಿತ್ರ 2.2 ವಿವಿದ ಬೆಲೆಗಳಲ್ಲಿ x ಸರಕಿಗಿರುವ ಒಬ್ಬ ವ್ಯಕ್ತಿಯ ಪೂರ್ವಕಲ್ಪಿತ ಬೇಡಿಕೆಯನ್ನು ವ್ಯಕ್ತಪಡಿಸುತ್ತದೆ. ಸಮನಾಂತರ ಅಕ್ಷದಲ್ಲಿ ಪ್ರಮಾಣವನ್ನು ಮತ್ತು ಲಂಬಾಂತರ ಅಕ್ಷದಲಲಿ ಬೆಲೆಯನ್ನು ಮಾಪನ ಮಾಡಲಾಗಿದೆ.



ರೇಖಾಚಿತ್ರ 2.2 : ಒಬ್ಬ ವ್ಯಕ್ತಿಯ x ಸರಕಿನ ಬೇಡಿಕೆಯ ರೇಖೆ

ಇಳಿಮುಖ ಇಳಿಜಾರಿನ ಬೆಡಿಕೆ ರೇಖೆಯು ಒಬ್ಬ ವ್ಯಕ್ತಿಯು ಕಡಿಮೆ ಬೆಲೆಗಳಲ್ಲಿ 'x' ಸರಕನ್ನು ಹೆಚ್ಚು ಕೊಂಡುಕೊಳ್ಳಲು ಬಯಸುತ್ತಾನೆ. ಹಾಗೆಯೇ ಅಧಿಕ ಬೆಲೆಗಳಲ್ಲಿ 'x' ಸರಕನ್ನು ಕಡಿಮೆಕೊಂಡುಕೊಳ್ಳಲು ಇಚ್ಛಿಸುತ್ತಾನೆಂಬುದನ್ನು ತೋರಿಸುತ್ತದೆ. ಆದ್ದರಿಂದ ಒಂದು ಸರಕಿನ ಬೆಲೆ ಮತ್ತು ಬೇಡಿಕೆ ಪ್ರಮಾಣದ ನಡುವೆ ಋಣಾತ್ಮಕ ಸಂಬಂದವಿರುತ್ತದೆ. ಎಂಬುದನ್ನು ಬೇಡಿಕೆಯ ನಿಯಮ ಸೂಚಿಸುತ್ತದೆ. ಇಳಿಮುಖ ಇಳಿಜಾರಿನ ಬೇಡಿಕೆ ರೇಖೆಯ ವಿವರಣೆಯು ಇಳಿಮುಖ ಸೀಮಾಂತ ತುಷ್ಟಿಗುಣದ ಅಭಿಪ್ರಾಯ (notion)ದ ಮೇಲೆ ನಿಂತಿದೆ. ಒಂದು ಸರಕಿನ ಪ್ರತಿಯೊಂದು ಹೆಚ್ಚುವರಿ ಘಟಕವು ಕಡಿಮೆ ಸೀಮಾಂತ ತುಷ್ಟಿಗುಣವನ್ನು ಪೂರೈಸುತ್ತದೆಂಬುದನ್ನು ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮ ಹೇಳುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿಯು ಪ್ರತಿಯೊಂದು ಹೆಚ್ಚುವರಿ ಘಟಕಕ್ಕೆ ಅಷ್ಟೇ ಪಾವತಿಸಲು ಇಚ್ಛಿಸುವುದಿಲ್ಲ ಮತ್ತು ಇದರ ಫಲಿತಾಂಶವೇ ಇಳಿಮುಖ ಇಳಿಜಾರಿನ ಬೇಡಿಕೆ ರೇಖೆ. ಪ್ರತಿ x ಘಟಕಕ್ಕೆ ರೂ.40 ಬೆಲೆಯಲ್ಲಿ 'x' ಗಿರುವ ಒಬ್ಬ ವ್ಯಕ್ತಿಯ ಬೇಡಿಕೆಯು 5 ಘಟಕಗಳು. x ಸರಕಿನ 6ನೇ ಘಟಕವು 5ನೇ ಘಟಕಕ್ಕಿಂತ ಕಡಿಮೆ ಯೋಗ್ಯವಗಿರುತ್ತದೆ. ಆ ವ್ಯಕ್ತಿಯು ಪ್ರತಿ ಘಟಕಕ್ಕೆ ಬೆಲೆಯು ರೂ.40 ಕ್ಕಿಂತ ಕಡಿಮೆಯಾದಾಗ 6ನೇ ಘಟಕವನ್ನು ಕೊಂಡುಕೊಳ್ಳಲು ಇಚ್ಛಿಸುತ್ತಾಳೆ. ಆದ್ದರಿಂದ ಇಳಿಮುಖ ಸೀಮಾಂತ ತುಷ್ಟಿಗುಣದ ನಿಯಮ ಬೇಡಿಕೆ ರೇಖೆಯು ಏಕೆ ಋಣಾತ್ಮಕ ಇಳಿಜಾರನ್ನು ಹೊಂದಿರುತ್ತದೆಂಬುದನ್ನು ವಿವರಿಸುತ್ತದೆ.

### 2.1.2 ಸ್ಥಾನದರ್ಶಕ ತುಷ್ಟಿಗುಣದ ವಿಶ್ಲೇಷಣೆ. Cardinal Utility Analysis

ಸಂಖ್ಯಾಸೂಚಕ ತುಷ್ಟಿಗುಣ ವಿಶ್ಲೇಷಣೆಯು ಅರ್ಥಮಾಡಿಕೊಳ್ಳಲು ಸರಳವಾಗಿದೆ. ಆದರೆ ತುಷ್ಟಿಗುಣವನ್ನು ಸಂಖ್ಯೆಗಳಲ್ಲಿ ಪ್ರಮಾಣೀಕರಿಸುವ (quantification) ರೀತಿಯು ಬಹುಮುಖ್ಯ ನ್ಯೂನ್ಯತೆಯಿಂದ ಕೂಡಿದೆ. ನಿಜ ಜೀವನದಲ್ಲಿ ನಾವು ತುಷ್ಟಿಗುಣವನ್ನು ಸಂಖ್ಯಾರೂಪದಲ್ಲಿ ವ್ಯಕ್ತಪಡಿಸುವುದಿಲ್ಲ. ಹೆಚ್ಚೆಂದರೆ ನಾವು ಹೆಚ್ಚು ತುಷ್ಟಿಗುಣ ಅಥವಾ ಕಡಿಮೆ ತುಷ್ಟಿಗುಣವನ್ನು ಹೊಂದಿವೆ ಎಂದು ವಿವಿದ ಪರ್ಯಾಯ ಸಂಯೋಜನೆಗಳನ್ನು ಶ್ರೇಣೀಕರಿಸಬಹುದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಅನುಭೋಗಿಯು ತುಷ್ಟಿಗುಣವನ್ನು ಸಂಖ್ಯೆಗಳಲ್ಲಿ ಮಾಪನ ಮಾಡುವುದಿಲ್ಲ, ಆದಾಗ್ಯೂ ಆಕೆಯು ವಿವಿಧ ಅನುಭೋಗದ ಸಂಯೋಜನೆಗಳಿಗೆ ಶ್ರೇಣಿಗಳನ್ನು ನೀಡುತ್ತಾಳೆ. ಇದು ಸ್ಥಾನದರ್ಶಕ ತುಷ್ಟಿಗುಣ ವಿಶ್ಲೇಷಣೆಯ ಪ್ರಾರಂಭಿಕ ಬಿಂದುವನ್ನು ರಚಿಸುತ್ತದೆ.

ಲಭ್ಯವಿರುವ ಸಂಯೋಜನೆಗಳ ಗಣದಲ್ಲಿ ಅನುಭೋಗಿಯ ಆದ್ಯತೆಗಳನ್ನು ರೇಖಾತ್ಮಕವಾಗಿ ನಿರೂಪಿಸಬಹುದು. ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳನ್ನು ಎರಡು ಆಯಾಮಗಳುಳ್ಳ ರೇಖಾಚಿತ್ರದಲ್ಲಿ ಬಿಂದುಗಳಂತೆ ಗುರುತಿಸಬಹುದೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಬಿಂದುಗಳು ಸಂಯೋಜನೆಗಳನ್ನು ಪ್ರತಿನಿಧಿಸುತ್ತವೆ. ಅವು ಅನುಭೋಗಿಗೆ ಸಮಾನ ತುಷ್ಟಿಗುಣವನ್ನು ನೀಡುವ ಬಿಂಧುಗಳನ್ನು ಸಾಮಾನ್ಯವಾಗಿ

ಸೇರಿಸಿದಾಗ ರೇಖಾಚಿತ್ರ 2.3 ರಲ್ಲಿರುವಂತೆ ಒಂದು ರೇಖೆಯನ್ನು ಪಡೆಯುತ್ತೇವೆ. ವಿಭಿನ್ನ ಸಂಯೋಜನೆಗಳಲ್ಲಿ ಅನುಭೋಗಿಯು ಔದಾಸೀನ್ಯದಿಂದಿರುತ್ತಾಳೆಂದು ಹೇಳಬಹುದು. ಏಕೆಂದರೆ ಸಂಯೋಜನೆಗಳ ಪ್ರತಿಯೊಂದು ಬಿಂದುವು ಅನುಭೋಗಿಗೆ ಸಮಾನವಾದ ತುಷ್ಟಿಗುಣವನ್ನು ನೀಡುತ್ತದೆ. ಅನುಭೋಗಿಯು ಔದಾಸೀನ್ಯದಿಂದಿರುವ ಸಂಯೋಜನೆಗಳನ್ನು ಪ್ರತಿನಿಧಿಸುವ ಎಲ್ಲಾ ಬಿಂದುಗಳನ್ನು ಸೇರಿಸುವ ರೇಖೆಯೇ ಔದಾಸೀನ್ಯ ವಕ್ರರೇಖೆ. ಔದಾಸೀನ್ಯ ವಕ್ರರೇಖೆಯ ಮೇಲಿರುವ A, B, C, D ಬಿಂದುಗಳು ಅನುಭೋಗಿಗೆ ಒಂದೇ ಮಟ್ಟದ ತೃಪ್ತಿಯನ್ನು ನೀಡುತ್ತವೆ.

ಒಬ್ಬ ಅನುಭೋಗಿಯು ಒಂದು ಹೆಚ್ಚು ಬಾಳೆಹಣ್ಣನ್ನು ಪಡೆದರೆ, ಕೆಲವು ಮಾವಿನ ಹಣ್ಣುಗಳನ್ನು ಬಿಡಲೇಬೇಕಾಗುತ್ತದೆ, ಅಂದರೆ ಅನುಭೋಗಿಯ ಒಟ್ಟು ತುಷ್ಟಿಗುಣದ ಮಟ್ಟ ಹಾಗೆಯೇ ಉಳಿದಿರುತ್ತದೆ ಮತ್ತು ಅನುಭೋಗಿಯು ಅದೇ ಔದಾಸೀನ್ಯ ವಕ್ರರೇಖೆಯ ಮೇಲಿರುತ್ತಾನೆ ಎಂಬುದು ಇದರಿಂದ ಸ್ಪಷ್ಟವಾಗಿದೆ. ಆದ್ದರಿಂದ ಔದಾಸೀನ್ಯ ವಕ್ರರೇಖೆಯ ಇಳಿಜಾರು (ಓಟ) ಇಳಿಮುಖವಾಗಿರುತ್ತದೆ. ಅನುಭೋಗಿಯು ಒಂದು ಹೆಚ್ಚುವರಿ ಬಾಳೆಹಣ್ಣನ್ನು ಪಡೆಯಲು ಒಂದಿಷ್ಟು ಮೊತ್ತದ ಮಾವಿನಹಣ್ಣನ್ನು ಬಿಟ್ಟುಕೊಡಲೇಬೇಕಾದರೂ ಆಕೆಯ ಒಟ್ಟು ತುಷ್ಟಿಗುಣದ ಮಟ್ಟ ಅಷ್ಟೇ ಇರುವುದನ್ನು ಸೀಮಾಂತ ಬದಲಿಕೆಯ ದರ (MRS) ಎಂದು ಕರೆಯುತ್ತೇವೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಅನುಭೋಗಿಯ ಒಟ್ಟು ತುಷ್ಟಿಗುಣ ಸ್ಥಿರವಾಗಿ ಉಳಿದಿರುವಂತೆ ಆಕೆಯು ಮಾವಿನಹಣ್ಣಿಗಾಗಿ ಬದಲಿಸುವ ಬಾಳೆಹಣ್ಣಿನ ಸರಳ ದರವೇ MRS ಆಗಿದೆ. ಆದ್ದರಿಂದ, $MRS = |\triangle y / \triangle x|$[3]




**ರೇಖಾಚಿತ್ರ 2.3 :** ಔದಾಸೀನ್ಯ ವಕ್ರರೇಖೆ: ಔದಾಸೀನ್ಯ ವಕ್ರರೇಖೆಯು ಸಂಯೋಜನೆಗಳನ್ನು ಪ್ರತಿನಿಧಿಸುವ ಎಲ್ಲಾ ಬಿಂದುಗಳನ್ನು ಸೇರಿಸುತ್ತದೆ. ಅವು ಅನುಭೋಗಿಯಿಂದ ಔದಾಸೀನ್ಯದಿಂದ ಪರಿಗಣಿಸಲ್ಪಟ್ಟಿವೆ.

ಕೋಷ್ಟಕ 2.2 ರಲ್ಲಿ ನಾವು ಬಾಳೆಹಣ್ಣಿನ ಪ್ರಮಾಣವನ್ನು ಹೆಚ್ಚಿಸಿದಂತೆ, ಪ್ರತಿ ಹೆಚ್ಚುವರಿ ಬಾಳೆಹಣ್ಣಿಗಾಗಿ ತ್ಯಾಗಮಾಡಬೇಕಾದ ಮಾವಿನ ಹಣ್ಣಿನ ಪ್ರಮಾಣ ಕಡಿಮೆಯಾಗುತ್ತದೆ ಎಂಬುದನ್ನು ಗಮನಿಸಿ. ಬೇರೆ ಮಾತಿನಲ್ಲಿ ಹೇಳುವುದಾದರೆ ಬಾಳೆಹಣ್ಣುಗಳ ಸಂಖ್ಯೆ ಹೆಚ್ಚಾದಂತೆ MRS ಕಡಿಮೆಯಾಗುತ್ತದೆ (ಕ್ಷೀಣಿಸುತ್ತದೆ).

**ಕೋಷ್ಟಕ 2.2. ಇಳಿಮುಖ ಸೀಮಾಂತ ಬದಲಿಕೆಯ (ಪ್ರತಿನಿಧಾನ) ದರ ನಿಯಮದ ನಿರೂಪಣೆ.**

| ಸಂಯೋಜನೆ | ಬಾಳೆಹಣ್ಣಿನ ಪ್ರಮಾಣ (Qx) | ಮಾವಿನ ಹಣ್ಣಿನ ಪ್ರಮಾಣ (Qy) | MRS |
|---|---|---|---|
| A | 1 | 15 | – |
| B | 2 | 12 | 3:1 |
| C | 3 | 10 | 2:1 |
| D | 4 | 9 | 1:1 |

ಅನುಭೋಗಿಯ ಬಳಿ ಬಾಳೆಹಣ್ಣಿನ ಸಂಖ್ಯೆ ಹೆಚ್ಚಾದಂತೆ ಪ್ರತಿ ಹೆಚ್ಚುವರಿ ಬಾಳೆಹಣ್ಣಿನಿಂದ ಪಡೆಯುವ Mu ಕಡಿಮೆಯಾಗುತ್ತದೆ. ಅದೇ ರೀತಿ ಮಾವಿನ ಹಣ್ಣಿನ ಪ್ರಮಾಣ ಕಡಿಮೆಯಾದಂತೆ ಮಾವಿನ ಹಣ್ಣಿನ ಅನುಭೋಗದಿಂದ ಪಡೆಯುವ ಸೀಮಾಂತ ತುಷ್ಟಿಗುಣ ಹೆಚ್ಚಾಗುತ್ತದೆ. ಆದ್ದರಿಂದ ಬಾಳೆಹಣ್ಣಿನ ಸಂಖ್ಯೆ

3 $|\triangle y / x| = \triangle y / \triangle x$ if $(\triangle y / \triangle x) \geq 0$

$= - \triangle y / x$ if $(\triangle y / \triangle x) < 0$

$MRS = |\triangle y / x|$ ಅರ್ಥ MRS, $\triangle y / \triangle x$ ಬೀಜೋಕ್ತಿಯ ಹರವಿಗೆ ಮಾತ್ರ ಸಮನಾಗಿದೆ.

$\triangle y / \triangle x = -3/1$ ಆದರೆ ಇದರ ಅರ್ಥ $MRS = 3$

ಹೆಚ್ಚಾದಂತೆ ಅನುಭೋಗಿಯು ಮಾವಿನ ಹಣ್ಣನ್ನು ಸ್ವಲ್ಪ ಸ್ವಲ್ಪ ಮೊತ್ತದಲ್ಲಿ ತ್ಯಾಗಮಾಡಬೇಕಾದ ಭಾವನೆ ಬರುವುದು. ಬಾಳೆಹಣ್ಣಿನ ಪ್ರಮಾಣದಲ್ಲಿನ ಹೆಚ್ಚಳದೊಂದಿಗೆ ಕಡಿಮೆಯಾಗುವ MRS ಪ್ರವೃತ್ತಿಯೇ ಇಳಿಮುಖ ಸೀಮಾಂತ ಬದಲಿಕೆಯ ದರ ನಿಯಮ. ಇದನ್ನು ರೇಖಾಚಿತ್ರ 2.3 ರಲ್ಲಿ ನೋಡಬಹುದು. A ಬಿಂದುವಿನಿಂದ B ಬಿಂದುವಿಗೆ ಹೋದಂತೆ ಅನುಭೋಗಿಯು 1 ಬಾಳೆಹಣ್ಣಿಗೆ 3 ಮಾವಿನ ಹಣ್ಣುಗಳನ್ನು, B ಬಿಂದುವಿನಿಂದ C ಬಿಂದುವಿಗೆ ಹೋದಂತೆ ಅನುಭೋಗಿಯು 1 ಬಾಳೆಹಣ್ಣಿಗೆ 2 ಮಾವಿನ ಹಣ್ಣಗಳನ್ನು ಮತ್ತು C ಬಿಂದುವಿನಿಂದ D ಬಿಂದುವಿಗೆ ಹೋದಂತೆ ಅನುಭೋಗಿಯು 1 ಬಾಳೆಹಣ್ಣಿಗೆ 1 ಮಾವಿನ ಹಣ್ಣನ್ನು ತ್ಯಾಗ ಮಾಡುತ್ತಾಳೆ. ಹೀಗೆ ಅನುಭೋಗಿಯು ಪ್ರತಿ ಹೆಚ್ಚುವರಿ ಬಾಳೆಹಣ್ಣಿಗೆ ಸ್ವಲ್ಪ, ಮತ್ತಷ್ಟು ಸ್ವಲ್ಪ ಪ್ರಮಾಣದ ಮಾವಿನ ಹಣ್ಣುಗಳನ್ನು ತ್ಯಾಗ ಮಾಡುತ್ತಾಳೆಂಬುದು ಸ್ಪಷ್ಟವಾಗಿದೆ.

### ಔದಾಸೀನ್ಯ ವಕ್ರರೇಖೆಯ ಆಕಾರ : *Shape of an indifference cruve*

ಔದಾಸೀನ್ಯ ವಕ್ರರೇಖೆಯು ಮೂಲಕ್ಕೆ ಪೀನಮಧ್ಯವಾಗಿರಲು ಇಳಿಮುಖ ಸೀಮಾಂತ ಬದಲಿಕೆಯ ದರ ನಿಯಮವೇ ಕಾರಣವೆಂಬುದನ್ನು ಉಲ್ಲೇಖಿಸಬಹುದು. ಇದು ಔದಾಸೀನ್ಯ ವಕ್ರರೇಖೆಯ ಬಹುಸಾಮಾನ್ಯವಾದ ಆಕಾರವಾಗಿದೆ. ಆದರೆ ಸರಕುಗಳು ಪರಿಪೂರ್ಣ ಬದಲಿ ಸರಕುಗಳು[4] ಆಗಿರುವ ಸನ್ನಿವೇಶದಲ್ಲಿ ಸೀಮಾಂತ ಬದಲಿಕೆಯ ದರ ಕಡಿಮೆಯಾಗುವುದಿಲ್ಲ. ಇದು ಒಂದೇ ರೀತಿಯಾಗಿ ಉಳಿಯುತ್ತದೆ. ನಾವು ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ.





**ಕೋಷ್ಟಕ 2.3: ಇಳಿಮುಖ ಸೀಮಾಂತ ಬದಲಿಕೆಯ ದರ ನಿಯಮದ ನಿರೂಪಣೆ**

| ಸಂಯೋಜನೆ | 5 ರೂ ನೋಟುಗಳ ಪ್ರಮಾಣ (Qx) | 5 ರೂ ನಾಣ್ಯಗಳ ಪ್ರಮಾಣ (Qy) | MRS |
|---|---|---|---|
| A | 1 | 8 | – |
| B | 2 | 7 | 1 : 1 |
| C | 3 | 6 | 1 : 1 |
| D | 4 | 5 | 1 : 1 |

ಇಲ್ಲಿ ಒಟ್ಟು ರೂ.5 ರ ನಾಣ್ಯಗಳು ಮತ್ತು ರೂ.5ರ ನೋಟುಗಳ ಎಲ್ಲಾ ಸಂಯೋಜನೆಗಳು ಒಂದೇ ರೀತಿಯಾಗಿರುವವರೆಗೂ ಅನುಭೋಗಿಯು ಔದಾಸೀನ್ಯದಿಂದಿರುತ್ತಾಳೆ. ರೂ.5ರ ನಾಣ್ಯಗಳನ್ನು ಪಡೆಯಬೇಕೋ ಅಥವಾ ರೂ.5ರ ನೋಟುಗಳನ್ನು ಪಡೆಯಬೇಕೋ ಎಂಬುದು ಅನುಭೋಗಿಗೆ ಕಷ್ಟಕರವಾದ ವಿಷಯವಾಗಿದೆ. ಆದ್ದರಿಂದ ಆಕೆಯು ತನ್ನ ಬಳಿ ರೂ.5ರ ಎಷ್ಟು ನೋಟುಗಳನ್ನು ಹೊಂದಿದ್ದಾಳೆಂಬುದನ್ನು ಪರಿಗಣಿಸದೆ ಒಂದು ರೂ.5ರ ನೋಟಿಗೆ ಒಂದೇ ಒಂದು ರೂ.5ರ ನಾಣ್ಯವನ್ನು ತ್ಯಾಗಮಾಡುವಳು. ಆದ್ದರಿಂದ ಈ ಎರಡು ಸರಕುಗಳು ಅನುಭೋಗಿಗೆ ಪರಿಪೂರ್ಣ ಬದಲಿ ಸರಕುಗಳಾಗಿವೆ ಮತ್ತು ಇದು ಔದಾಸೀನ್ಯ ವಕ್ರರೇಖೆಯು ಸರಳ ರೇಖೆಯಾಗುವುದನ್ನು ವ್ಯಕ್ತಪಡಿಸುತ್ತದೆ.




**ರೇಖಾಚಿತ್ರ 2.4 : ಪರಿಪೂರ್ಣ ಬದಲಿಕೆ ಸರಕುಗಳ ಔದಸೀನ್ಯ ವಕ್ರರೇಖೆ:**
2 ಪರಿಪೂರ್ಣ ಬದಲಿ ಸರಕುಗಳ ಔದಸೀನ್ಯ ವಕ್ರರೇಖೆಯು ಸರಳರೇಖೆಯಾಗಿರುತ್ತದೆ ಎಂಬುದನ್ನು ತೋರಿಸುತ್ತದೆ.

ಅನುಭೋಗಿಯು ಒಂದು ಹೆಚ್ಚುವರಿ ರೂ.5ರ ನೋಟನ್ನು ಹೊಂದಲು ಪ್ರತಿ ಬಾರಿಯು ಒಂದೇ ಪ್ರಮಾಣ (ಸಂಖ್ಯೆ) ದ ರೂ.5ರ ನಾಣ್ಯಗಳನ್ನು ತ್ಯಾಗಮಾಡಿರುವುದನ್ನು ರೇಖಾಚಿತ್ರ 2.4 ರಲ್ಲಿ ನೋಡಬಹುದು.

---

4 ಒಂದರ ಬದಲಿಗೆ ಇನ್ನೊಂದನ್ನು ಬಳಸಬಹುದಾದ ಮತ್ತು ಅನುಭೋಗಿಗೆ ಸಮಾನ ಮಟ್ಟದ ತುಷ್ಟಿಗುಣವನ್ನು ನೀಡುವ ಸರಕುಗಳು ಪರಿಪೂರ್ಣ ಬದಲಿ ಸರಕುಗಳಾಗಿವೆ.

## ಏಕತಾನಾತ್ಮಕ ಒಲವು (ಏಕತಾನಾತ್ಮಕ ಆದ್ಯತೆಗಳು) *Monotonic preferences*

ಯಾವುದೇ ಎರಡು $(x_1, x_2)$ ಮತ್ತು $(y_1, y_2)$ ಸಂಯೋಜನೆಗಳ ನಡುವೆ ಅನುಭೋಗಿಯ ಅದ್ಯತೆಗಳು ಹೇಗಿರುತ್ತವೆಂದರೆ, ಒಂದು ವೇಳೆ $(x_1, x_2)$ ಸಂಯೋಜನೆಯನ್ನು $(y_1, y_2)$ ಸಂಯೋಜನೆಗೆ ಹೋಲಿಸಿದಾಗ ಕೊನೆಯ ಪಕ್ಷ ಒಂದು ಸರಕನ್ನು ಹೆಚ್ಚಾಗಿ ಮತ್ತು ಇನ್ನೊಂದು ಸರಕನ್ನು ಕಡಿಮೆಯಾಗದಂತೆ ಹೊಂದಿದ್ದರೆ, ಆಗ ಅನುಭೋಗಿಯು $(y_1, y_2)$ಗೆ ಬದಲಾಗಿ $(x_1, x_2)$ ಗೆ ಅದ್ಯತೆ ತೋರುತ್ತಾಳೆ. ಈ ರೀತಿಯ ಅದ್ಯತೆಗಳನ್ನು **ಏಕತಾನಾತ್ಮಕ ಒಲವು** ಎನ್ನುತ್ತೇವೆ. ಹೀಗೆ ಯಾವುದೇ ಎರಡು ಸಂಯೋಜನೆಗಳ ನಡುವೆ ಅನುಭೋಗಿಯು ಕೊನೆಪಕ್ಷ ಒಂದು ಸರಕು ಹೆಚ್ಚಾಗಿರುವ ಮತ್ತು ಇನ್ನೊಂದು ಸರಕು ಎರಡನೆ ಸಂಯೋಜನೆಗಿಂತ ಕಡಿಮೆಯಾಗದಂತಿರುವ ಸಂಯೋಜನೆಗೆ ಅದ್ಯತೆ ನೀಡಿದಾಗ ಮಾತ್ರ ಅನುಭೋಗಿಯ ಒಲವು ಏಕತಾನಾತ್ಮಕವಾಗಿರುತ್ತದೆ.

## ಔದಾಸೀನ್ಯ ವಕ್ರರೇಖೆ ನಕ್ಷೆ *Indifference Map*

ರೇಖಾ ಚಿತ್ರ 2.5ರಲ್ಲಿ ತೋರಿಸಿರುವಂತೆ ಎಲ್ಲಾ ಸಂಯೋಜನೆಗಳ ಮೇಲೆ ಅನುಭೋಗಿಗೆ ಇರುವ ಆದ್ಯತೆಗಳನ್ನು ಔದಾಸೀನ್ಯ ವಕ್ರರೇಖೆಗಳ ಕುಟುಂಬದಿಂದ (ಗುಂಪಿನಿಂದ) ಪ್ರತಿನಿಧಿಸಬಹುದಾಗಿದೆ. ಇದನ್ನು ಅನುಭೋಗಿಯ ಔದಾಸೀನ್ಯ ವಕ್ರರೇಖೆಗಳ ನಕ್ಷೆ ಎನ್ನುತ್ತೇವೆ. ಔದಸೀನ್ಯ ವಕ್ರರೇಖೆಯ ಮೇಲಿರುವ ಎಲ್ಲಾ ಬಿಂದುಗಳು, ಅನುಭೋಗಿಯು ಔದಾಸೀನ್ಯತೆ ಹೊಂದಿರುವ ಸಂಯೋಜನೆಗಳನ್ನು ಪ್ರತಿನಿಧಿಸುತ್ತದೆ. ಯಾವುದೇ ಎರಡು ಔದಾಸೀನ್ಯ ವಕ್ರರೇಖೆಗಳಲ್ಲಿ ಕೆಳಗಿರುವ ಔದಸೀನ್ಯ ವಕ್ರರೇಖೆಗಿಂತ ಮೇಲಿರುವ ಔದಾಸೀನ್ಯ ವಕ್ರರೇಖೆಗೆ ಆದ್ಯತೆ ನೀಡಲಾಗುತ್ತದೆ ಎಂಬುದನ್ನು ಆದ್ಯತೆಗಳ ಏಕತಾನಾತ್ಮಕತೆಯು ತಿಳಿಸುತ್ತದೆ.




**ರೇಖಾಚಿತ್ರ 2.5: ಔದಾಸೀನ್ಯ ನಕ್ಷೆ:** ಔದಾಸೀನ್ಯ ವಕ್ರರೇಖೆಗಳ ಒಂದು ಕುಟುಂಬ ಕೆಳಗಿನ ಔದಾಸೀನ್ಯ ವಕ್ರರೇಖೆಗಳಗಿಂತ ಎತ್ತರದ ಔದಾಸೀನ್ಯ ವಕ್ರರೇಖೆಗಳಿಗೆ ಅನುಭೋಗಿಯು ಅದ್ಯತೆ ನೀಡುತ್ತಾಳೆಂಬುದನ್ನು ಬಾಣದ ಗುರುತು ತೋರಿಸುತ್ತದೆ

## ಔದಾಸೀನ್ಯ ವಕ್ರರೇಖೆಯ ಲಕ್ಷಣಗಳು

1. **ಔದಾಸೀನ್ಯ ವಕ್ರರೇಖೆಯು ಎಡದಿಂದ ಬಲಕ್ಕೆ ಇಳಿಮುಖವಾಗಿರುತ್ತದೆ.**

   ಒಂದು ಔದಾಸೀನ್ಯ ವಕ್ರರೇಖೆಯು ಎಡದಿಂದ ಬಲಕ್ಕೆ ಇಳಿಮುಖವಾಗಿರುತ್ತದೆ, ಇದರ ಅರ್ಥವೆಂದರೆ ಒಬ್ಬ ಅನುಭೋಗಿಯು ಹೆಚ್ಚು ಬಾಳೆಹಣ್ಣುಗಳನ್ನು ಪಡೆಯಲು, ಕೆಲವು ಮಾವಿನ ಹಣ್ಣುಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಅನುಭೋಗಿಯು ಬಾಳೆಹಣ್ಣಿನ ಸಂಖ್ಯೆಗಳ ಹೆಚ್ಚಳದೊಂದಿಗೆ ಕೆಲವು ಮಾವಿನ ಹಣ್ಣುಗಳನ್ನು ಬಿಟ್ಟುಕೊಡದಿದ್ದರೆ, ಅನುಬೋಗಿಯು ಹೆಚ್ಚು ಬಾಳೆಹಣ್ಣುಗಳನ್ನು ಹೊಂದುವುದರ ಜೊತೆಗೆ ಅಷ್ಟೇ ಸಂಖ್ಯೆಯ ಮಾವಿನಹಣ್ಣುಗಳನ್ನು




**ರೇಖಾಚಿತ್ರ 2.6: ಔದಾಸೀನ್ಯ ವಕ್ರರೇಖೆಯ ಇಳಿಜಾರು:** ಇಳಿಜಾರು ಇಳಿಮುಖವಾಗಿರುತ್ತದೆ. ಔದಾಸೀನ್ಯ ವಕ್ರರೇಖೆಯ ಉದ್ದಕ್ಕೂ ಬಾಳೆಹಣ್ಣುಗಳ ಮೊತ್ತದ ಹೆಚ್ಚಳವು, ಕಡಿಮೆಯಾಗುತ್ತಿರುವ ಮಾವಿನ ಹಣ್ಣುಗಳ ಮೊತ್ತದೊಂದಿಗೆ ಸಂಬಂದಿಸಿದೆ. $\Delta x_1 > 0$ ಆದರೆ $\Delta x_2 < 0$ ಆಗುತ್ತದೆ

ಹೊಂದಿರುತ್ತಾಳೆ. ಮತ್ತು ಆಕೆಯು ಎತ್ತರದ ಔದಸೀನ್ಯ ರೇಖೆಯ ಕಡೆಗೆ ಚಲಿಸುತ್ತಾಳೆ ಎಂಬುದು ಇದರ ಅರ್ಥವಾಗಿದೆ.

ಹೀಗೆ ಅನುಭೋಗಿಯು ಒಂದೇ ಔದಸೀನ್ಯ ರೇಖೆಯ ಮೇಲೆ ಇರುವವರೆಗೂ ಬಾಳೆಹಣ್ಣಿನ ಹೆಚ್ಚಳವನ್ನು ಮಾವಿನ ಹಣ್ಣುಗಳ ಪ್ರಮಾಣವನ್ನು ಕಡಿಮೆಮಾಡುವುದರಿಂದ ಸರಿದೂಗಿಸಬೇಕಾಗುತ್ತದೆ

**2. ಎತ್ತರದ ಔದಾಸೀನ್ಯ ವಕ್ರರೇಖೆಯು ಹೆಚ್ಚಿನ ಮಟ್ಟದ ತುಷ್ಟಿಗುಣವನ್ನು ನೀಡುತ್ತದೆ:**

ಎಲ್ಲಿಯವರೆಗೂ ಒಂದು ಸರಕಿನ ತುಷ್ಟಿಗುಣವು ಧನಾತ್ಮಕವಾಗಿರುತ್ತದೆಯೋ ಅಲ್ಲಿಯವರೆಗೂ ಒಬ್ಬ ವ್ಯಕ್ತಿಯು ಯಾವಾಗಲೂ ಅ ಸರಕಿಗೆ ಹೆಚ್ಚು ಆದ್ಯತೆ ತೋರಿಸುವನು. ಆ ಸರಕು ಹೆಚ್ಚಾದಂತೆ ತೃಪ್ತಿಯ ಮಟ್ಟವು ಹೆಚ್ಚುವುದು

**ಕೋಷ್ಟಕ 2.4 : ಒಂದು ಸರಕಿನ ವಿಬಿನ್ನ ಸಂಯೋಜನೆಗಳಿಂದ ಪಡೆದ ವಿಭಿನ್ನ ಮಟ್ಟದ ತುಷ್ಟಿಗುಣದ ನಿರೂಪಣೆ.**

| ಸಂಯೋಜನೆ | ಬಾಳೆಹಣ್ಣುಗಳ ಪ್ರಮಾಣ | ಮಾವಿನಹಣ್ಣುಗಳ ಪ್ರಮಾಣ |
|---|---|---|
| A | 1 | 10 |
| B | 2 | 10 |
| C | 3 | 10 |

ಕೋಷ್ಟಕ 2.4 ಮತ್ತು ರೇಖಾಚಿತ್ರ 2.7ರಲ್ಲಿ ವ್ಯಕ್ತಪಡಿಸಿರುವ ಬಾಳೆಹಣ್ಣುಗಳು ಮತ್ತು ಮಾವಿನ ಹಣ್ಣುಗಳ ವಿವಿಧ ಸಂಯೋಜನೆಗಳಾದ *A*, *B* ಮತ್ತು *C* ಗಳನ್ನು ಗಮನಿಸಿ. *A*, *B* ಮತ್ತು *C* ಸಂಯೋಜನೆಗಳು ಒಂದೇ ಪ್ರಮಾಣದ ಮಾವಿನ ಹಣ್ಣುಗಳನ್ನು ಆದರೆ ವಿವಿಧ ಪ್ರಮಾಣದ ಬಾಳೆಹಣ್ಣುಗಳನ್ನು ಒಳಗೊಂಡಿವೆ. *A* ಸಂಯೋಜನೆಗಿಂತ *B* ಸಂಯೋಜನೆಯು ಹೆಚ್ಚು ಬಾಳೆಹಣ್ಣುಗಳನ್ನು ಹೊಂದಿರುವುದರಿಂದ *A* ಗಿಂತ *B* ಯು ವ್ಯಕ್ತಿಗೆ ಅಧಿಕ ಮಟ್ಟದ ತೃಪ್ತಿಯನ್ನು ನೀಡುತ್ತದೆ. ಆದ್ದರಿಂದ *B* ಸಂಯೋಜನೆಯು *A* ಗಿಂತ ಎತ್ತರದ ಔದಾಸೀನ್ಯ ವಕ್ರರೇಖೆಯ ಮೇಲಿರುತ್ತದೆ ಮತ್ತು ಹೆಚ್ಚಿನ ತೃಪ್ತಿಯನ್ನು ವ್ಯಕ್ತಪಡಿಸುತ್ತದೆ. ಇದೇ ರೀತಿ *C* ಯು *B* ಗಿಂತ ಹೆಚ್ಚಿನ ಬಾಳೆಹಣ್ಣುಗಳನ್ನು ಹೊಂದಿದೆ (ಮಾವಿನ ಹಣ್ಣುಗಳ ಪ್ರಮಾಣ *B* ಮತ್ತು *C* ನಲ್ಲಿ ಒಂದೇಯಾಗಿದೆ) ಆದ್ದರಿಂದ *B* ಗಿಂತ *C* ಯು ಅಧಿಕ ಮಟ್ಟದ ತೃಪ್ತಿಯನ್ನು ನೀಡುತ್ತದೆ. ಮತ್ತು ಅದು *B* ಗಿಂತಲೂ ಎತ್ತರದ ಔದಾಸೀನ್ಯ ವಕ್ರರೇಖೆಯ ಮೇಲಿರುತ್ತದೆ.




**ರೇಖಾಚಿತ್ರ 2.7 : ಎತ್ತರದ ಔದಸೀನ್ಯ ವಕ್ರರೇಖೆಗಳು ಅಧಿಕ ತುಷ್ಟಿಗುಣವನ್ನು ನೀಡುತ್ತವೆ.**

ಎತ್ತರದ ಔದಾಸೀನ್ಯ ವಕ್ರರೇಖೆಯು ಹೆಚ್ಚು ಮಾವಿನ ಹಣ್ಣುಗಳನ್ನು ಅಥವಾ ಹೆಚ್ಚು ಬಾಳೆಹಣ್ಣುಗಳನ್ನು ಅಥವಾ ಎರಡನ್ನು ಹೆಚ್ಚಾಗಿ ಹೊಂದಿರುವ ಸಂಯೋಜನೆಗಳನ್ನು ಒಳಗೊಂಡಿರುತ್ತದೆ. ಮತ್ತು ಅಧಿಕಮಟ್ಟದ ತೃಪ್ತಿ ನೀಡುವ ಸಂಯೋಜನೆಗಳನ್ನು ವ್ಯಕ್ತಪಡಿಸುತ್ತದೆ.

**3. ಎರಡು ಔದಾಸೀನ್ಯ ವಕ್ರರೇಖೆಗಳು ಎಂದಿಗೂ ಒಂದನ್ನೊಂದು ಛೇದಿಸುವುದಿಲ್ಲ.**

ಎರಡು ಔದಾಸೀನ್ಯ ರೇಖೆಗಳು ಪರಸ್ಪರ ಛೇದಿಸಿದರೆ ಘರ್ಷಣಾತ್ಮಕ ಫಲಿತಾಂಶ ಬರುತ್ತದೆ. ಇದನ್ನು ವಿವರಿಸಲು ರೇಖಾಚಿತ್ರ 2.8ರಲ್ಲಿ ತೋರಿಸಿರುವಂತೆ ನಾವು ಎರಡು ಔದಾಸೀನ್ಯ ವಕ್ರರೇಖೆಗಳು ಒಂದು

ಇನ್ನೊಂದನ್ನು ಛೇದಿಸುವಂತೆ ಮಾಡೋಣ. $IC_1$ ಔದಾಸೀನ್ಯ ರೇಖೆಯ ಮೇಲೆಯೇ *A* ಮತ್ತು *B* ಬಿಂದುಗಳಿವೆ. ಹಾಗೂ *A* ಸಂಯೋಜನೆಯಿಂದ ಮತ್ತು *B* ಸಂಯೋಜನೆಯಿಂದ ಪಡೆದ ತುಷ್ಟಿಗುಣವು ಸಮನಾದ ತೃಪ್ತಿಯನ್ನು ನೀಡುತ್ತವೆ. ಅದೇ ರೀತಿ $IC_2$ ಔದಾಸೀನ್ಯ ರೇಖೆಯ ಮೇಲೆ *A* ಮತ್ತು *C* ಬಿಂದುಗಳಿವೆ. *A* ಸಂಯೋಜನೆ ಮತ್ತು *C* ಸಂಯೋಜನೆಗಳಿಂದ ಪಡೆದ ತುಷ್ಟಿಗುಣವು ಒಂದೇ ಮಟ್ಟದ ತೃಪ್ತಿಯನ್ನು ನೀಡುವುವು.




**ರೇಖಾಚಿತ್ರ 2.8 : ಎರಡು ಔದಾಸೀನ್ಯ ವಕ್ರರೇಖೆಗಳು ಎಂದಿಗೂ ಒಂದನ್ನೊಂದು ಛೇದಿಸುವುದಿಲ್ಲ.**

ಇದರಿಂದ *B* ಮತ್ತು *C* ಬಿಂದುಗಳಿಂದ ಬಂದ ತುಷ್ಟಿಗುಣವು ಒಂದೇ ಆಗಿರುವುದು. ಆದರೆ ಈ ಫಲಿತಾಂಶವು ಅಸಂಬದ್ಧವಾಗಿದೆ, ಏಕೆಂದರೆ *B* ಬಿಂದುವಿನಲ್ಲಿ ಅನುಭೋಗಿಯು ಅಷ್ಟೇ ಪ್ರಮಾಣದ ಬಾಳೆಹಣ್ಣುಗಳೊಂದಿಗೆ ಅಧಿಕ ಸಂಖ್ಯೆಯ ಮಾವಿನ ಹಣ್ಣುಗಳನ್ನು ಪಡೆಯುತ್ತಾಳೆ. ಆದ್ದರಿಂದ ಅನುಭೋಗಿಯು *C* ಬಿಂದುವಿಗಿಂತ *B* ಬಿಂದುವಿನಲ್ಲಿ ಉತ್ತಮವಾಗಿರುತ್ತಾಳೆ. ಹೀಗೆ ಒಂದು ಇನ್ನೊಂದನ್ನು ಛೇದಿಸುವ ಔದಾಸೀನ್ಯ ರೇಖೆಗಳು ವಿರುದ್ಧವಾದ (ಘರ್ಷಣಾತ್ಮಕ) ಫಲಿತಾಂಶ ನೀಡುತ್ತವೆ. ಆದ್ದರಿಂದ ಎರಡು ಔದಾಸೀನ್ಯ ವಕ್ರರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ.

## 2.2 ಅನುಭೋಗಿಯ ಬಜೆಟ್ *The Consumer's Budget*

ಒಬ್ಬ ಅನುಭೋಗಿಯು ನೀಡಿದ ಬೆಲೆಯಲ್ಲಿ ಲಭ್ಯವಿರುವ ಎರಡು ಸರಕುಗಳನ್ನು ಕೊಂಡುಕೊಳ್ಳಲು ನಿರ್ದಿಷ್ಟ ಮೊತ್ತದ ಹಣವನ್ನು (ಆದಾಯವನ್ನು) ಹೊಂದಿರುತ್ತಾಳೆಂದು ಭಾವಿಸೋಣ. ಆ ಅನುಭೋಗಿಗೆ ತಾನು ಬಯಸಿದ ಎರಡು ಸರಕುಗಳ ಎಲ್ಲಾ ಸಂಯೋಜನೆಗಳನ್ನು ಕೊಂಡುಕೊಳ್ಳುವುದು ಸಾಧ್ಯವಿಲ್ಲ. ಅನುಭೋಗಿಗೆ ಲಭ್ಯವಿರುವ ಎರಡು ಸರಕುಗಳ ಸಂಯೋಜನೆಗಳು ಆ ಎರಡು ಸರಕುಗಳ ಬೆಲೆ ಮತ್ತು ಅನುಭೋಗಿಯ ಆದಾಯವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಅನುಭೋಗಿಯ ಬಜೆಟ್, ಅನುಭೋಗಿ ಹೊಂದಿರುವ ನಿರ್ದಿಷ್ಟ ಆದಾಯ ಮತ್ತು ನಿರ್ದಿಷ್ಟ ಬೆಲೆಗಳಲ್ಲಿ ಕೊಂಡುಕೊಳ್ಳಬಹುದಾದ ನಿರ್ದಿಷ್ಟ ಪ್ರಮಾಣದ ಎರಡು ಸರಕುಗಳ ಸಂಯೋಜನೆಗಳನ್ನು ತಿಳಿಸುತ್ತದೆ. ಅಂದರೆ ಅನುಭೋಗಿಯು ತನ್ನ ಆದಾಯಕ್ಕೆ ಸಮನಾದ ಅಥವಾ ಅದಕ್ಕಿಂತ ಕಡಿಮೆ ವೆಚ್ಚದ ಸರಕುಗಳ ಸಂಯೋಜನೆಗಳನ್ನು ಮಾತ್ರ ಕೊಂಡುಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾಳೆ.

### 2.2.1 ಬಜೆಟ್ ಗಣ ಮತ್ತು ಬಜೆಟ್ ರೇಖೆ *Budget set and Budget line*

ಒಬ್ಬ ಅನುಭೋಗಿಯ ಆದಾಯ '*M*' ಆಗಿದೆಯೆಂದು, ಮತ್ತು ಬಾಳೆಹಣ್ಣು ಹಾಗೂ ಮಾವಿನಹಣ್ಣುಗಳ ಬೆಲೆಗಳು ಅನುಕ್ರಮವಾಗಿ $p_1$ ಮತ್ತು $p_2$ ಆಗಿದೆಯೆಂದು ಭಾವಿಸೋಣ[5]. ಆ ಅನುಭೋಗಿಯು $x_1$ ಪ್ರಮಾಣದಷ್ಟು ಬಾಳೆಹಣ್ಣನ್ನು ಕೊಂಡುಕೊಳ್ಳಲು ಬಯಸಿದರೆ $p_1x_1$ ಮೊತ್ತದ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಅದೇ ರೀತಿ ಅನುಭೋಗಿಯು ಮಾವಿನಹಣ್ಣನ್ನು $x_2$ ಪ್ರಮಾಣದಷ್ಟು ಕೊಂಡುಕೊಳ್ಳಲು ಬಯಸಿದರೆ $p_2x_2$ ಮೊತ್ತದ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಅನುಭೋಗಿಯು $x_1$ ಪ್ರಮಾಣದಷ್ಟು ಬಾಳೆಹಣ್ಣು $x_2$ ಪ್ರಮಾಣದಷ್ಟು ಮಾವಿನಹಣ್ಣಿನ ಸಂಯೋಜನೆಯನ್ನು (*Bundle*) ಕೊಂಡುಕೊಳ್ಳಲು

[5] ಒಂದು ಸರಕಿನ ಬೆಲೆಯೆಂದರೆ, ಅನುಭೋಗಿಯು ತಾನು ಕೊಂಡುಕೊಳ್ಳಲು ಬಯಸುವ ಸರಕಿನ ಒಂದು ಯೂನಿಟ್‌ಗೆ ಪಾವತಿ ಮಾಡಬಹುದಾದ ಹಣದ ಮೊತ್ತ ಸರಕಿನ ಪ್ರಮಾಣವನ್ನು ಕಿಲೋಗ್ರಾಂಗಳಲ್ಲಿ ಮತ್ತು ಹಣವನ್ನು ರೂಪಾಯಿಗಳಲ್ಲಿ ವ್ಯಕ್ತಪಡಿಸಿದರೆ, ಬಾಳೆಹಣ್ಣಿನ ಬೆಲೆಯು $P_1$, ಅಂದರೆ ಅನುಭೋಗಿಯು ಕೊಂಡುಕೊಳ್ಳಲು ಬಯಸುವ 1 ಕಿಲೋಗ್ರಾಂ ಬಾಳೆಹಣ್ಣಿನ ಬೆಲೆಯು $P_1$ ಆಗಿರುತ್ತದೆ.

ಬಯಸಿದರೆ, $p_1x_1+P_2x_2$ ಮೊತ್ತದ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಅನುಭೋಗಿಯು $p_1x_1+p_2x_2$ ಮೊತ್ತದ ಆದಾಯವನ್ನು ಹೊಂದಿದ್ದಾಗ ಮಾತ್ರ ಅನುಭೋಗಿಗೆ ಈ ಸರಕುಗಳ ಸಂಯೋಜನೆಯನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತದೆ. ಅನುಭೋಗಿಯು ತನ್ನ ನಿರ್ದಿಷ್ಟ ಆದಾಯದಲ್ಲಿ ಮತ್ತು ನಿರ್ದಿಷ್ಟ ಬೆಲೆಗಳಲ್ಲಿ ಕೊಂಡುಕೊಳ್ಳಬಹುದಾದ ಎರಡು ಸರಕುಗಳ ವಿವಿಧ ಸಂಯೋಜನೆಗಳನ್ನು ತನ್ನ ಆದಾಯಕ್ಕೆ ಸಮನಾಗುವವರೆಗೂ ಅಥವಾ ಆದಾಯಕ್ಕಿಂತ ಕಡಿಮೆಯಿರುವವರೆಗೂ ಆಯ್ಕೆ ಮಾಡಿಕೊಳ್ಳಬಹುದು. ಇನ್ನೊಂದು ಅರ್ಥದಲ್ಲಿ, $(x_1,x_2)$ ಸಂಯೋಜನೆಯು ಯಾವುದೇ ಸಂಯೋಜನೆಗಳನ್ನು,

$$p_1x_1+p_2x_2 \leq M \tag{2.1}$$

ಆಗಿರುವಂತೆ ಕೊಂಡುಕೊಳ್ಳಬಹುದು.

[2.1]ರಲ್ಲಿನ ಅಸಮಾನತೆಯನ್ನು ಅನುಭೋಗಿಯ **ಬಜೆಟ್ ಮಿತಿಯೆಂದು** ಕರೆಯಲಾಗುತ್ತದೆ. **ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳ ಸಮೂಹವನ್ನು ಬಜೆಟ್ ಗಣ** ಎನ್ನುತ್ತೇವೆ. ಪ್ರಸ್ತುತ ಮಾರುಕಟ್ಟೆ ಬೆಲೆಗಳಲ್ಲಿ ಅನುಭೋಗಿಯು ತನ್ನ ಆದಾಯದಿಂದ ಕೊಂಡುಕೊಳ್ಳಬಹುದಾದ ಎಲ್ಲಾ ಸಂಯೋಜನೆಗಳ ಸಂಗ್ರಹವೇ ಬಜೆಟ್ ಗಣವಾಗಿದೆ.

### ಉದಾಹರಣೆ 2.1

ಒಬ್ಬ ಅನುಭೋಗಿಯು ₹20 ಆದಾಯವನ್ನು ಹೊಂದಿದ್ದಾಳೆಂದುಕೊಳ್ಳೋಣ. ಎರಡು ಸರಕುಗಳ ಬೆಲೆ ₹5 ಆಗಿದೆ ಮತ್ತು ಅವುಗಳು ಕೇವಲ ಪೂರ್ಣ ಘಟಕಗಳಲ್ಲಿ ಮಾತ್ರ ಲಭ್ಯವಿದೆ ಎಂದುಕೊಳ್ಳೋಣ. ಈ ನಿರ್ದಿಷ್ಟ ಆದಾಯ ಮತ್ತು ನಿರ್ದಿಷ್ಟ ಬೆಲೆಯಲ್ಲಿ ಅನುಭೋಗಿಯು ಕೊಂಡುಕೊಳ್ಳಬಹುದಾದ ಅನುಭೋಗದ ಸಂಯೋಜನೆಗಳು (0,0), (0,1), (0,2), (0,3), (0,4), (1,0), (1,1), (1,2), (1,3), (2,0), (2,1), (2,2), (3,0), (3,1) ಮತ್ತು (4,0) ಆಗಿರುತ್ತದೆ. ಈ ಸಂಯೊಜನೆಗಳಲ್ಲಿ (0,4), (1,3), (2,2), (3,1) ಮತ್ತು (4,0) ಸಂಯೋಜನೆಗಳ ಮೇಲೆ ಮಾಡಿದ ವೆಚ್ಚವು, ಅನುಭೋಗಿಯು ಹೊಂದಿರುವ ₹20 ಆದಾಯಕ್ಕೆ ಸಮನಾಗಿದೆ. ಆದರೆ ಉಳಿದ ಎಲ್ಲಾ ಸಂಯೋಜನೆಗಳು ಅನುಭೋಗಿಯ ₹20 ಆದಾಯಕ್ಕಿಂತಲೂ ಕಡಿಮೆ ವೆಚ್ಚವನ್ನು ವ್ಯಕ್ತಪಡಿಸುತ್ತವೆ. ಹಾಗೆಯೇ ಪ್ರಚಲಿತ ಬೆಲೆಗಳಲ್ಲಿ (3,3) ಮತ್ತು (4,5) ಅನುಭೋಗದ ಸಂಯೋಜನೆಗಳು ಅನುಭೋಗಿಯ ₹20 ಆದಾಯಕ್ಕಿಂತಲೂ ಹೆಚ್ಚಿನ ವೆಚ್ಚದ್ದಾಗಿವೆ. ಈ ಸಂಯೋಜನೆಗಳನ್ನು ಅನುಭೋಗಿಗೆ ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ.

ಒಂದು ವೇಳೆ ಎರಡು ಸರಕುಗಳು ಪರಿ ಪೂರ್ಣವಾಗಿ ವಿಭಜಿಸಲಾಗುವ[6] ಸರಕುಗಳಾಗಿ ಇದ್ದರೆ ಅನುಭೋಗಿಯ ಬಜೆಟ್‌ಗಣವು ಎಲ್ಲಾ $(x_1, x_2)$ ಸಂಯೋಜನೆಗಳನ್ನು ಒಳಗೊಂಡಿರುತ್ತದೆ. ಅಂದರೆ ಶೂನ್ಯಕ್ಕೆ ಸಮನಾದ ಅಥವಾ ಶೂನ್ಯಕ್ಕಿಂತ ಹೆಚ್ಚಾಗಿರುವ ಯಾವುದೇ ಸಂಖ್ಯೆಯು $x_1$ ಮತ್ತು $x_2$ ಘಟಕಗಳು ಆಗಿರಬಹುದು ಮತ್ತು $p_1x_1+p_2x_2 \leq M$ ಆಗಿರುತ್ತದೆ. ರೇಖಾಚಿತ್ರ 2.9 ರಲ್ಲಿ ಬಜೆಟ್ ಗಣವನ್ನು ಪ್ರತಿನಿಧಿಸಲಾಗಿದೆ.




**ರೇಖಾಚಿತ್ರ 2.9 ಬಜೆಟ್ ಗಣ :** ಬಾಳೆಹಣ್ಣುಗಳ ಪ್ರಮಾಣವನ್ನು *ox* ತಲಾಕ್ಷದಲ್ಲಿ ಮಾವಿನಹಣ್ಣುಗಳ ಪ್ರಮಾಣವನ್ನು *oy* ಲಂಬಾಕ್ಷದಲ್ಲಿ ಮಾಪನ ಮಾಡಲಾಗಿದೆ. ಈ ರೇಖೆದಲ್ಲಿನ ಯಾವುದೇ ಬಿಂದುವು ಎರಡು ಸರಕುಗಳ ಒಂದು ಸಂಯೋಜನೆಯನ್ನು ವ್ಯಕ್ತಪಡಿಸುತ್ತವೆ. $p_1x_1 + p_2x_2 = M$ ಸಮೀಕರಣವನ್ನು ಹೊಂದಿರುವ ಸರಳರೇಖೆಯ ಮೇಲ್ಭಾಗದಲ್ಲಿ ಅಥವಾ ಕೆಳಭಾಗದಲ್ಲಿ ಬರುವ ಎಲ್ಲಾ ಬಿಂದುಗಳನ್ನು ಬಜೆಟ್ ಗಣ ಒಳಗೊಂಡಿರುತ್ತದೆ.

ಧನಾತ್ಮಕ ಪಾದದಲ್ಲಿರುವ ರೇಖೆಯ ಮೇಲಿರುವ ಅಥವಾ ಕೆಳಭಾಗದಲ್ಲಿರುವ ಎಲ್ಲಾ ಸಂಯೋಜನೆಗಳನ್ನು ಬಜೆಟ್ ಗಣವು ಒಳಗೊಂಡಿರುತ್ತದೆ. ಈ ರೇಖೆಯ ಸಮೀಕರಣವು

$$p_1x_1+p_2x_2 = M \text{ ಆಗಿರುತ್ತದೆ.} \tag{2.2}$$

[6] ಉದಾಹರಣೆ 2.1 ರಲ್ಲಿ ಕೊಟ್ಟಿರುವ ಸರಕುಗಳನ್ನು ವಿಭಜಿಸಲು ಸಾಧ್ಯವಿಲ್ಲ. ಅವುಗಳು ಪೂರ್ಣ ಪ್ರಮಾಣದಲ್ಲಿ ಮಾತ್ರ ಲಭ್ಯವಿರುತ್ತವೆ. ಹಲವಾರು ಸರಕುಗಳು ವಿಭಜಿಸುವ ರೂಪದಲ್ಲೂ ಲಭ್ಯವಿರುತ್ತವೆ. ಅರ್ಧ ಕಿತ್ತಳೆಹಣ್ಣನ್ನು, ಕಾಲುಭಾಗ ಬಾಳೆಹಣ್ಣನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ಆದರೆ ಅರ್ಧ ಕಿಲೋಗ್ರಾಂ ಅಕ್ಕಿಯನ್ನು, 1/4 ಲೀಟರ್ ಹಾಲನ್ನು ಖಂಡಿತವಾಗಿಯೂ ಕೊಂಡುಕೊಳ್ಳಬಹುದು.

ಈ ರೇಖೆಯು ಎಲ್ಲಾ ಸಂಯೋಜನೆಗಳನ್ನು ಒಳಗೊಂಡಿದ್ದು ಅವುಗಳ ವೆಚ್ಚ '$M$' ಗೆ ($M$ ಆದಾಯಕ್ಕೆ) ಸಮನಾಗಿರುತ್ತದೆ. ಈ ರೇಖೆಯನ್ನು **ಬಜೆಟ್ ರೇಖೆ** ಎಂದು ಕರೆಯಲಾಗುತ್ತದೆ. ಬಜೆಟ್ ರೇಖೆಯ ಕೆಳಭಾಗದಲ್ಲಿ ಬರುವ ಸಂಯೋಜನೆಗಳು ಅನುಭೋಗಿಯು ಕೊಂಡುಕೊಳ್ಳಬಹುದಾದ '$M$' ಆದಾಯಕ್ಕಿಂತಲೂ ಕಡಿಮೆ ವೆಚ್ಚದ ಸಂಯೋಜನೆಗಳನ್ನು ವ್ಯಕ್ತಪಡಿಸುತ್ತವೆ.

ಸಮೀಕರಣ 2.2 ನ್ನು ಈ ಕೆಳಗಿನಂತೆಯೂ ಸಹ ಬರೆಯಬಹುದು[7]

$$x_2 = \frac{M}{p_2} - \frac{p_1}{p_2} x_1 \qquad (2.3)$$

ಬಜೆಟ್ ರೇಖೆಯು ಒಂದು ಸರಳ ರೇಖೆಯಾಗಿದ್ದು $\frac{M}{p_1}$ ಸಮಾನಾಂತರ ಛೇದಕವನ್ನು, ಮತ್ತು $\frac{M}{p_2}$ ಲಂಬಾಂತರ ಛೇದಕವನ್ನು ಹೊಂದಿರುತ್ತದೆ. ಅನುಭೋಗಿಯು ತನ್ನ ಇಡೀ ಆದಾಯವನ್ನು ಬಾಳೆಹಣ್ಣನ್ನು ಕೊಳ್ಳಲು ಖರ್ಚು ಮಾಡಿದಾಗ ಕೊಂಡುಕೊಳ್ಳಬಹುದಾದ ಸಂಯೋಜನೆಯನ್ನು ಸಮನಾಂತರ ಛೇದಕವು ಪ್ರತಿನಿಧಿಸುತ್ತದೆ. ಅದೇ ರೀತಿ ಇಡೀ ಆದಾಯವನ್ನು ಮಾವಿನಹಣ್ಣನ್ನು ಕೊಳ್ಳಲು ಖರ್ಚು ಮಾಡಿದರೆ ಆ ಅನುಭೋಗಿಯು ಕೊಂಡುಕೊಳ್ಳಬಹುದಾದ ಸಂಯೋಜನೆಯನ್ನು ಲಂಬಾಂತರ ಛೇದಕವು ಪ್ರತಿನಿಧಿಸುತ್ತದೆ. ಹಾಗೆಯೇ ಲಂಬಾಂತರ ಛೇದಕವು ಮಾವಿನಹಣ್ಣನ್ನು ಸಂಪೂರ್ಣವಾಗಿ ಕೊಂಡುಕೊಳ್ಳಬಹುದಾದ ಸಂಯೋಜನೆಯನ್ನು ವ್ಯಕ್ತ ಪಡಿಸುತ್ತದೆ. ಬಜೆಟ್ ರೇಖೆಯ ಇಳಿಜಾರು (*Slope*)$-\frac{p_1}{p_2}$ ಆಗಿರುತ್ತದೆ.

**ಬಜೆಟ್ ರೇಖೆಯ ಇಳಿಜಾರಿನ ನಿಷ್ಪತ್ತಿ**

ಬಜೆಟ್ ರೇಖೆಯ ಮೇಲೆ ಬಾಳೆಹಣ್ಣಿನ ಪ್ರತಿ ಘಟಕದ ಬದಲಾವಣೆಗೆ ಮಾವಿನಹಣ್ಣಿನಲ್ಲಿ ಬೇಕಾಗುವ ಬದಲಾವಣೆಯ ಪ್ರಮಾಣವನ್ನು ಬಜೆಟ್ ರೇಖೆಯ ಇಳಿಜಾರು ಮಾಪನ ಮಾಡುತ್ತದೆ. ಬಜೆಟ್ ರೇಖೆಯ ಮೇಲಿನ ಯಾವುದೇ ಎರಡು ಬಿಂದುಗಳನ್ನು $(x_1, x_2)$ ಮತ್ತು $(x_1 + \Delta x_1, x_2 + \Delta x_2)$ ಪರಿಗಣಿಸಿದಾಗ ಅದರ ಬೀಜಗಣಿತೀಯ ಸ್ವರೂಪವು ಈ ರೀತಿ ಇರುತ್ತದೆ.[a]




$$p_1 x_1 + p_2 x_2 = M \qquad (2.4)$$

ಮತ್ತು
$$p_1(x_1 + \Delta x_1) + p_2(x_2 + \Delta x_2) = M \qquad (2.5)$$

ಸಮೀಕರಣ 2.5 ರಿಂದ ಸಮೀಕರಣ 2.4ನ್ನು ವ್ಯವಕಲನ ಮಾಡಿದಾಗ ನಾವು ಈ ಕೆಳಗಿನ ಸಮೀಕರಣವನ್ನು ಪಡೆಯುತ್ತೇವೆ.

$$p_1 \Delta x_1 + p_2 \Delta x_2 = 0 \qquad (2.6)$$

ಸಮೀಕರಣ 2.6 ರಲ್ಲಿ ವ್ಯಕ್ತಪಡಿಸಿರುವ ಅಂಶಗಳನ್ನು ಮರುಹೊಂದಿಸಿದಾಗ ನಾವು ಈ ಕೆಳಗಿನ ಸ್ವರೂಪದ ಸಮೀಕರಣವನ್ನು ಪಡೆಯುತ್ತೇವೆ.

$$\frac{\Delta x_2}{\Delta x_1} = -\frac{p_1}{p_2} \qquad (2.7)$$

[a] $\Delta$ (ಡೆಲ್ಟಾ) ಇದು ಗ್ರೀಕ್ ಅಕ್ಷರವಾಗಿದೆ. ಗಣಿತ ಶಾಸ್ತ್ರದಲ್ಲಿ $\Delta$ ವನ್ನು ಬದಲಾವಣೆಯನ್ನು ಸೂಚಿಸಲು ಬಳಸಲಾಗುತ್ತದೆ. ಆದ್ದರಿಂದ $\Delta x_1$ಅನ್ನು $x_1$ನಲ್ಲಿ ಆದ ಬದಲಾವಣೆಯನ್ನು ಮತ್ತು $\Delta x_2$ಅನ್ನು $x_2$ನಲ್ಲಿ ಆದ ಬದಲಾವಣೆಯನ್ನು ಸೂಚಿಸಲು ಬಳಸಲಾಗಿದೆ.

[7] ಸರಳಾರೇಖಾ ಸಮೀಕರಣ $y = c + mx$ ಎಂಬುದನ್ನು ಶಾಲಾ ಗಣಿತ ಪಠ್ಯದಲ್ಲಿ ಕಲಿತಿದ್ದೀರಿ. ಈ ಸಮೀಕರಣದಲ್ಲಿ 'C' ಸ್ಥಿರಾಂಕವಾಗಿದ್ದು ಲಂಬಾಂತರ ಛೇದಕವಾಗಿದೆ $m$ ಸರಳಾರೇಖೆಯ ಇಳಿಜಾರಾಗಿದೆ. ಸಮೀಕರಣ 2.3 ಸಹ ಇದೇ ರೀತಿಯ ರೂಪವನ್ನು ಹೊಂದಿದೆ ಎಂಬುದನ್ನು ನಾವಿಲ್ಲಿ ಗಮನಿಸಬಹುದು.

### ಬೆಲೆಯ ಅನುಪಾತ ಮತ್ತು ಬಜೆಟ್‌ರೇಖೆಯ ಇಳಿಜಾರು

ಬಜೆಟ್ ರೇಖೆಯ ಮೇಲಿನ ಯಾವುದೇ ಬಿಂದುವನ್ನು ಪರಿಗಣಿಸಿ. ಆ ಬಿಂದುವು ಅನುಭೋಗಿಯ ಸಂಪೂರ್ಣ ಆದಾಯವು ವೆಚ್ಚಮಾಡುವ ಒಂದು ಸಂಯೋಜನೆಯನ್ನು ಪ್ರತಿನಿಧಿಸುತ್ತದೆ. ಅನುಭೋಗಿಯು ಒಂದು ಹೆಚ್ಚುವರಿ ಬಾಳೆಹಣ್ಣನ್ನು ಕೊಂಡುಕೊಳ್ಳಲು ಬಯಸಿದರೆ, ಮತ್ತೊಂದು ಸರಕನ್ನು ಸ್ವಲ್ಪ ಪ್ರಮಾಣದಲ್ಲಿ ಬಿಟ್ಟುಕೊಡಬೇಕಾಗುತ್ತದೆ. ಒಂದು ಬಾಳೆಹಣ್ಣನ್ನು ಘಟಕವನ್ನು ಪಡೆಯಲು ಎಷ್ಟು ಪ್ರಮಾಣದಲ್ಲಿ ಮಾವಿನಹಣ್ಣನ್ನು ಬಿಟ್ಟುಕೊಡಬೇಕಾಗುತ್ತದೆ? ಇದು ಎರಡು ಸರಕುಗಳ ಬೆಲೆಯನ್ನು ಅವಲಂಬಿಸಿರುತ್ತದೆ. ಒಂದು ಬಾಳೆಹಣ್ಣನ್ನು ಪಡೆಯಲು ತಗಲುವ ವೆಚ್ಚ $p_1$ ಆಗಿದೆ. ಆದುದರಿಂದ ಅನುಭೋಗಿಯು ಒಂದು ಹೆಚ್ಚುವರಿ ಬಾಳೆಹಣ್ಣನ್ನು ಪಡೆಯಲು ಮಾವಿನಹಣ್ಣಿನ ಮೇಲೆ ಮಾಡಬಹುದಾದ $p_1$ ಮೊತ್ತದಷ್ಟು ವೆಚ್ಚನ್ನು ಕಡಿಮೆ ಮಾಡಬೇಕಾಗುತ್ತದೆ. ಆಗ ಅನುಭೋಗಿಯು $p_1$ ಬೆಲೆಯಲ್ಲಿ $\frac{p_1}{p_2}$ ಘಟಕದಷ್ಟು ಮಾವಿನಹಣ್ಣನ್ನು ಪಡೆಯಬಹುದು. ಆದ್ದರಿಂದ ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚುಮಾಡುತ್ತಿದ್ದಾಗ, ಒಂದು ಹೆಚ್ಚುವರಿ ಬಾಳೆಹಣ್ಣನ್ನು ಪಡೆದುಕೊಳ್ಳಲು $\frac{p_1}{p_2}$ ಪ್ರಮಾಣದಷ್ಟು ಮಾವಿನಹಣ್ಣನ್ನು ಬಿಟ್ಟುಕೊಡಬೇಕಾಗುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ನಿರ್ದಿಷ್ಟ ಮಾರುಕಟ್ಟೆ ಸನ್ನಿವೇಶಗಳಲ್ಲಿ ಅನುಭೋಗಿಗೆ $\frac{p_1}{p_2}$ ದರದಲ್ಲಿ ಬಾಳೆಹಣ್ಣನ್ನು ಮಾವಿನಹಣ್ಣಿಗೆ ಬದಲಿಕೆ ಮಾಡಲು ಸಾಧ್ಯವಿರುತ್ತದೆ. ಬಜೆಟ್ ರೇಖೆಯ ಇಳಿಜಾರಿನ ನಿರಪೇಕ್ಷಾ ಮೌಲ್ಯವು[8], ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡುವ ಸಂಧರ್ಭದಲ್ಲಿ, ಯಾವ ದರದಲ್ಲಿ ಬಾಳೆಹಣ್ಣನ್ನು ಮಾವಿನಹಣ್ಣಿಗೆ ಬದಲಿಕೆ ಮಾಡುತ್ತಾಳೆಂಬುದನ್ನು ವ್ಯಕ್ತಪಡಿಸುತ್ತದೆ.





### 2.1.3 ಬಜೆಟ್ ಗಣದಲ್ಲಿ ಬದಲಾವಣೆಗಳು *Changes in the budget set*

ಒಬ್ಬ ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳ ಗಣವು, ಎರಡೂ ಸರಕುಗಳ ಬೆಲೆ ಮತ್ತು ಅನುಭೋಗಿಯ ಆದಾಯವನ್ನು ಅವಲಂಬಿಸಿರುತ್ತದೆ. ಅಂದರೆ ಸರಕುಗಳ ಬೆಲೆ ಅಥವಾ ಅನುಭೋಗಿಯ ಆದಾಯದಲ್ಲಿ ಬದಲಾವಣೆಯಾದಾಗ, ಲಭ್ಯವಿರುವ ಸಂಯೋಜನೆಗಳ ಗಣವೂ ಬದಲಾಗುವ ಸಾಧ್ಯತೆಯಿರುತ್ತದೆ. ಅನುಭೋಗಿಯ ಆದಾಯವು '$M$' ನಿಂದ '$M'$' ಗೆ ಬದಲಾವಣೆಯಾಗುತ್ತದೆ ಎಂದುಕೊಳ್ಳೋಣ. ಆದರೆ ಎರಡು ಸರಕುಗಳ ಬೆಲೆಗಳಲ್ಲಿ ಬದಲಾವಣೆಯಾಗುವುದಿಲ್ಲ ಎಂದುಕೊಳ್ಳೋಣ ಈ ಹೊಸ ಆದಾಯದಲ್ಲಿ ಅನುಭೋಗಿಯು $p_1x_1 + p_2x_2 \leq M'$ ಆಗುವಂತೆ $(x_1 x_2)$ ನ ಎಲ್ಲಾ ಸಂಯೋಜನೆಗಳನ್ನು ಕೊಂಡುಕೊಳ್ಳಲು ಸಮರ್ಥನಾಗುವನು. ಈಗ ಬಜೆಟ್ ರೇಖೆಯ ಸಮೀಕರಣವು ಈ ಕೆಳಗಿನಂತಿರುತ್ತದೆ.

$$p_1x_1+p_2x_2 = M' \quad (2.8)$$

ಈ ಮೇಲಿನ ಸಮೀಕರಣ 2.8 ನ್ನು ಈ ಕೆಳಗಿನಂತೆಯೂ ಬರೆಯಬಹುದು.

$$x_2 = \frac{M'}{p_2} - \frac{p_1}{p_2}x_1 \quad (2.9)$$

ಇಲ್ಲಿ ಗಮನಿಸಬೇಕಾದ ಪ್ರಮುಖ ಸಂಗತಿಯೆಂದರೆ ಹೊಸ ಬಜೆಟ್‌ರೇಖೆಯ ಇಳಿಜಾರು, ಅನುಬೋಗಿಯ ಆದಾಯ ಬದಲಾಗುವುದಕ್ಕಿಂತ ಮುಂಚೆ ಇದ್ದ ಬಜೆಟ್‌ರೇಖೆಯ ಇಳಿಜಾರಿನಂತಯೇ ಇರುತ್ತದೆ. ಆದಾಗ್ಯೂ ಆದಾಯದಲ್ಲಿ ಬದಲಾವಣೆಯಾದ ನಂತರ ಲಂಬಾಂತರ ಛೇದಕದಲ್ಲಿ ಬದಲಾವಣೆಯಾಗುತ್ತದೆ. ಆದಾಯ ಹೆಚ್ಚಾದರೆ ಅಂದರೆ $M' > M$ ಆದಾಗ ಲಂಬಾಂತರ ಛೇದಕ ಹೆಚ್ಚಾಗುತ್ತದೆ. ಬಜೆಟ್‌ರೇಖೆಯು ಸಮಾನಾಂತರವಾಗಿ ಹೊರಭಾಗಕ್ಕೆ (ಬಲಭಾಗ)ಕ್ಕೆ ಪಲ್ಲಟಗೊಳ್ಳುತ್ತದೆ. ಆದಾಯ ಹೆಚ್ಚಾದರೆ ಅನುಭೋಗಿಯು ಲಭ್ಯವಿರುವ ಮಾರುಕಟ್ಟೆ ಬೆಲೆಯಲ್ಲಿ ಹೆಚ್ಚು ಸರಕುಗಳನ್ನು ಕೊಂಡುಕೊಳ್ಳಬಹುದು.

---

[8] '$x$' ನ ನಿರಪೇಕ್ಷ ಮೌಲ್ಯವು '$x$' ಗೆ ಸಮಾನಾಗಿರುತ್ತದೆ. ಯಾವಾಗ ಎಂದರೆ $x \geq 0$ ಮತ್ತು $x < 0$ ಆದರೆ '$x$' ನ ಮೌಲ್ಯ '$-x$' ಗೆ ಸಮನಾಗಿರುತ್ತದೆ. '$x$' ನ ನಿರಪೇಕ್ಷ ಮೌಲ್ಯವು ಸಾಮಾನ್ಯವಾಗಿ $|x|$ ಎಂದು ಗುರುತಿಸಲಾಗುತ್ತದೆ.

ಇದೇ ರೀತಿಯಲ್ಲಿ ಅನುಭೋಗಿಯ ಆದಾಯ ಕಡಿಮೆಯಾದರೆ ಅಂದರೆ $M' < M$ ಆದಾಗ ಲಂಬಾಂತರ ಛೇದಕ ಕಡಿಮೆಯಾಗುತ್ತದೆ. ಹೀಗಾಗಿ ಬಜೆಟ್‌ರೇಖೆಯು ಸಮಾನಾಂತರವಾಗಿ ಒಳಭಾಗಕ್ಕೆ (ಎಡಭಾಗ)ಕ್ಕೆ ಪಲ್ಲಟಗೊಳ್ಳುತ್ತದೆ. ಆದಾಯ ಕಡಿಮೆಯಾದರೆ ಅನುಭೋಗಿಗೆ ಲಭ್ಯವಾಗುವ ಸರಕುಗಳ ಪ್ರಮಾಣ ಕಡಿಮೆಯಾಗುತ್ತದೆ. ಎರಡು ಸರಕುಗಳ ಬೆಲೆಗಳು ಬದಲಾವಣೆಗೊಳ್ಳದಿದ್ದಾಗ, ಅನುಭೋಗಿಯ ಆದಾಯದಲ್ಲಾದ ಬದಲಾವಣೆಯ ಪರಿಣಾಮವಾಗಿ ಲಭ್ಯವಾಗುವ ಸಂಯೋಜನೆಗಳ ಬದಲಾವಣೆಗಳನ್ನು ರೇಖಾಚಿತ್ರ 2.10 ರಲ್ಲಿ ತೋರಿಸಲಾಗಿದೆ.




**ರೇಖಾಚಿತ್ರ 2.10: ಅನುಭೋಗಿಯ** ಆದಾಯದಲ್ಲಿನ ಬದಲಾವಣೆಯ ಪರಿಣಾಮದಿಂದ ಲಭ್ಯವಾಗಬಹುದಾದ ಸರಕುಗಳ ಸಂಯೋಜನೆಗಳ ಗಣದಲ್ಲಿ ಆಗುವ ಬದಲಾವಣೆಗಳು. ಫಲಕ (*a*)ನಲ್ಲಿ ತೋರಿಸಿರುವಂತೆ ಆದಾಯ ಕಡಿಮೆಯಾದಂತೆ ಬಜೆಟ್‌ರೇಖೆಯು ಸಮಾನಾಂತರವಾಗಿ ಒಳಭಾಗಕ್ಕೆ ಪಲ್ಲಟಗೊಳ್ಳುತ್ತದೆ. ಫಲಕ (*b*)ನಲ್ಲಿ ತೋರಿಸಿರುವಂತೆ ಆದಾಯ ಹೆಚ್ಚುತ್ತಾ ಹೋದಂತೆ ಬಜೆಟ್ ರೇಖೆಯು ಸಮನಾಂತರವಾಗಿ ಹೊರಭಾಗಕ್ಕೆ ಪಲ್ಲಟಗೊಳ್ಳುತ್ತದೆ.

ಬಾಳೆಹಣ್ಣಿನ ಬೆಲೆ $p_1$ ನಿಂದ $p'_1$ ಗೆ ಬದಲಾಗಿದೆ. ಆದರೆ ಮಾವಿನಹಣ್ಣಿನ ಬೆಲೆ ಮತ್ತು ಅನುಭೋಗಿಯ ಆದಾಯ ಸ್ಥಿರವಾಗಿರುತ್ತದೆ ಎಂದುಕೊಳ್ಳೋಣ. ಬಾಳೆಹಣ್ಣಿನ ಹೊಸ ಬೆಲೆಯಲ್ಲಿ ಅನುಭೋಗಿಯು $P'_1 x_1 + p_2 x_2 \leq M$ ಆಗುವಂತೆ $(x_1\ x_2)$ ನ ಎಲ್ಲಾ ಸಂಯೋಜನೆಗಳನ್ನು ಕೊಂಡುಕೊಳ್ಳಲು ಸಮರ್ಥನಾಗುವನು. ಆಗ ಬಜೆಟ್ ರೇಖೆಯ ಸಮೀಕರಣವು ಈ ಕೆಳಗಿನಂತಿರುತ್ತದೆ.

$$P'_1 x_1 + p_2 x_2 = M \quad (2.10)$$

ಸಮೀಕರಣ 2.10 ನ್ನು ಮತ್ತೊಂದು ರೀತಿಯಲ್ಲಿ ಬರೆಯಬಹುದು.

$$x_2 = \frac{M}{p_2} - \frac{p'_1}{p_2} x_1 \quad (2.11)$$

ಹೊಸ ಬಜೆಟ್‌ರೇಖೇಯ ಲಂಬಾಂತರ ಛೇದಕವು ಬೆಲೆ ಬದಲಾವಣೆಯ ಪೂರ್ವದಲ್ಲಿ ಬಜೆಟ್ ರೇಖೆಯ ಲಂಬಾಂತರ ಛೇದಕದಂತೆಯೇ ಇರುತ್ತದೆ. ಬಾಳೆಹಣ್ಣಿನ ಬೆಲೆಯ ಬದಲಾವಣೆಯ ನಂತರ ಬಜೆಟ್‌ರೇಖೆಯ ಇಳಿಜಾರು ಬದಲಾಗಿದೆ. ಬಾಳೆಹಣ್ಣಿನ ಬೆಲೆ ಹೆಚ್ಚಾದರೆ, ಅಂದರೆ $p'_1 > p_1$ ಆದರೆ ಬಜೆಟ್‌ರೇಖೆಯ ಇಳಿಜಾರಿನ ನಿರಪೇಕ್ಷ ಮೌಲ್ಯವು ಹೆಚ್ಚಾಗುತ್ತದೆ ಮತ್ತು ಬಜೆಟ್‌ರೇಖೆಯು ಹೆಚ್ಚು ಕಡಿದಾದ (ಲಂಬಾಂತರ ಛೇದಕದ ಸುತ್ತಮುತ್ತ ಒಳಭಾಗಕ್ಕೆ ಚಲಿಸುತ್ತದೆ) ಸ್ವರೂಪವನ್ನು ಹೊಂದುತ್ತದೆ. ಸರಕು1ರ ಬೆಲೆ ಕಡಿಮೆಯಾದರೆ, ಅಂದರೆ $p'_1 < p_1$ ಬಜೆಟ್‌ರೇಖೆಯ ಇಳಿಜಾರಿನ ನಿರಪೇಕ್ಷ ಮೌಲ್ಯ ಕಡಿಮೆಯಾಗುತ್ತದೆ. ಹೀಗಾಗಿ ಬಜೆಟ್ ರೇಖೆಯು ಸಮತಲವಾಗುತ್ತದೆ. ಲಂಬಾಂತರ ಛೇದಕದ ಬಜೆಟ್‌ರೇಖೆಯ ಹೊರಭಾಗಕ್ಕೆ ಚಲಿಸುತ್ತದೆ. ಅನುಭೋಗಿಯ ಆದಾಯ ಮತ್ತು ಒಂದು ಸರಕಿನ ಬೆಲೆಯಲ್ಲಿ ಬದಲಾವಣೆಯಾಗದೆ ಮತ್ತೊಂದು ಸರಕಿನ ಬೆಲೆಯಲ್ಲಿ ಮಾತ್ರ ಬದಲಾವಣೆಯಾದಾಗ ಲಭ್ಯವಿರುವ ಸಂಯೋಜನೆಗಳ ಗಣವನ್ನು ರೇಖಾಚಿತ್ರ 2.11 ರಲ್ಲಿ ಪ್ರತಿನಿಧಿಸಲಾಗಿದೆ.




**ರೇಖಾಚಿತ್ರ 2.11: ಸರಕು1ರ ಬೆಲೆಯಲ್ಲಿನ ಬದಲಾವಣೆಯ ಪರಿಣಾಮವಾಗಿ ಲಭ್ಯವಿರುವ ಅನುಭೋಗದ ಸಂಯೋಜನೆಗಳ ಗಣದಲ್ಲಿ ಆದ ಬದಲಾವಣೆ.**

ಫಲಕ($a$) : ಸರಕು1ರ ಬೆಲೆಯು ಹೆಚ್ಚಾದಂತೆ ಬಜೆಟ್‌ರೇಖೆಯು ಹೆಚ್ಚು ಕಡಿದಾದ ಸ್ವರೂಪವನ್ನು ಹೊಂದಿದೆ.

ಫಲಕ($b$) : ಸರಕು1ರ ಬೆಲೆಯು ಕಡಿಮೆಯಾದಂತೆ ಬಜೆಟ್‌ರೇಖೆಯು ಹೆಚ್ಚು ಸಮತಲವಾಗಿರುತ್ತದೆ.

ಅನುಭೋಗಿಯ ಆದಾಯ ಮತ್ತು ಬಾಳೆಹಣ್ಣಿನ ಬೆಲೆ ಬದಲಾಗದೇ ಸ್ಥಿರವಾಗಿದ್ದು, ಮಾವಿನಹಣ್ಣಿನ ಬೆಲೆಯಲ್ಲಿನ ಬದಲಾವಣೆಯು ಬಜೆಟ್ ಗಣದಲ್ಲಿ ಇದೇ ರೀತಿಯ ಬದಲಾವಣೆಯನ್ನು ತರುತ್ತದೆ.





## 2.3 ಅನುಭೋಗಿಯ ಆದರ್ಶ ಆಯ್ಕೆ *Optimal Choice of the Consumer*

ಬಜೆಟ್ ಗಣವು ಅನುಭೋಗಿಗೆ ಲಭ್ಯವಿರುವ ಎಲ್ಲಾ ಸಂಯೋಜನೆಗಳನ್ನು ಒಳಗೊಂಡಿರುತ್ತದೆ. ಅನುಭೋಗಿಯು ಬಜೆಟ್‌ಗಣದಿಂದ ತನ್ನ ಅನುಭೋಗದ ಸಂಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಆದರೆ ಅನುಭೋಗಿಯು ತನಗೆ ಲಭ್ಯವಿರುವ ಸಂಯೋಜನೆಗಳಲ್ಲಿ ಯಾವ ಸಂಯೋಜನೆಯನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳುತ್ತಾಳೆ.? ಅನುಭೋಗಿಯು ತನ್ನ ಬಜೆಟ್‌ಗಣದಲ್ಲಿರುವ ಸಂಯೋಜನೆಗಳಲ್ಲಿ ತನ್ನ ಅಭಿರುಚಿ ಮತ್ತು ಆದ್ಯತೆಗಳ ಆಧಾರದ ಮೇಲೆ ತನ್ನ ಅನುಭೋಗದ ಸಂಯೋಜನೆಯನ್ನು ಆಯ್ಕೆ ಮಾಡಿಕೊಳ್ಳುತ್ತಾಳೆಂದು ಅರ್ಥಶಾಸ್ತ್ರದಲ್ಲಿ ಕಲ್ಪಿಸಿಕೊಳ್ಳಲಾಗಿದೆ ಸಾಮಾನ್ಯವಾಗಿ ಸಾಧ್ಯವಿರುವ ಎಲ್ಲಾ ಸಂಯೋಜನೆಗಳ ಮೇಲೆ ಅನುಬೋಗಿಗೆ ಸ್ಪಷ್ಟವಾದ ಆದ್ಯತೆಗಳಿರುತ್ತವೆ ಎಂದು ಕಲ್ಪಿಸಿಕೊಳ್ಳಲಾಗಿದೆ ಅವಳು ಯಾವುದೇ ಎರಡು ಸಂಯೋಜನೆಗಳನ್ನು ಹೋಲಿಕೆ ಮಾಡಬಲ್ಲಳು ಅಂದರೆ, ಎರಡು ಸಂಯೋಜನೆಗಳ ನಡುವೆ ಎರಡರಲ್ಲಿ ಒಂದಕ್ಕೆ ಆದ್ಯತೆ ನೀಡುತ್ತಾಳೆ ಅಥವಾ ಎರಡರ ನಡುವೆ ಔದಸಿನ್ಯತೆ ಹೊಂದಿರುತ್ತಾಳೆ. ಸಾಮಾನ್ಯವಾಗಿ ಅರ್ಥಶಾಸ್ತ್ರದಲ್ಲಿ ಅನುಭೋಗಿಯು ವಿವೇಚನಾಶೀಲತೆ ಹೊಂದಿರುತ್ತಾಳೆಂದು ಊಹಿಸಿಕೊಳ್ಳಲಾಗುತ್ತದೆ. ಒಬ್ಬ ವಿವೇಚನಾಶೀಲ ಅನುಭೋಗಿಗೆ ಯಾವುದೇ ನಿರ್ದಿಷ್ಟ ಸನ್ನಿವೇಶದಲ್ಲಿ ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದ್ದು (ಉತ್ತಮವಲ್ಲದ್ದು) ಎಂಬುದರ ಬಗ್ಗೆ ಸ್ಪಷ್ಟ ಅರಿವು ಇರುತ್ತದೆ. ಆದ್ದರಿಂದ ಅನುಭೋಗಿಯು ಯಾವಾಗಲೂ ತನಗೆ ಅತ್ಯುತ್ತಮವೆನಿಸಿದ್ದನ್ನೆ ಆಯ್ಕೆ ಮಾಡಲು ಪ್ರಯತ್ನಿಸುತ್ತಾಳೆ. ಈ ರೀತಿ ಅನುಭೋಗಿಯು ತನಗೆ ಲಭ್ಯವಿರುವ ಅನುಭೋಗದ ಸಂಯೋಜನೆಗಳಿಗೆ ನೀಡಬಹುದಾದ ಆದ್ಯತೆಗಳ ಬಗ್ಗೆ ಸ್ಪಷ್ಟತೆಯನ್ನು ಹೊಂದಿರುವುದಷ್ಟೇಯಲ್ಲದೆ ಅನುಭೋಗಿಯ ವರ್ತನೆ ಕೂಡ ಆದ್ಯತೆಗಳಿ ಗನುಸಾರವಾಗಿ ಇರುತ್ತದೆ. ಒಬ್ಬ ವಿವೇಚನಾಶೀಲ ಅನುಭೋಗಿಯು ತನಗೆ ದೊರಕಬಹುದಾದ ಅನುಭೋಗದ ವಿವಿದ ಸಂಯೋಜನೆಗಳ ಸಮೂಹದಲ್ಲಿ, ತಾನು ಅತಿ ಹೆಚ್ಚು ಆದ್ಯತೆಯನ್ನು ವ್ಯಕ್ತಪಡಿಸುವ ಒಂದು ಸಂಯೋಜನೆಯನ್ನು ಆಯ್ಕೆ ಮಾಡುತ್ತಾಳೆ.

ಹಿಂದಿನ ಭಾಗಗಳಲ್ಲಿ ಬಜೆಟ್‌ಗಣವು ಅನುಭೋಗಿಗೆ ಲಭ್ಯವಿರುವ ಸಂಯೋಜನೆಗಳನ್ನು ವಿವರಿಸುತ್ತದೆ ಮತ್ತು ಲಭ್ಯವಿರುವ ಸಂಯೋಜನೆಗಳ ಮೇಲೆ ಅನುಭೋಗಿಗೆ ಇರುವ ಆದ್ಯತೆಗಳನ್ನು ಒಂದು ಔದಾಸೀನ್ಯ

ನಕ್ಷೆಯಿಂದ ಪ್ರತಿನಿಧಿಸಬಹುದೆಂಬುದನ್ನು ಅರಿತುಕೊಳ್ಳಲಾಗಿದೆ. ಆದ್ದರಿಂದ ಅನುಭೋಗಿಯ ಸಮಸ್ಯೆಯನ್ನು ಈ ರೀತಿಯಲ್ಲೂ ವ್ಯಾಖ್ಯಾನಿಸಬಹುದು: ನೀಡಲಾದ ಬಜೆಟ್ ಗಣದ ಮೂಲಕ ಔದಾಸೀನ್ಯ ವಕ್ರರೇಖೆಯ ಮೇಲೆ ಸಾಧ್ಯವಿರುವಷ್ಟು ಎತ್ತರವಾದ ಸಂಯೋಜನಾ ಬಿಂದುವಿನತ್ತ ಚಲಿಸುವುದೇ ವಿವೇಚನಾಶೀಲ ಅನುಭೋಗಿಯ ಸಮಸ್ಯೆಯಾಗಿದೆ.

ಒಂದು ವೇಳೆ ಅಂತಹ ಬಿಂದು ಇರುವುದೇ ಆದರೆ ಅದನ್ನು ಎಲ್ಲಿ ಗುರಿತಿಸಬಹುದು? ಸಮತೋಲನದ ಅಥವಾ ಆದರ್ಶ ಬಿಂದುವನ್ನು ಬಜೆಟ್‌ರೇಖೆಯ ಮೇಲೆಯೇ ಗುರುತಿಸಬೇಕಾಗುತ್ತದೆ. ಬಜೆಟ್ ರೇಖೆಗಿಂತ ಕೆಳಗಿನ ಬಿಂದುವಿಗೆ ಹೋಲಿಸಿದರೆ, ಕೊನೆಪಕ್ಷ ಒಂದು ಸರಕನ್ನು ಅಧಿಕವಾಗಿ ಮತ್ತು ಇನ್ನೊಂದು ಸರಕಿಗೆ ಕಡಿಮೆ ಇಲ್ಲದಂತಹ ಒಂದು ಬಿಂದುವು ಸದಾ ಬಜೆಟ್ ರೇಖೆಯ ಮೇಲೆ ಇರುತ್ತದೆ ಮತ್ತು ಏಕತಾನಾತ್ಮಕ ಒಲವನ್ನು ಹೊಂದಿರುವ ಅನುಭೋಗಿಯು ಆ ಬಿಂದುವಿನ ಸಂಯೋಜನೆಯ ಬಗ್ಗೆ ಹೆಚ್ಚು ಆದ್ಯತೆ ನೀಡುತ್ತಾಳೆ. ಆದ್ದರಿಂದ, ಅನುಭೋಗಿಯ ಆದ್ಯತೆಗಳು, ಏಕತಾನಾತ್ಮಕವಾಗಿದ್ದರೆ, ಬಜೆಟ್‌ರೇಖೆಯ ಕೆಳಭಾಗದಲ್ಲಿರುವ ಯಾವುದೇ ಬಿಂದುವಿಗೆ ಅನುಭೋಗಿಯು ಆದ್ಯತೆ ನೀಡುವ ಕೆಲವು ಬಿಂದುಗಳು ಬಜೆಟ್ ರೇಖೆಯ ಮೇಲೆ ಇರುತ್ತದೆ. ಬಜೆಟ್ ರೇಖೆಯ ಮೇಲ್ಭಾಗದಲ್ಲಿ ಬರುವ ಬಿಂದುಗಳು ಅನುಭೋಗಿಗೆ ಲಭ್ಯವಾಗುವುದಿಲ್ಲ ಆದ್ದರಿಂದ ಅನುಭೋಗಿಯು ಆದ್ಯತೆ ನೀಡುವ ಆದರ್ಶ ಸಂಯೋಜನೆಯು (ಹೆಚ್ಚಿನ ಆದ್ಯತೆಯ) ಬಜೆಟ್ ರೇಖೆಯ ಮೇಲೆಯೇ ಇರುತ್ತದೆ.

**ಸೀಮಾಂತ ಬದಲಿಕೆಯ ದರ ಮತ್ತು ಬೆಲೆಗಳ ಅನುಪಾತದ ನಡುವಿನ ಸಮಾನತೆ**

ಬಜೆಟ್‌ರೇಖೆಯು ಯಾವುದಾದರೊಂದು ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸಿರುವ ಬಿಂದುವಿನಲ್ಲಿ ಅನುಭೋಗಿಯ ಆದರ್ಶ ಸಂಯೋಜನೆ ಕಂಡುಬರುತ್ತದೆ. ಬಜೆಟ್‌ರೇಖೆಯು ಔದಾಸೀನ್ಯವಕ್ರರೇಖೆಯ ಮೇಲಿನ ಒಂದು ಬಿಂದುವನ್ನು ಸ್ಪರ್ಶಿಸಿದರೆ, ಆ ಬಿಂದುವಿನಲ್ಲಿ ಔದಾಸೀನ್ಯ ವಕ್ರರೇಖೆಯ ಇಳಿಜಾರಿನ (*MRS*) ನಿರಪೇಕ್ಷಾಮೌಲ್ಯ ಮತ್ತು ಬಜೆಟ್‌ರೇಖೆಯ ಇಳಿಜಾರು (ಬೆಲೆಯ ಅನುಪಾತ) ಒಂದೇ ಆಗಿರುತ್ತವೆ. ಔದಾಸೀನ್ಯ ವಕ್ರರೇಖೆಯ ಇಳಿಜಾರು ಅನುಭೋಗಿಯು ಒಂದು ಸರಕನ್ನು ಇನ್ನೊಂದು ಸರಕಿಗೆ ಬದಲಿಸಲು ಇಚ್ಛಿಸುವ ದರವಾಗಿದೆ ಎಂಬುದನ್ನು ನಮ್ಮ ಹಿಂದಿನ ಚರ್ಚೆಯಿಂದ ಸ್ಮರಿಸಬಹುದಾಗಿದೆ. ಬಜೆಟ್ ರೇಖೆಯ ಇಳಿಜಾರು, ಮಾರುಕಟ್ಟೆಯಲ್ಲಿ ಒಬ್ಬ ಅನುಭೋಗಿಯು ಒಂದು ಸರಕನ್ನು ಇನ್ನೊಂದು ಸರಕಿಗೆ ಬದಲಿಸಿಕೊಳ್ಳಲು ಸಾಧ್ಯವಾಗುವ ದರವಾಗಿದೆ. ಆದರ್ಶ ಮಟ್ಟದಲ್ಲಿ ಎರಡೂ ದರಗಳು ಒಂದೇ ಆಗಿರಬೇಕು.

ಇದು ಏಕೆ ಎಂದು ತಿಳಿದು ಕೊಳ್ಳಬೇಕಾದರೆ, ಎರಡೂ ದರಗಳು ಸಮವಿಲ್ಲದ ಬಿಂದುವನ್ನು ಪರಿಗಣಿಸಿ. ಆ ಬಿಂದುವಿನಲ್ಲಿ ಸೀಮಾಂತ ಬದಲಿಕೆಯ ದರ (*MRS*) 2 ಆಗಿದೆ ಮತ್ತು ಎರಡೂ ಸರಕುಗಳ ಬೆಲೆ ಒಂದೇ ಆಗಿದೆ ಎಂದು ಕೊಳ್ಳೋಣ. ಆ ಬಿಂದುವಿನಲ್ಲಿ ಅನುಭೋಗಿಯು ಒಂದು ಹೆಚ್ಚುವರಿ ಬಾಳೆಹಣ್ಣನ್ನು ಪಡೆಯಲು 2 ಮಾವಿನಹಣ್ಣನ್ನು ಘಟಕಗಳನ್ನು ತ್ಯಾಗ ಮಾಡಲು ಇಚ್ಛಿಸುತ್ತಾಳೆ. ಆದರೆ ಮಾರುಕಟ್ಟೆಯಲ್ಲಿ ಅನುಭೋಗಿಯು ಒಂದು ಹೆಚ್ಚುವರಿ ಬಾಳೆಹಣ್ಣನ್ನು ಪಡೆಯಲು ಒಂದು ಮಾವಿನಹಣ್ಣು ಮಾತ್ರ ತ್ಯಜಿಸುತ್ತಾಳೆ. ಆದ್ದರಿಂದ ಅನುಭೋಗಿಯು ಒಂದು ಹೆಚ್ಚುವರಿ ಬಾಳೆಹಣ್ಣನ್ನು ಕೊಂಡುಕೊಂಡರೆ, ಬೇರೆ ಸಂಯೋಜನಾ ಬಿಂದುಗಳಿಗೆ ಹೋಲಿಸಿದರೆ ಈ ಬಿಂದುವಿನಲ್ಲಿ ಎರಡೂ ಸರಕುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಬಹುದು. ಈ ರೀತಿ ಅನುಭೋಗಿಯು ಹೆಚ್ಚು ಆದ್ಯತೆಯನ್ನು ವ್ಯಕ್ತಪಡಿಸುವ ಬಿಂದುವಿನತ್ತ ಚಲಿಸುತ್ತಾಳೆ. ಹೀಗೆ (*MRS*) ಅಧಿಕವಾಗಿರುವ ಬಿಂದುವಿನಲ್ಲಿ ಬೆಲೆಯ ಅನುಪಾತ ಆದರ್ಶವಾಗಿರುವುದಿಲ್ಲ. ಬೆಲೆಯ ಅನುಪಾತಕ್ಕಿಂತ (*MRS*) ನ್ನು ಕಡಿಮೆ ಹೊಂದಿರುವ ಯಾವುದೇ ಬಿಂದುವಿಗೂ ಇದೇ ವಿವರಣೆಯನ್ನು ನೀಡಬಹುದು.

ಬಜೆಟ್‌ರೇಖೆಯ ಮೇಲೆ ಆದರ್ಶ ಸಂಯೋಜನೆ ಹೊಂದಿರುವ ಬಿಂದುವನ್ನು ಎಲ್ಲಿ ಗುರುತಿಸಲಾಗುತ್ತದೆ? ಎಲ್ಲಿ ಬಜೆಟ್‌ರೇಖೆಯು ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸಿರುತ್ತದೆಯೇ ಅದುವೇ ಆದರ್ಶ ಸಂಯೋಜನೆಯ ಬಿಂದುವಾಗಿರುತ್ತದೆ[9]. ಏಕೆಂದರೆ ಈ ಬಿಂದುವನ್ನು ಹೊರತು ಪಡಿಸಿ ಔದಾಸೀನ್ಯ ವಕ್ರರೇಖೆಯ ಮೇಲಿರುವ ಇನ್ನಾವುದೇ ಬಿಂದುವು ಅನುಭೋಗಿಯು ಹೊಂದಬಹುದಾದ ಕೆಳಮಟ್ಟದ ಸಂಯೋಜನೆಗಳನ್ನು ವ್ಯಕ್ತಪಡಿಸುವ ಬಿಂದುವಾಗಿರುತ್ತವೆ. ಆದ್ದರಿಂದ ಆ ಬಿಂದುವು ಆದರ್ಶ ಸಂಯೋಜನಾ ಬಿಂದು ಆಗಲಾರದು. ಆದರ್ಶ ಸಂಯೋಜನೆಯು ಬಜೆಟ್‌ರೇಖೆ ಮತ್ತು ಔದಾಸೀನ್ಯವಕ್ರರೇಖೆ ಪರಸ್ಪರ ಸ್ಪರ್ಶಿಸುವ ಬಿಂದುವಿನಲ್ಲಿಯೇ ಕಂಡುಬರುತ್ತದೆ.

ರೇಖಾಚಿತ್ರ 2.12 ಅನುಭೋಗಿಯ ಆದರ್ಶವನ್ನು ವಿವರಿಸುತ್ತದೆ. $(x^*_1, x^*_2)$ ದಲ್ಲಿ ಬಜೆಟ್ ರೇಖೆಯು ಕಪ್ಪು ಬಣ್ಣದ ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸಿದೆ. ಮೊಟ್ಟ ಮೊದಲಾಗಿ ಗಮನಿಸಬೇಕಾದ ವಿಷಯವೆಂದರೆ, ಬಜೆಟ್ ರೇಖೆಯನ್ನು ಸ್ಪರ್ಶಿಸುವ ಔದಾಸೀನ್ಯ ವಕ್ರರೇಖೆಯು, ಅನುಭೋಗಿಯ ನಿರ್ದಿಷ್ಟ ಬಜೆಟ್‌ನಲ್ಲಿ ಪಡೆಯಬಹುದಾದ ಹೆಚ್ಚಿನ ಮಟ್ಟದ ಔದಾಸೀನ್ಯ ವಕ್ರರೇಖೆಯಾಗಿರುತ್ತದೆ. ಇದಕ್ಕಿಂತ ಉನ್ನತ ಮಟ್ಟದ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳು. ಉದಾಹರಣೆಗೆ ಕಂದು ಬಣ್ಣದ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳು ಪಡೆಯಲಸಾಧ್ಯವಾದ ಸಂಯೋಜನೆಗಳಾಗಿವೆ. ಇದಕ್ಕಿಂತ ಕೆಳಗೆ ಇರುವ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳು ಉದಾಹರಣೆಗೆ ನೀಲಿ ಬಣ್ಣದ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳು ಬಜೆಟ್ ರೇಖೆಯನ್ನು ಸ್ಪರ್ಶಿಸುವ ಔದಾಸೀನ್ಯ ವಕ್ರರೇಖೆಯ ಸಂಯೋಜನೆಗಳಿಗಿಂತ ಕೆಳಮಟ್ಟದ್ದಾಗಿರುತ್ತದೆ. ಬಜೆಟ್ ರೇಖೆಯ ಮೇಲಿನ ಇತರ ಯಾವುದೇ ಬಿಂದುವು ಕೆಳಮಟ್ಟದ ಔದಾಸೀನ್ಯ ವಕ್ರರೇಖೆಯ ಮೇಲಿರುತ್ತದೆ ಮತ್ತು $(x^*_1, x^*_2)$ ಗಿಂತ ಕೆಳಮಟ್ಟದ್ದಾಗಿರುತ್ತದೆ. ಆದ್ದರಿಂದ $(x^*_1, x^*_2)$ ಅನುಭೋಗಿಯ ಆದರ್ಶ ಸಂಯೋಜನೆಯಾಗಿದೆ.




**ರೇಖಾಚಿತ್ರ 2.12: ಅನುಭೋಗಿಯ ಆದರ್ಶ:** ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸುವ ಬಜೆಟ್ ರೇಖೆಯ ಮೇಲಿನ $(x^*_1, x^*_2)$ ಬಿಂದು ಅನುಭೋಗಿಯ ಆದರ್ಶ ಸಂಯೋಜನೆಯನ್ನು ವ್ಯಕ್ತಪಡಿಸುತ್ತದೆ.

## 2.4. ಬೇಡಿಕೆ *Demand*

ಈ ಹಿಂದಿನ ಭಾಗದಲ್ಲಿ ನಾವು, ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ ಮತ್ತು ಅದ್ಯತೆಗಳನ್ನು ನೀಡಿದ ಸಂದರ್ಭದಲ್ಲಿ ಅನುಭೋಗಿಯ ಆಯ್ಕೆಯ ಸಮಸ್ಯೆಯನ್ನು ಮತ್ತು ಅನುಭೋಗಿಯ ಆದರ್ಶ ಸಂಯೋಜನೆಯನ್ನು ಪಡೆಯುವ ಬಗ್ಗೆ ಅಭ್ಯಾಸ ಮಾಡಿದ್ದೇವೆ. ಅನುಭೋಗಿಯು, ಆದರ್ಶಮಟ್ಟದಲ್ಲಿ ಆಯ್ಕೆ ಮಾಡಿಕೊಳ್ಳುವ ಒಂದು ಸರಕಿನ ಪ್ರಮಾಣವು ಆ ಸರಕಿನ ಬೆಲೆಯನ್ನು, ಇತರೆ ಸರಕುಗಳ ಬೆಲೆಗಳನ್ನು, ಅನುಭೋಗಿಯ ಆದಾಯ, ಅಭಿರುಚಿ ಮತ್ತು ಅದ್ಯತೆಗಳನ್ನು ಅವಲಂಬಿಸಿರುತ್ತದೆ. ಸರಕುಗಳ ಬೆಲೆ ಮತ್ತು ಅನುಭೋಗಿಯ ಅಭಿರುಚಿ ಆದ್ಯತೆಗಳನ್ನು ನೀಡಿದ್ದಾಗ, ಒಬ್ಬ ಅನುಭೋಗಿಯು ಕೊಂಡುಕೊಳ್ಳಲು ಬಯಸುವ ಮತ್ತು ಸಾಮರ್ಥ್ಯವಿರುವ ಸರಕುಗಳ ಪ್ರಮಾಣವನ್ನು ಬೇಡಿಕೆ ಎಂದು ಕರೆಯುತ್ತೇವೆ. ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಚಲಕಗಳಲ್ಲಿ ಬದಲಾವಣೆಯಾದರೆ ಅನುಭೋಗಿಯು ಆಯ್ಕೆ ಮಾಡುವ ಸರಕಿನ ಪ್ರಮಾಣದಲ್ಲಿಯೂ ಸಹಜವಾಗಿಯೇ ಬದಲಾವಣೆಯಾಗುತ್ತದೆ. ನಾವಿಲ್ಲಿ ಈ ಚಲಕಗಳಲ್ಲಿ ಒಂದು ಬಾರಿಗೆ

[9] ರೇಖಾಚಿತ್ರ 2.10 ರಲ್ಲಿ ಖಚಿತವಾಗಿ ಹೇಳುವುದಾದರೆ, ರೇಖಾಚಿತ್ರ 2.10ರಲ್ಲಿ ತೋರಿಸಿರುವಂತೆ ಬಜೆಟ್‌ರೇಖೆಯು, ಔದಾಸೀನ್ಯ ವಕ್ರರೇಖೆಯನ್ನು ಸ್ಪರ್ಶಿಸಿದೆಯೋ ಆ ಬಿಂದುವೇ ಆದರ್ಶಬಿಂದುವಾಗಿದೆ. ಆದಾಗ್ಯೂ ಅನುಭೋಗಿಯು ತನ್ನೆಲ್ಲಾ ಆದಾಯವನ್ನು ಕೇವಲ ಒಂದು ಸರಕನ್ನು ಕೊಂಡುಕೊಳ್ಳಲು ಬಳಸುವ ಬೇರೆ ಸನ್ನಿವೇಶಗಳೂ ಸಹ ಕಂಡುಬರುತ್ತವೆ.

ಯಾವುದಾದರು ಒಂದು ಚಲಕವನ್ನು ಬದಲಾಯಿಸೋಣ. ಅ ಚಲಕದ ಮೇಲೆ ಅನುಭೋಗಿಯು ಆಯ್ಕೆ ಮಾಡಿಕೊಂಡ ಸರಕಿನ ಪ್ರಮಾಣ ಯಾವ ಸಂಬಂಧವನ್ನು ಹೊಂದಿದೆ ಎಂಬುದನ್ನು ಅಭ್ಯಾಸಿಸೋಣ.

**ಬಿಂಬಕಗಳು**

ಯಾವುದಾದರು ಎರಡು ಚಲಕಗಳನ್ನು ಪರಿಗಣಿಸೋಣ. ಅವು $x$ ಮತ್ತು $y$ ಆಗಿರಲಿ.

$y = f\ (x)$ ಒಂದು ಬಿಂಬಕವಾಗಿದೆ. ಇದು $x$ ಮತ್ತು $y$ ಎಂಬ ಎರಡು ಚಲಕಗಳ ನಡುವಿನ ಸಂಬಂಧವಾಗಿದೆ. ಅಂದರೆ $x$ ನ ಪ್ರತಿಯೊಂದು ಮೌಲ್ಯಕ್ಕೆ $y$ ಚಲಕವು ವಿಶಿಷ್ಟ ಮೌಲ್ಯವನ್ನು ಹೊಂದುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ $f(x)$ ಒಂದು ನಿಯಮವಾಗಿದ್ದು, ಇದು $x$ ನ ಪ್ರತಿಯೊಂದು ಮೌಲ್ಯಕ್ಕೆ ಒಂದು ವಿಶೇಷ ಮೌಲ್ಯ $y$ ಅನ್ನು ನೀಡುತ್ತದೆ. ಹೀಗೆ $y$ ನ ಮೌಲ್ಯವು $x$ ನ ಮೌಲ್ಯವನ್ನು ಅವಲಂಬಿಸಿರುತ್ತದೆ. ಆದ್ದರಿಂದ $y$ ಅವಲಂಬಿತ ಚಲಕವೆಂದು $x$ ನ್ನು ಸ್ವತಂತ್ರ ಚಲಕವೆಂದು ಕರೆಯಲಾಗುತ್ತದೆ.

**ಉದಾಹರಣೆ 1**

ಉದಾಹರಣೆಗೆ '$x$' 0, 1, 2, 3 ಮೌಲ್ಯಗಳನ್ನು ತೆಗೆದುಕೊಂಡಾಗ ಅನುಕ್ರಮವಾಗಿ '$y$' ನ ಮೌಲ್ಯವು 10, 15, 18, 20 ಆಗುವ ಒಂದು ಸನ್ನಿವೇಶವನ್ನು ಉದಾಹರಣೆಯಾಗಿ ಪರಿಗಣಿಸಿ $y = f(x)$ ನ. ಮೂಲಕ '$x$' ಮತ್ತು '$y$' ಸಂಬಂಧವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಬಹುದು.

$f(0)=10$; $f(1)=15$; $f(2)=18$ ಮತ್ತು $f(3)=20$

**ಉದಾಹರಣೆ 2**

'$x$' ನ ಮೌಲ್ಯವು 0, 5, 10 ಮತ್ತು 20 ಆಗಿರುವ ಇನ್ನೊಂದು ಸನ್ನಿವೇಶವನ್ನು ಪರಿಗಣಿಸೋಣ ಮತ್ತು ಇದಕ್ಕೆ ಅನುಗುಣವಾದ '$y$' ನ ಮೌಲ್ಯವು ಅನುಕ್ರಮವಾಗಿ 100, 90, 70 ಮತ್ತು 40 ಆಗಿರಲಿ. ಈ ಎರಡು ಚಲಕಗಳ ಸಂಬಂದವನ್ನು ಇಲ್ಲಿ $y = f(x)$ ಬಿಂಬಕದ ಮೂಲಕ $y$ ಮತ್ತು $x$ ಸಂಬಂಧಿಸಿವೆ. ಅದನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.

$f(0) = 100$; $f(10) = 90$; $f(15) = 70$ ಮತ್ತು $f(20) = 40$

ಎರಡು ಚಲಕಗಳ ಕಾರ್ಯವಲಂಬಿ ಸಂಬಂದವನ್ನು ಬೀಜ ಗಣಿತೀಯ ರೂಪದಲ್ಲಿ ಈ ಕೆಳಗಿನಂತೆ ವ್ಯಕ್ತಪಡಿಸಬಹುದು.

$$y = 5 + x \text{ ಮತ್ತು } y = 50 - x$$

'$x$' ನ ಮೌಲ್ಯದ ಏರಿಕೆಯೊಂದಿಗೆ '$y$' ನ ಮೌಲ್ಯ ಕಡಿಮೆಯಾಗದಿದ್ದಾಗ ಮಾತ್ರ. $y = f(x)$ ಒಂದು ಏರಿಕೆಯ ಬಿಂಬಕವಾಗಿದೆ '$x$' ನ ಮೌಲ್ಯದ ಹೆಚ್ಚಳದೊಂದಿಗೆ '$y$' ನ ಮೌಲ್ಯದಲ್ಲಿ ಹೆಚ್ಚಳವಾಗದಿದ್ದರೆ ಆ ಬಿಂಬಕವನ್ನು **ಇಳಿಕೆಯ ಬಿಂಬಕ** ಎನ್ನುತ್ತೇವೆ.

ಉದಾಹರಣೆ 1ರ ಬಿಂಬಕವು ಏರಿಕೆಯ ಬಿಂಬಕವಾಗಿದೆ ಹಾಗೆಯೇ, $y = x + 5$ ಬಿಂಬಕವಾಗಿದೆ.

ಉದಾಹರಣೆ 2ರ ಬಿಂಬಕವು ಇಳಿಕೆಯ ಬಿಂಬಕವಾಗಿದೆ. ಬಿಂಬಕ $y = 50 - x$ ಸಹ ಇಳಿಕೆಯ ಬಿಂಬಕವಾಗಿದೆ.

**ಬಿಂಬಕದ ರೇಖಾತ್ಮಕ ನಿರೂಪಣೆ**

$y = f\ (x)$ ರೇಖಾನಕ್ಷೆಯ ಬಿಂಬಕವು ರೇಖಾತ್ಮಕ ನಿರೂಪಣೆಯಾಗಿದೆ. ಮೇಲೆ ವಿವರಿಸಿದ ಉದಾಹರಣೆಗಳಲ್ಲಿನ ಬಿಂಬಕಗಳನ್ನು ಈ ಕೆಳಗಿನ ರೇಖಾಚಿತ್ರಗಳ ಮೂಲಕ ನಿರೂಪಿಸಲಾಗಿದೆ.




ಸಾಮಾನ್ಯವಾಗಿ ರೇಖಾನಕ್ಷೆಗಳಲ್ಲಿ ಸಮಾನಾಂತರ ಅಕ್ಷದಲ್ಲಿ (OX) ಸ್ವತಂತ್ರ ಚಲಕವನ್ನು, ಲಂಬಾಂತರ (OY) ಅಕ್ಷದಲ್ಲಿ ಅವಲಂಬಿ ಚಲಕವನ್ನು ಮಾಪನ ಮಾಡಲಾಗುತ್ತದೆ. ಆದರೆ ಅರ್ಥಶಾಸ್ತ್ರದಲ್ಲಿ ಇದಕ್ಕೆ ವಿರುದ್ಧವಿರುತ್ತದೆ. ಉದಾಹರಣೆಗೆ ಬೇಡಿಕೆ ರೇಖೆಯನ್ನು ಪಡೆಯುವಾಗ ಸ್ವತಂತ್ರ ಚಲಕವನ್ನು (ಬೆಲೆ) ಲಂಬಾಂತರ OY ಅಕ್ಷದಲ್ಲಿ ಅವಲಂಬಿ ಚಲಕವನ್ನು (ಪ್ರಮಾಣ) ಸಮನಾಂತರ (OX) ಅಕ್ಷದಲ್ಲಿ ಮಾಪನ ಮಾಡಲಾಗುತ್ತದೆ. ಏರಿಕೆಯ ಬಿಂಬಕವನ್ನು ವ್ಯಕ್ತಪಡಿಸುವ ರೇಖೆಯು ಮೇಲ್ಮುಖ ಇಳಿಜಾರನ್ನು, ಇಳಿಕೆಯ ಬಿಂಬಕವನ್ನು ಸೂಚಿಸುವ ರೇಖೆಯು ಇಳಿಮುಖ ಇಳಿಜಾರನ್ನು ಹೊಂದಿರುತ್ತವೆ. ಮೇಲಿನ ರೇಖಾಚಿತ್ರವನ್ನು ಗಮನಿಸಿದಾಗ $y=5+x$. ಬಿಂಬಕವು ಮೇಲ್ಮುಖ ಇಳಿಜಾರನ್ನು, $y = 50 - x$. ಬಿಂಬಕವು ಇಳಿಮುಖ ಇಳಿಜಾರನ್ನು ಹೊಂದಿರುವುದು ಕಂಡುಬರುತ್ತದೆ.

### 2.4.1 ಬೇಡಿಕೆ ರೇಖೆ ಮತ್ತು ಬೇಡಿಕೆಯ ನಿಯಮ *Demand Curve and the Law of Demand*

ಇತರೆ ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ, ಅಭಿರುಚಿ ಮತ್ತು ಒಲವು ಸ್ಥಿರವಾಗಿದ್ದಾಗ, ಅನುಭೋಗಿಯು ಆದರ್ಶ ಆಯ್ಕೆ ಮಾಡುವ ಸರಕಿನ ಪ್ರಮಾಣವು ಸಂಪೂರ್ಣವಾಗಿ ಆ ಸರಕಿನ ಬೆಲೆಯನ್ನು ಅವಲಂಬಿಸಿರುತ್ತದೆ. ಅನುಭೋಗಿಯು ಕೊಂಡುಕೊಳ್ಳಲು ಬಯಸುವ ಒಂದು ನಿರ್ದಿಷ್ಟ ಪ್ರಮಾಣದ ಸರಕಿನ ಆದರ್ಶ ಆಯ್ಕೆ ಮತ್ತು ಅದರ ಬೆಲೆಯ ನಡುವಿನ ಸಂಬಂಧವು ಬಹಳ ಮುಖ್ಯವಾಗಿದ್ದು ಈ ಸಂಬಂಧವನ್ನೇ **ಬೇಡಿಕೆಯ ಬಿಂಬಕ**ವೆಂದು ಕರೆಯಲಾಗುತ್ತದೆ. ಹೀಗೆ ಅನುಭೋಗಿಯ ಬೇಡಿಕೆ ಬಿಂಬಕವು ಇತರೆ ಸ್ಥಿತಿಗತಿಗಳು ಸ್ಥಿರವಾಗಿದ್ದಾಗ ಅನುಭೋಗಿಯು ವಿವಿಧ ಬೆಲೆಯ ಮಟ್ಟದಲ್ಲಿ ಆಯ್ಕೆ ಮಾಡಬಹುದಾದ ಒಂದು ನಿರ್ದಿಷ್ಟ ಸರಕಿನ ಪ್ರಮಾಣವನ್ನು ವ್ಯಕ್ತಪಡಿಸುತ್ತದೆ. ಒಂದು ಸರಕಿಗೆ ಇರುವ ಅನುಭೋಗಿಯ ಬೇಡಿಕೆಯನ್ನು ಬೆಲೆಯ ಬಿಂಬಕವಾಗಿ ಈ ಕೆಳಗಿನಂತೆ ಬರೆಯಬಹುದು.

$$X = f(P) \tag{2.12}$$

ಇಲ್ಲಿ X ಸರಕಿನ ಪ್ರಮಾಣವನ್ನು, P ಸರಕಿನ ಬೆಲೆಯನ್ನು ಸೂಚಿಸುತ್ತವೆ.

ಬೇಡಿಕೆ ಬಿಂಬಕವನ್ನು ರೇಖಾಚಿತ್ರ 2.13ರಲ್ಲಿ ತೋರಿಸಿರುವಂತೆ ರೇಖಾತ್ಮಕವಾಗಿ ನಿರೂಪಿಸಬಹುದು. ಬೇಡಿಕೆಯ ಬಿಂಬಕದ ರೇಖಾತ್ಮಕ ನಿರೂಪಣೆಯನ್ನು ಬೇಡಿಕೆಯ ರೇಖೆಯೆಂದು ಕರೆಯಲಾಗುತ್ತದೆ. ಒಂದು ಸರಕಿಗೆ ಇರುವ ಅನುಭೋಗಿಯ ಬೇಡಿಕೆ ಪ್ರಮಾಣ ಮತ್ತು ಅದರ ಬೆಲೆಯ ನಡುವೆ ಇರುವ ಸಂಬಂಧವು ಸಾಮಾನ್ಯವಾಗಿ ಋಣಾತ್ಮಕವಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಒಂದು ನಿರ್ದಿಷ್ಟ ಸರಕಿನ ಬೆಲೆ ಕಡಿಮೆಯಾದರೆ, ಅನುಭೋಗಿಯು ಆದರ್ಶವಾಗಿ ಆಯ್ಕೆಮಾಡಿ ಕೊಳ್ಳಬಹುದಾದ ಆ ಸರಕಿನ ಪ್ರಮಾಣ ಹೆಚ್ಚಾಗುತ್ತದೆ ಮತ್ತು ಸರಕಿನ ಬೆಲೆ ಹೆಚ್ಚಳದೊಂದಿಗೆ ಅನುಭೋಗಿಯು ಆಯ್ಕೆ ಮಾಡಿಕೊಳ್ಳುವ ಸರಕಿನ ಪ್ರಮಾಣ ಕಡಿಮೆಯಾಗುತ್ತದೆ.




**ರೇಖಾಚಿತ್ರ 2.13 ಬೇಡಿಕೆರೇಖೆ:** ನಿರ್ದಿಷ್ಟ ಸರಕಿನ ಬೆಲೆ ಮತ್ತು ಅನುಭೋಗಿಗಳಿಂದ ಆಯ್ಕೆ ಮಾಡಲ್ಪಡುವ ಆ ಸರಕಿನ ಪ್ರಮಾಣಗಳ ನಡುವಿನ ಸಂಬಂದವೇ ಬೇಡಿಕೆಯ ರೇಖೆ. ಲಂಬಾಕ್ಷದ ಮೂಲಕ ಸ್ವತಂತ್ರ ಚಲಕ (ಬೆಲೆ)ವನ್ನು ಮಾಪನ ಮಾಡಲಾಗಿದೆ, ಮತ್ತು ತಲಾಕ್ಷದ ಮೂಲಕ ಅವಲಂಬಿ ಚಲಕ(ಪ್ರಮಾಣ)ವನ್ನು ಮಾಪನ ಮಾಡಲಾಗಿದೆ. ಬೇಡಿಕೆಯ ರೇಖೆಯು ಅನುಭೋಗಿಯು ಪ್ರತಿಯೊಂದು ಬೆಲೆಯಲ್ಲಿ ವ್ಯಕ್ತಪಡಿಸುವ ಬೇಡಿಕೆ ಪ್ರಮಾಣವನ್ನು ವ್ಯಕ್ತಪಡಿಸುತ್ತದೆ.

### 2.4.2 ಔದಸಿನ್ಯ ವಕ್ರರೇಖೆಗಳು ಮತ್ತು ಬಜೆಟ್ ನಿರ್ಬಂದಗಳಿಂದ ಬೇಡಿಕೆ ರೇಖೆಯನ್ನು ಪಡೆಯುವುದು *Deriving a Demand Curve from Indifference Curves and Budget Constraints*

ಬಾಳೆಹಣ್ಣು ($x_1$) ಮತ್ತು ಮಾವಿನಹಣ್ಣು ($x_2$)ಗಳನ್ನು ಅನುಭೋಗಿಸುವ ಒಬ್ಬ ಅನುಭೋಗಿಯನ್ನು ಪರಿಗಣಿಸೋಣ ಅವಳ ಆದಾಯ $M$ ಆಗಿದ್ದು $x_1$ ಮತ್ತು $x_2$ಗಳ ಮಾರುಕಟ್ಟೆ ಬೆಲೆಗಳು ಕ್ರಮವಾಗಿ $P_1'$ ಮತ್ತು $P_2'$ ಆಗಿದೆ ಎಂದು ಕೊಳ್ಳೋಣ ಆಕೆಯು ಕ್ರಮವಾಗಿ $X_1'$ ಮತ್ತು $X_2'$ ಪ್ರಮಾಣಗಳಷ್ಟು ಬಾಳೆಹಣ್ಣುಗಳನ್ನು ಮತ್ತು ಮಾವಿನಹಣ್ಣುಗಳನ್ನು ಕೊಂಡುಕೊಂಡು ಅನುಭೋಗದ ಸಮತೋಲನವನ್ನು (ಬಿಂದುವಿನಲ್ಲಿ ಹೊಂದುತ್ತಾಳೆಂಬುದನ್ನು ಚಿತ್ರ (2.14) ಯು ತೋರಿಸುತ್ತದೆ (ಚಿತ್ರ 2.14) ಚಿತ್ರ 2.14ರ ಫಲಕ 'ಬಿ'ನಲ್ಲಿ $X_1'$ಗೆ ಎದುರಾಗಿ $P_1'$ ಅನ್ನು ಗುರುತ್ತಿಸುತ್ತೇವೆ ಇದು $X_1$ನ ಬೇಡಿಕೆ ರೇಖೆಯ ಮೊದಲನೇ ಬಿಂದುವಾಗಿದೆ.




$X_1$ನ ಬೆಲೆಯು $\overline{P}$ಗೆ ಕಡಿಮೆಯಾಗಿದೆ ಮತ್ತು M ಸ್ಥಿರವಾಗಿದೆ ಎಂದು ಕೊಳ್ಳೋಣ. ಫಲಕ (a)ದಲ್ಲಿ ಬಜೆಟ್‌ಗಣವು ವಿಸ್ತೃತಗೊಳ್ಳುತ್ತದೆ ಮತ್ತು ಹೊಸ ಅನುಭೋಗ ಸಮತೋಲನವು, ಎತ್ತರದ ಔದಾಸೀನ್ಯ ವಕ್ರರೇಖೆಯು ಮೇಲೆ ಬಿಂದು D ಆಗುತ್ತದೆ ಇಲ್ಲಿ ಅನುಭೋಗಿಯು ಬಾಳೆಹಣ್ಣುಗಳನ್ನು ಹೆಚ್ಚು ಕೊಂಡುಕೊಳ್ಳುತ್ತಾಳೆ $\left(\overline{X}_1 > X'_1\right)$. ಹೀಗೆ ಬಾಳೆಹಣ್ಣಿನ ಬೆಲೆ ಇಳಿದಂತೆ ಅದರ ಬೇಡಿಕೆಯು ಹೆಚ್ಚುತ್ತದೆ. $\underline{X}$ನ ಬೇಡಿಕೆರೇಖೆಯ ಎರಡನೇ ಬಿಂದುವನ್ನು ಪಡೆಯಲು ಚಿತ್ರ 2.14ರ 'ಬಿ' ಫಲಕದಲ್ಲಿರುವಂತೆ $\overline{P}_1$ ಅನ್ನು $\overline{X}_1$ನ ಎದುರಾಗಿ ಗುರುತಿಸೋಣ. ಇದೇ ರೀತಿ, ಬಾಳೆಹಣ್ಣಿನ ಬೆಲೆಯು ^ ಗೆ ಮತ್ತೆ ಕಡಿಮೆಯಾದರೆ,

ಬಾಳೆಹಣ್ಣಿನ ಅನುಭೋಗವು $\hat{X}_1$ಗೆ ಹೆಚ್ಚುತ್ತದೆ. $\hat{X}_1$ ನ ಎದುರಾಗಿ $\hat{P}_1$ಅನ್ನು ಗುರುತಿಸಿದಾಗ ಅದು ಬೇಡಿಕೆ ರೇಖೆಯ ಮೂರನೇ ಬಿಂದುವನ್ನು ನೀಡುತ್ತದೆ. ಆದ್ದರಿಂದ ತನ್ನ ತುಷ್ಟಿಗುಣವನ್ನು ಗರಿಷ್ಠಗೊಳಿಸಿಕೊಳ್ಳುವ ಒಬ್ಬ ವ್ಯಕ್ತಿಯು, ಬಾಳೆಹಣ್ಣಿನ ಬೆಲೆ ಇಳಿಕೆಯ ಪರಿಣಾಮವಾಗಿ ಅದನ್ನು ಕೊಂಡುಕೊಳ್ಳುವ ಪ್ರಮಾಣವನ್ನು ಹೆಚ್ಚಿಸಿಕೊಳ್ಳುತ್ತಾಳೆಂದು ನಾವು ಗಮನಿಸುತ್ತೇವೆ, ಹೀಗಾಗಿ ಬಾಳೆಹಣ್ಣಿನ ಬೇಡಿಕೆ ರೇಖೆಯು ಋಣಾತ್ಮಕ ಇಳಿಜಾರನ್ನು ಹೊಂದಿದೆ.

ಬೇಡಿಕೆ ರೇಖೆಯ ಋಣಾತ್ಮಕ ಇಳಿಜಾರನ್ನು ಎರಡು ಪರಿಣಾಮವಗಳ ರೂಪದಲ್ಲಿಯೂ ವಿವರಿಸಬಹುದು ಅವುಗಳೆಂದರೆ ಬದಲಿಕೆಯ ಪರಿಣಾಮ ಮತ್ತು ಆದಾಯದ ಪರಿಣಾಮ – ಇವು ಒಂದು ಸರಕಿನ ಬೆಲೆ ಬದಲಾವಣೆಗೊಂಡಾಗ ತಮ್ಮ ಪಾತ್ರವನ್ನು ವಹಿಸುತ್ತವೆ.

ಬಾಳೆಹಣ್ಣು ಅಗ್ಗವಾದಾಗ, ಮಾವಿನ ಹಣ್ಣಿಗೆ ಬದಲಾಗಿ ಬಾಳೆಹಣ್ಣನ್ನು ಬದಲಿಸಿಕೊಳ್ಳುವುದರಿಂದ ಅದೇ ಮಟ್ಟದ ತೃಪ್ತಿಯನ್ನು ಪಡೆದುಕೊಳ್ಳುತ್ತಾಳೆ ಇದರ ಪರಿಣಾಮ ಬಾಳೆಹಣ್ಣಿನ ಬೇಡಿಕೆಯು ಅಧಿಕಗೊಳ್ಳುತ್ತದೆ.

ಇದೂ ಅಲ್ಲದೇ ಬಾಳೆಹಣ್ಣಿನ ಬೆಲೆ ಅಗ್ಗವಾದಾಗ ಅನುಭೋಗಿಯ ಕೊಳ್ಳುವ ಶಕ್ತಿಯು ಅಧಿಕಗೊಳ್ಳುತ್ತದೆ, ಇದು ಬಾಳೆಹಣ್ಣುಗಳ (ಮಾವಿನಹಣ್ಣುಗಳ) ಬೇಡಿಕೆಯನ್ನು ಮತ್ತುಷ್ಟು ಹೆಚ್ಚಿಸುತ್ತದೆ. ಇದನ್ನು ಬೆಲೆ ಬದಲಾವಣೆಯ ಆದಾಯದ ಪರಿಣಾಮ ಎನ್ನುತ್ತೇವೆ ಇದರಿಂದ ಬಾಳೆಹಣ್ಣುಗಳ ಬೇಡಿಕೆ ಮತ್ತಷ್ಟು ಹೆಚ್ಚುತ್ತದೆ.



**ಬೇಡಿಕೆ ನಿಯಮ** : ಇತರ ಸ್ಥಿತಿಗತಿಗಳ ಸ್ಥಿರವಾಗಿದ್ದಾಗ ಒಂದು ಸರಕಿನ ಬೆಲೆ ಮತ್ತು ಬೇಡಿಕೆಯ ನಡುವೆ ಋಣಾತ್ಮಕ ಸಂಬಂಧವಿರುತ್ತದೆ ಅಂದರೆ ಒಂದು ಸರಕಿನ ಬೆಲೆ ಹೆಚ್ಚಾದಾಗ ಅದರ ಬೇಡಿಕೆಯು ಕಡಿಮೆಯಾಗುತ್ತದೆ ಮತ್ತು ಒಂದು ಸರಕಿನ ಬೆಲೆ ಕಡಿಮೆಯಾದಾಗ ಇತರ ಅಂಶಗಳು ಸ್ಥಿರವಾಗಿದ್ದಾಗ, ಅದರ ಬೇಡಿಕೆಯು ಹೆಚ್ಚುತ್ತದೆ.

**ಸರಳಾ ರೇಖಾ ಬೇಡಿಕೆ**

ಒಂದು ಸರಳಾರೇಖಾ ಬೇಡಿಕೆಯ ರೇಖೆಯನ್ನು ಸಮೀಕರಣ ರೂಪದಲ್ಲಿ ಈ ಕೆಳಗಿನಂತೆ ಬರೆಯಬಹುದು.

$$d(p) = a - bp \; ; \; 0 \le p \le \frac{a}{b} = 0$$

$$= 0 \; ; \; p > \frac{a}{b} \qquad (2.13)$$

ಈ ಮೇಲಿನ ಸಮೀಕರಣದಲ್ಲಿ '$a$' ಲಂಬಾಂತರ ಛೇದಕವಾಗಿದೆ. '$-b$' ಬೇಡಿಕೆರೇಖೆಯ ಇಳಿಜಾರು ಆಗಿದೆ. ಶೂನ್ಯ ಬೆಲೆಯಲ್ಲಿ ಒಂದು ನಿರ್ದಿಷ್ಟ ಸರಕಿಗಿರುವ ಬೇಡಿಕೆಯು '$a$' ಆಗಿದೆ. ಬೆಲೆ $\frac{a}{b}$ ಗೆ ಸಮನಾದರೆ ಬೇಡಿಕೆ '$o$' ಆಗಿದೆ. ಬೇಡಿಕೆ ರೇಖೆಯ ಇಳಿಜಾರು ಒಂದು ಸರಕಿನ ಬೆಲೆಯ ಬದಲಾವಣೆಗೆ ಅನುಗುಣವಾಗಿ ಬೇಡಿಕೆಯಲ್ಲಿ ಯಾವ ದರದಲ್ಲಿ ಬದಲಾವಣೆಯಾಗುತ್ತದೆ ಎಂಬುದನ್ನು ಮಾಪನ ಮಾಡುತ್ತದೆ. ನಿರ್ದಿಷ್ಟ ಸರಕಿನ ಬೆಲೆ ಒಂದು ಘಟಕದಷ್ಟು ಹೆಚ್ಚಾದರೆ, ಅದರ ಬೇಡಿಕೆಯು '$b$' ಘಟಕದಷ್ಟು ಕಡಿಮೆಯಾಗುತ್ತದೆ. ರೇಖಾಚಿತ್ರ 2.15 ಸರಳಾರೇಖಾ ಬೇಡಿಕೆರೇಖೆಯನ್ನು ಚಿತ್ರಿಸುತ್ತದೆ.




**ರೇಖಾಚಿತ್ರ 2.15** ಸರಳಾರೇಖಾ ಬೇಡಿಕೆರೇಖೆ. ಸಮೀಕರಣ 2.15ನ್ನು ಪ್ರತಿನಿಧಿಸುವ ಸರಳಾರೇಖಾ ಬೇಡಿಕೆ ರೇಖೆಯನ್ನು ರೇಖಾಚಿತ್ರದಲ್ಲಿ ತೋರಿಸಲಾಗಿದೆ.

### 2.4.3 ಸಾಮಾನ್ಯ ಮತ್ತು ಕೆಳದರ್ಜೆಯ ಸರಕುಗಳು *Normal and Inferior Goods*

ಇತರೆ ಸ್ಥಿತಿಗತಿಗಳು ಸ್ಥಿರವಾಗಿದ್ದಾಗ (ನೀಡಿದ್ದಾಗ) ಒಂದು ಸರಕಿನ ಬೆಲೆ ಮತ್ತು ಆ ಸರಕಿಗಿರುವ ಅನುಭೋಗಿಯ ಬೇಡಿಕೆಯ ನಡುವಿನ ಸಂಬಂದವನ್ನು ವ್ಯಕ್ತಪಡಿಸುವುದೇ ಬೇಡಿಕೆ ಬಿಂಬಕ. ಒಂದು ಸರಕಿನ ಬೇಡಿಕೆ ಮತ್ತು ಅದರ ಬೆಲೆಯ ನಡುವಿನ ಸಂಬಂದವನ್ನು ಅಧ್ಯಯನ ಮಾಡುವುದರ ಬದಲಾಗಿ ಅನುಭೋಗಿಯ ಬೇಡಿಕೆ ಮತ್ತು ಅನುಭೋಗಿಯ ಆದಾಯದ ನಡುವಿನ ಸಂಬಂದವನ್ನು ಸಹ ನಾವು ಅಧ್ಯಯನ ಮಾಡಬಹುದು. ಅನುಭೋಗಿಯ ಆದಾಯ ಹೆಚ್ಚಾದಂತೆ ಒಂದು ಸರಕಿಗಿರುವ ಅನುಭೋಗಿಯ ಬೇಡಿಕೆಯ ಪ್ರಮಾಣ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಇದು ಕೊಳ್ಳುವ ಸರಕಿನ ಸ್ವರೂಪದ ಮೇಲೆ ಅವಲಂಬಿತವಾಗಿದೆ. ಬಹಳಷ್ಟು ಸರಕುಗಳಿಗೆ, ಅನುಭೋಗಿಯ ಆದಾಯ ಹೆಚ್ಚಾದಂತೆ, ಬೇಡಿಕೆಯ ಪ್ರಮಾಣವು ಹೆಚ್ಚಾಗುತ್ತದೆ. ಮತ್ತು ಅನುಭೋಗಿಯ ಆದಾಯ ಕಡಿಮೆಯಾದಂತೆ, ಬೇಡಿಕೆಯ ಪ್ರಮಾಣವು ಕಡಿಮೆಯಾಗುತ್ತದೆ. ಇಂತಹ ಸರಕುಗಳನ್ನು **ಸಾಮಾನ್ಯ ಸರಕುಗಳೆಂದು** ಕರೆಯಾಲಾಗುತ್ತದೆ. ಈ ರೀತಿ ಸಾಮಾನ್ಯ ಸರಕುಗಳಿಗಿರುವ ಬೇಡಿಕೆಯು ಅನುಭೋಗಿಯ ಆದಾಯದ ದಿಕ್ಕಿನಲ್ಲಿಯೇ ಚಲಿಸುತ್ತದೆ. ಆದಾಗ್ಯೂ ಕೆಲವು ಸರಕುಗಳ ಬೇಡಿಕೆಯು ಅನುಭೋಗಿಯ ಆದಾಯದ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತವೆ. ಇಂತಹ ಸರಕುಗಳನ್ನು **ಕೆಳದರ್ಜೆಯ ಸರಕುಗಳು** ಎಂದು ಕರೆಯಲಾಗುತ್ತದೆ. ಅನುಭೋಗಿಯ ಆದಾಯ ಹೆಚ್ಚಾದಂತೆ, ಕೆಳದರ್ಜೆ ಸರಕುಗಳಿಗಿರುವ ಬೇಡಿಕೆಯು ಕಡಿಮೆಯಾಗುತ್ತದೆ. ಮತ್ತು ಅನುಭೋಗಿಯ ಆದಾಯ ಕಡಿಮೆಯಾದಂತೆ ಕೆಳದರ್ಜೆ ಸರಕುಗಳಿಗಿರುವ ಬೇಡಿಕೆ ಹೆಚ್ಚಾಗುತ್ತದೆ ಉದಾಹರಣೆಗೆ ನವಣೆ, ಸಜ್ಜೆ, ಬಾರ್ಲಿ, ಆರ್ಕ, ರಾಗಿ ಇತ್ಯಾದಿ (ಒರಟು ಧಾನ್ಯಗಳು) ಸಿರಿಧಾನ್ಯಗಳು.

> ಅನುಭೋಗಿಯ ಕೊಳ್ಳುವ ಸಾಮರ್ಥ್ಯದಲ್ಲಿನ (ಆದಾಯದ) ಹೆಚ್ಚಳವು ಕೆಲವೊಮ್ಮ ಒಂದು ಸರಕಿನ ಅನುಭೋಗವನ್ನು ಕಡಿಮೆ ಮಾಡುವಂತೆ ಪ್ರೇರೇಪಿಸಬಹುದು ಅಂತಹ ಸಂದರ್ಭದಲ್ಲಿ ಬದಲಿಕೆ ಪರಿಣಾಮ ಮತ್ತು ಆದಾಯದ ಪರಿಣಾಮಗಳು ವಿರುದ್ಧ ದಿಕ್ಕಿನಲ್ಲಿ ಕೆಲಸ ಮಾಡಬಹುದು ಈ ಎರಡು ವಿರುದ್ಧ ಪರಿಣಾಮಗಳ ಸಾಪೇಕ್ಷ ಬಲವನ್ನು ಅವಲಂಬಿಸಿ ಅಂತಹ ಸರಕಿನ ಬೇಡಿಕೆ ರೇಖೆಯು ಅದರ ಬೆಲೆಗೆ ನೇರ ಸಂಬಂಧ ಅಥವಾ ವಿರುದ್ಧ ಸಂಬಂಧವನ್ನು ಹೊಂದಿರಬಹುದು. ಆದಾಯದ ಪರಿಣಾಮಕ್ಕಿಂತ ಬದಲಿಕೆ ಪರಿಣಾಮವು ಹೆಚ್ಚು ಬಲಯುತವಾಗಿದ್ದಲ್ಲಿ ಸರಕಿನ ಬೇಡಿಕೆ ಮತ್ತು ಬೆಲೆ ವಿರುದ್ಧ ಸಂಬಂಧವನ್ನು ಹೊಂದಬಹುದು. ಆದಾಗ್ಯೂ ಬದಲಿಕೆ ಪರಿಣಾಮಕ್ಕಿಂತ ಆದಾಯದ ಪರಿಣಾಮವು ಹೆಚ್ಚು ಬಲವಾಗಿದ್ದರೆ ಬೇಡಿಕೆಯು ಅದರ ಬೆಲೆಗೆ ನೇರ ಸಂಬಂಧವನ್ನು ಹೊಂದಿರಬಹುದು. ಇಂತಹ ಸರಕನ್ನು **ಗಿಫಿನ್ ಸರಕು** ಎಂದು ಕರೆಯುತ್ತೇವೆ.

ಒಂದು ಸರಕು, ಕೆಲವು ಆದಾಯದ ಮಟ್ಟದಲ್ಲಿ ಒಬ್ಬ ಅನುಭೋಗಿಗೆ ಸಾಮಾನ್ಯ ಸರಕಾಗಿರಬಹುದು ಮತ್ತು ಅದೇ ಅನುಭೋಗಿಗೆ ಇತರ ಆದಾಯದ ಮಟ್ಟಗಳಲ್ಲಿ ಆ ಸರಕು ಕೆಳದರ್ಜೆಯ ಸರಕುಗಳಾಗಬಹುದು. ಅತಿ ಕೆಳಮಟ್ಟದ ಆದಾಯ ಮಟ್ಟದಲ್ಲಿ ಅನುಭೋಗಿಯ ಆದಾಯ ಹೆಚ್ಚಾದಂತೆ ಕಡಿಮೆಗುಣಮಟ್ಟದ ಧಾನ್ಯಗಳಿಗೆ ಬೇಡಿಕೆ ಹೆಚ್ಚಾಗಬಹುದು. ಆದರೆ ಆದಾಯದ ಒಂದು ನಿರ್ದಿಷ್ಟ ಹಂತವನ್ನು ತಲುಪಿದ ನಂತರ ಆದಾಯ ಹೆಚ್ಚಾದಂತೆ, ಅನುಭೋಗಿಯು ಕೆಳದರ್ಜೆ ಆಹಾರ ಸರಕುಗಳ ಅನುಭೋಗವನ್ನು ಕಡಿಮೆ ಮಾಡಿ ಉತ್ತಮ ದರ್ಜೆಯ ಸರಕುಗಳನ್ನು ಹೆಚ್ಚು ಮಾಡುತ್ತಾಳೆ.

### 2.4.4 ಬದಲಿ ಸರಕುಗಳು ಮತ್ತು ಪೂರಕ ಸರಕುಗಳು *Substitutes and Complements*

ನಾವೀಗ ಅನುಭೋಗಿಯು ಆಯ್ಕೆ ಮಾಡಿಕೊಳ್ಳುವ ಸರಕೊಂದರ ಬೇಡಿಕೆಯ ಪ್ರಮಾಣ ಮತ್ತು ಅದರ ಸಂಬಂಧಿತ ಸರಕಿನ ಬೆಲೆಯ ನಡುವಿನ ಸಂಬಂದವನ್ನು ಪರಿಶೀಲಿಸೋಣ. ಸಂಬಂಧಿತ ಸರಕೊಂದರ ಬೆಲೆಯಲ್ಲಿ ಹೆಚ್ಚಳವಾದಂತೆ ಅನುಭೋಗಿಯು ಕೊಳ್ಳುವ ಸರಕಿನ ಪ್ರಮಾಣ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಇದು ಆ ಎರಡು ಸರಕುಗಳು ಪರಸ್ಪರ ಬದಲೀ ಸರಕುಗಳೇ ಅಥವಾ ಪೂರಕ ಸರಕುಗಳೇ ಎಂಬುವುದರ ಮೇಲೆ ಅವಲಂಬಿತವಾಗಿರುತ್ತದೆ. ಒಂದು ನಿರ್ದಿಷ್ಟ ಬಯಕೆಯನ್ನು ತೃಪ್ತಿಪಡಿಸಿಕೊಳ್ಳಲು ಒಟ್ಟಿಗೆ ಅನುಭೋಗಿಸಲಾಗುವ ಸರಕುಗಳನ್ನು ಪರಸ್ಪರ **ಪೂರಕ ಸರಕುಗಳು** ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಚಹಾ ಮತ್ತು ಸಕ್ಕರೆ, ಪೆನ್ನು ಮತ್ತು ಶಾಹಿ(ಇಂಕು), ಶೂಗಳು ಮತ್ತು ಸಾಕ್ಸ್‌ಗಳು ಇತ್ಯಾದಿ. ಚಹಾ ಮತ್ತು ಸಕ್ಕರೆಯನ್ನು ಒಟ್ಟಿಗೆ ಬಳಸುವುದರಿಂದ, ಸಕ್ಕರೆಯ ಬೆಲೆ ಹೆಚ್ಚಾದರೆ, ಚಹಾಕ್ಕೆ ಬೇಡಿಕೆ ಕಡಿಮೆಯಾಗುತ್ತದೆ. ಹಾಗೆಯೇ ಸಕ್ಕರೆಯ ಬೆಲೆ ಕಡಿಮೆಯಾದರೆ, ಚಹಾದ ಬೇಡಿಕೆ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಇತರೆ ಪೂರಕ ಸರಕುಗಳ ಸನ್ನಿವೇಶದಲ್ಲಿಯೂ ಹೀಗೆಯೇ ಇರುತ್ತದೆ. ಸಾಮಾನ್ಯವಾಗಿ ಒಂದು ಸರಕಿನ ಬೇಡಿಕೆಯು ಅದರ ಪೂರಕ ಸರಕಿನ ಬೆಲೆಯೊಂದಿಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ.

ಪೂರಕ ಸರಕುಗಳಿಗೆ ಭಿನ್ನವಾಗಿ ಚಹಾ, ಕಾಫಿ, ಇಂತಹ ಸರಕುಗಳನ್ನು ಒಟ್ಟಾಗಿ ಅನುಭೋಗಿಸುವುದಿಲ್ಲ. ವಾಸ್ತವವಾಗಿ ಅವುಗಳು ಪರಸ್ಪರ ಬದಲಿ ಸರಕುಗಳಾಗಿವೆ. ಕಾಫಿಗೆ, ಚಹಾವು ಬದಲೀ ಸರಕಾಗಿರುವುದರಿಂದ ಕಾಫಿಯ ಬೆಲೆ ಹೆಚ್ಚಾದರೆ ಅನುಭೋಗಿಗಳು ಚಹಾಕ್ಕೆ ತಮ್ಮ ಬೇಡಿಕೆಯನ್ನು ಬದಲಾಯಿಸಿಕೊಳ್ಳಬಹುದು ಹಾಗಾಗಿ ಚಹಾದ ಅನುಭೋಗ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಮತ್ತೊಂದು ರೀತಿಯಲ್ಲಿ ಕಾಫಿಯ ಬೆಲೆಯಲ್ಲಿ ಇಳಿಕೆಯಾದರೆ ಚಹಾದ ಬೇಡಿಕೆ ಕಡಿಮೆಯಾಗುತ್ತದೆ. ಸಾಮಾನ್ಯವಾಗಿ ಒಂದು ಸರಕಿನ ಬೇಡಿಕೆಯು ಅದರ ಬದಲಿ ಸರಕುಗಳ ಬೆಲೆಯ ದಿಕ್ಕಿನಲ್ಲಿ ಚಲಿಸುತ್ತದೆ.

### 2.4.5 ಬೇಡಿಕೆ ರೇಖೆಯಲ್ಲಿನ ಪಲ್ಲಟಗಳು *Shifts in the demand curve*

ಅನುಭೋಗಿಯ ಆದಾಯ ಅಭಿರುಚಿ ಮತ್ತು ಒಲವು, ಹಾಗೂ ಇತರೆ ಸರಕುಗಳ ಬೆಲೆಗಳನ್ನು ನೀಡಲಾಗಿದೆ ಎಂಬ ಕಲ್ಪನೆಯ ಆಧಾರದ ಮೇಲೆ ಬೇಡಿಕೆ ರೇಖೆಯನ್ನು ರಚಿಸಲಾಗಿದೆ. ಒಂದು ವೇಳೆ ಈ ಸಂಗತಿಗಳಲ್ಲಿ ಬದಲಾವಣೆಯಾದರೆ ಬೇಡಿಕೆ ರೇಖೆಗೆ ಏನಾಗುತ್ತದೆ ?

ಒಬ್ಬ ಅನುಭೋಗಿಯ ಆದ್ಯತೆಗಳು ಮತ್ತು ಇತರೆ ಸರಕುಗಳ ಬೆಲೆಗಳನ್ನು ನೀಡಿದ್ದಾಗ, ಆಕೆಯ ಆದಾಯದಲ್ಲಿ ಹೆಚ್ಚಳ ಉಂಟಾದರೆ, ಸರಕಿನ ಬೇಡಿಕೆಯು ಪ್ರತಿ ಬೆಲೆಗಳಲ್ಲಿ ಬದಲಾವಣೆಗೊಳ್ಳುತ್ತದೆ ಮತ್ತು ಇದರಿಂದ ಬೇಡಿಕೆ ರೇಖೆಯಲ್ಲಿ ಪಲ್ಲಟ ಉಂಟಾಗುತ್ತದೆ. ಸಾಮಾನ್ಯ ಸರಕುಗಳಿಗೆ ಬೇಡಿಕೆರೇಖೆಯು ಬಲಭಾಗಕ್ಕೆ ಪಲ್ಲಟಗೊಳ್ಳುತ್ತದೆ ಹಾಗೂ ಕೆಳದರ್ಜೆಯ ಸರಕುಗಳಿಗೆ ಬೇಡಿಕೆ ರೇಖೆಯು ಎಡಭಾಗಕ್ಕೆ ಪಲ್ಲಟಗೊಳ್ಳುತ್ತದೆ.





ಅನುಭೋಗಿಯ ಆದಾಯ ಮತ್ತು ಆದ್ಯತೆಗಳನ್ನು ನೀಡಿದ್ದಾಗ ಸಂಬಂಧಿತ ಸರಕಿನ ಬೆಲೆಯಲ್ಲಿ ಬದಲಾವಣೆ ಉಂಟಾದರೆ, ಆ ಸರಕಿನ ಬೇಡಿಕೆಯು ಪ್ರತಿ ಬೆಲೆಗಳ ಮಟ್ಟದಲ್ಲಿ ಬದಲಾವಣೆಗೊಳ್ಳುತ್ತದೆ ಮತ್ತು ಇದರಿಂದ ಬೇಡಿಕೆ ರೇಖೆಯು ಪಲ್ಲಟಗೊಳ್ಳುತ್ತದೆ. ಬದಲಿ ಸರಕಿನ ಬೆಲೆಯಲ್ಲಿ ಏರಿಕೆ ಉಂಟಾದರೆ ಬೇಡಿಕೆ ರೇಖೆಯು ಬಲಗಡೆ ಪಲ್ಲಟಗೊಳ್ಳುತ್ತದೆ ಮತ್ತೊಂದು ರೀತಿಯಲ್ಲಿ, ಪೂರಕ ಸರಕಿನ ಬೆಲೆಯಲ್ಲಿ ಏರಿಕೆ ಉಂಟಾದರೆ ಬೇಡಿಕೆ ರೇಖೆಯು ಎಡಗಡೆಗೆ ಪಲ್ಲಟಗೊಳ್ಳುತ್ತದೆ.

ಅನುಭೋಗಿಯ ಅಭಿರುಚಿ ಮತ್ತು ಆದ್ಯತೆಗಳಲ್ಲಿ ಬದಲಾವಣೆ ಉಂಟಾದರೂ ಕೂಡ ಬೇಡಿಕೆ ರೇಖೆಯು ಪಲ್ಲಟಗೊಳ್ಳುತ್ತದೆ. ಒಂದು ಸರಕಿನ ಪರವಾಗಿ ಅನುಭೋಗಿಯ ಆದತ್ಯೆಗಳು ಬದಲಾವಣೆಯಾದರೆ, ಅಂತಹ ಸರಕಿನ ಬೇಡಿಕೆ ರೇಖೆಯು ಬಲಗಡೆಗೆ ಪಲ್ಲಟಗೊಳ್ಳುತ್ತದೆ. ಇದಕ್ಕೆ ಪ್ರತಿಯಾಗಿ, ಒಂದು ಸರಕಿನ ವಿರುದ್ಧವಾಗಿ ಅನುಭೋಗಿಯ ಅಭಿರುಚಿ ಮತ್ತು ಆದ್ಯತೆಗಳು ಬದಲಾವಣೆಯಾದರೆ ಬೇಡಿಕೆರೇಖೆಯು ಎಡಗಡೆಗೆ ಪಲ್ಲಟಗೊಳ್ಳುತ್ತದೆ. ಉದಾಹರಣೆ ಬೇಸಿಗೆ ಕಾಲದಲ್ಲಿ ಅನುಭೋಗಿಯು ಐಸ್‌ಕ್ರೀಂ ಕೊಳ್ಳಲು ಹೆಚ್ಚು ಆದ್ಯತೆ ವ್ಯಕ್ತಪಡಿಸುತ್ತಾಳೆ. ಆಗ ಬೇಡಿಕೆ ರೇಖೆಯು ಬಲಭಾಗಕ್ಕೆ ಪಲ್ಲಟಗೊಳ್ಳುತ್ತದೆ. ತಂಪುಪಾನೀಯಗಳು ಆರೋಗ್ಯಕ್ಕೆ ಹಾನಿಕಾರಕವೆಂಬ ಸಂಗತಿಯಿಂದಾಗಿ ಅನುಭೋಗಿಯು ತಂಪುಪಾನೀಯಗಳಿಗೆ ಆದ್ಯತೆ ನೀಡದಿದ್ದರೆ, ಬೇಡಿಕೆಯ ರೇಖೆಯು ಎಡಭಾಗಕ್ಕೆ ಪಲ್ಲಟಗೊಳ್ಳುತ್ತದೆ.




**ರೇಖಾಚಿತ್ರ 2.16** ಬೇಡಿಕೆಯಲ್ಲಿನ ಪಲ್ಲಟ. (*a*) ಭಾಗದಲ್ಲಿರುವ ಬೇಡಿಕೆ ರೇಖೆಯು ಎಡಭಾಗದತ್ತ ಪಲ್ಲಟಗೊಂಡಿದೆ. ಮತ್ತು (*b*) ಭಾಗದಲ್ಲಿರುವ ಬೇಡಿಕೆರೇಖೆಯು ಬಲಕ್ಕೆ ಪಲ್ಲಟಗೊಂಡಿದೆ.

ರೇಖಾಚಿತ್ರ 2.16ರಲ್ಲಿ ಈ ಮೇಲೆ ವಿವರಿಸಿದ ಬಜೆಟ್‌ರೇಖೆಯ ಪಲ್ಲಟವನ್ನು ತೋರಿಸಲಾಗಿದೆ. ಬೆಲೆಯಲ್ಲದೆ ಇತರ ಅಂಶಗಳಲ್ಲಿ ಬದಲಾವಣೆಯಾದಾಗ ಬೇಡಿಕೆ ರೇಖೆಯಲ್ಲಿ ಪಲ್ಲಟ ಉಂಟಾಗುತ್ತದೆಂಬುದುನ್ನು ಇಲ್ಲಿ ಗಮನಿಸಬಹುದು.

### 2.4.6 ಬೇಡಿಕೆ ರೇಖೆಯೊಂದಿಗೆ ಚಲನೆಗಳು ಮತ್ತು ಬೇಡಿಕೆ ರೇಖೆಯ ಪಲ್ಲಟಗಳು. *Movements along the Demand Curve and Shifts in the Demand Curve*

ಅನುಭೋಗಿಯು ಆಯ್ಕೆ ಮಾಡಬಹುದಾದ ಸರಕೊಂದರ ಪ್ರಮಾಣವು, ಆ ಸರಕಿನ ಬೆಲೆ ಇತರೆ ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ, ಅಭಿರುಚಿ ಮತ್ತು ಆದ್ಯತೆ ಅವಲಂಬಿಸಿರುತ್ತದೆಂಬುದನ್ನು ಈ ಹಿಂದಿನ ಚರ್ಚೆಯಿಂದ ತಿಳಿದುಕೊಂಡಿದ್ದೇವೆ. ಬೇಡಿಕೆ ಬಿಂಬಕವು ಇತರೆ ಸ್ಥಿತಿಗತಿಗಳು ಸ್ಥಿರವಾಗಿದ್ದಾಗ, ಸರಕೊಂದರ ಪ್ರಮಾಣ ಮತ್ತು ಅದರ ಬೆಲೆಯ ನಡುವಿನ ಸಂಬಂದವವನ್ನು ವ್ಯಕ್ತಪಡಿಸುತ್ತದೆ. ಬೇಡಿಕೆಯ ಬಿಂಬಕದ ರೇಖಾತ್ಮಕ ನಿರೂಪಣೆಯೇ ಬೇಡಿಕೆಯ ರೇಖೆ. ಅಧಿಕ ಬೆಲೆಯಲ್ಲಿ ಬೇಡಿಕೆಯ ಪ್ರಮಾಣ ಕಡಿಮೆಯಿರುತ್ತದೆ; ಕಡಿಮೆ ಬೆಲೆಯಲ್ಲಿ ಬೇಡಿಕೆಯ ಪ್ರಮಾಣ ಹೆಚ್ಚಾಗಿರುತ್ತದೆ. ಹೀಗಾಗಿ ಬೆಲೆಯಲ್ಲಿನ ಯಾವುದೇ ಬದಲಾವಣೆಯು ಬೇಡಿಕೆ ರೇಖೆಯ ಮೇಲಿನ ಚಲನೆಗೆ ಕಾರಣವಾಗುತ್ತದೆ. ಮತ್ತೊಂದು ಕಡೆ ಇತರೆ ಸ್ಥಿತಿಗಳಲ್ಲಿನ ಬದಲಾವಣೆಯು ಬೇಡಿಕೆ ರೇಖೆಯಲ್ಲಿನ ಪಲ್ಲಟಕ್ಕೆ ಕಾರಣವಾಗುತ್ತದೆ. ರೇಖಾಚಿತ್ರ 2.17 ಬೇಡಿಕೆ ರೇಖೆಯ ಚಲನೆಯನ್ನು ಮತ್ತು ಬೇಡಿಕೆ ರೇಖೆಯಲ್ಲಿನ ಪಲ್ಲಟವನ್ನು ವ್ಯಕ್ತಪಡಿಸುತ್ತದೆ.




**ರೇಖಾಚಿತ್ರ 2.17 ಬೇಡಿಕೆ ರೇಖೆಯೊಂದಿಗಿನ ಚಲನೆ ಮತ್ತು ಬೇಡಿಕೆರೇಖೆಯ ಪಲ್ಲಟ** : ಫಲಕ (*a*)ಯು ಬೇಡಿಕೆ ರೆಖೆಯೊಂದಿಗಿನ ಚಲನೆಯನ್ನು ವ್ಯಕ್ತಪಡಿಸುತ್ತದೆ. ಫಲಕ (*b*)ಯು ಬೇಡಿಕೆ ರೇಖೆಯ ಪಲ್ಲಟವನ್ನು ವ್ಯಕ್ತಪಡಿಸುತ್ತದೆ.

## 2.5 ಮಾರುಕಟ್ಟೆ ಬೇಡಿಕೆ *Market Demand*

ಈ ಹಿಂದಿನ ವಿಭಾಗದಲ್ಲಿ ನಾವು ವೈಯಕ್ತಿಕ ಅನುಭೋಗಿಯ ಆಯ್ಕೆಯ ಸಮಸ್ಯೆಯನ್ನು ಅಧ್ಯಯ ಮಾಡಿದ್ದೇವೆ ಮತ್ತು ಅನುಭೋಗಿಯ. ಬೇಡಿಕೆ ರೇಖೆಯನ್ನು ಪಡಿದಿದ್ದೇವೆ. ಆದರೆ ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಹಲವಾರು ಅನುಭೋಗಿಗಳಿರುತ್ತಾರೆ. ಆ ಸರಕಿಗೆ ಮಾರುಕಟ್ಟೆ ಬೇಡಿಕೆಯನ್ನು ಕಂಡುಹಿಡಿಯುವುದು ಬಹಳ ಪ್ರಮುಖವಾಗಿದೆ. ಒಂದು ನಿರ್ದಿಷ್ಟ ಬೆಲೆಯಲ್ಲಿ ಒಂದು ಸರಕಿಗಿರುವ ಎಲ್ಲಾ ಅನುಭೋಗಿಗಳ ವೈಯಕ್ತಿಕ ಬೇಡಿಕೆಯನ್ನು ಒಟ್ಟುಗೂಡಿಸಿದರೆ, ಅದು ಆ ಸರಕಿನ ಮಾರುಕಟ್ಟೆ ಬೇಡಿಕೆಯಾಗುತ್ತದೆ. ವೈಯಕ್ತಿ ಬೇಡಿಕೆರೇಖೆಗಳಿಂದ ಒಂದು ಸರಕಿನ ಮಾರುಕಟ್ಟೆ ಬೇಡಿಕೆ ರೇಖೆಯನ್ನು ಪಡೆಯಬಹುದು. ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಕೇವಲ ಇಬ್ಬರು ಅನುಭೋಗಿಗಳು ಇದ್ದಾರೆಂದು ಎಂದುಕೊಳ್ಳೋಣ. $p'$ ಬೆಲೆಯಲ್ಲಿ ಮೊದಲನೆ ಅನುಭೋಗಿಯ ಬೇಡಿಕೆಯು $q'_1$ ಮತ್ತು 2ನೇ ಅನುಭೋಗಿಯ ಬೇಡಿಕೆಯು $q'_2$ ಆಗಿರಲಿ. ಆಗ $p'$ ಬೆಲೆಯಲ್ಲಿ ಆ ಸರಕಿನ ಮಾರುಕಟ್ಟೆ ಬೇಡಿಕೆ $q'_1 + q'_2$ ಆಗುತ್ತದೆ. ಇದೇ ರೀತಿ $\hat{p}$ ಬೆಲೆಯಲ್ಲಿ ಮೊದಲನೆ ಅನುಭೋಗಿಯ ಬೇಡಿಕೆ $\hat{q}_1$ ಮತ್ತು 2ನೇ ಅನುಭೋಗಿಯ ಬೇಡಿಕೆ $\hat{q}_2$ ಆದರೆ $\hat{p}$ ಬೆಲೆಯಲ್ಲಿ ಸರಕೊಂದಕ್ಕೆ ಇರುವ ಮಾರುಕಟ್ಟೆ ಬೇಡಿಕೆಯು $\hat{q}_1 + \hat{q}_2$ ಆಗಿರುತ್ತದೆ. ಈ ರೀತಿ ಸರಕಿನ ಪ್ರತಿ ಬೆಲೆಯಲ್ಲಿರುವ

ಅನುಭೋಗಿಗಳಿಬ್ಬರ ಬೇಡಿಕೆಗಳನ್ನು ಸಂಕಲನ ಮಾಡುವ ಮೂಲಕ ಸರಕಿಗೆ ಪ್ರತಿ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯನ್ನು ಪಡೆಯಬಹುದು. ಮಾರುಕಟ್ಟೆಯಲ್ಲಿ ಇಬ್ಬರಿಗಿಂತ ಹೆಚ್ಚು ಅನುಭೋಗಿಗಳಿದ್ದರೆ, ಮಾರುಕಟ್ಟೆ ಬೇಡಿಕೆಯನ್ನು ಇದೇ ರೀತಿಯಲ್ಲಿ ಪಡೆಯಬಹುದು.

ರೇಖಾಚಿತ್ರ 2.18 ರಲ್ಲಿ ತೋರಿಸಿರುವಂತೆ ವೈಯಕ್ತಿಕ ಬೇಡಿಕೆ ರೇಖೆಗಳನ್ನು ಸಮಾನಾಂತರವಾಗಿ ಕೂಡಿಸುವುದರ ಮೂಲಕ ಒಂದು ಸರಕಿನ ಮಾರುಕಟ್ಟೆ ಬೇಡಿಕೆಯ ರೇಖೆಯನ್ನು ರೇಖಾತ್ಮಕವಾಗಿಯೂ ಪಡೆಯಬಹುದು. ಎರಡು ವೈಯಕ್ತಿಕ ಬೇಡಿಕೆ ರೇಖೆಗಳನ್ನು ಒಗ್ಗೂಡಿಸುವ ಈ ವಿಧಾನಕ್ಕೆ **ಸಮಾನಾಂತರ (ಅಡ್ಡಸಾಲು) ಸಂಕಲನ** (*Horizontal Summation*) ಎನ್ನುತ್ತಾರೆ.




**ರೇಖಾಚಿತ್ರ 2.18 ಮಾರುಕಟ್ಟೆ ಬೇಡಿಕೆರೇಖೆ:** ವೈಯಕ್ತಿಕ ಬೇಡಿಕೆ ರೇಖೆಗಳ ಸಮಾನಾಂತರ ಸಂಕಲನ ಮೊತ್ತದಿಂದ ಮಾರುಕಟ್ಟೆ ಬೇಡಿಕೆರೇಖೆಯನ್ನು ಪಡೆಯಬಹುದು.




**ಎರಡು ಸರಳರೇಖೆ ಬೇಡಿಕೆರೇಖೆಗಳನ್ನು ಸಂಕಲಿಸುವುದು.**

ಉದಾಹರಣೆಗೆ ಮಾರುಕಟ್ಟೆಯನ್ನು ಇಬ್ಬರು ಅನುಭೋಗಿಗಳು ಇರುವ ಆ ಇಬ್ಬರು ಅನುಭೋಗಿಗಳ ಬೇಡಿಕೆಯ ರೇಖೆಯ ಸಮೀಕರಣಗಳು ಈ ಕೆಳಗಿನಂತಿವೆ.

$$d_1(p) = 10 - p \quad (2.14)$$

ಮತ್ತು

$$d_2(p) = 15 - p \quad (2.15)$$

ಅದೂ ಅಲ್ಲದೆ 10 ಕ್ಕಿಂತ ಅಧಿಕವಾಗಿರುವ ಯಾವುದೇ ಬೆಲೆಯಲ್ಲಿ 1ನೇ ಅನುಭೋಗಿಯ ಬೇಡಿಕೆ ಶೂನ್ಯವಾಗಿರುತ್ತದೆ. ಅದೇ ರೀತಿ 15ಕ್ಕಿಂತ ಅಧಿಕವಾಗಿರುವ ಯಾವುದೇ ಬೆಲೆಯಲ್ಲಿ 2ನೇ ಅನುಭೋಗಿಯ ಬೇಡಿಕೆಯು ಶೂನ್ಯ ಘಟಕದಷ್ಟು ಸರಕುಗಳಾಗಿರುತ್ತವೆ. ಸಮೀಕರಣ (2.14) ಮತ್ತು ಸಮೀಕರಣ (2.15) ರನ್ನು ಕೂಡಿಸುವುದರಿಂದ ಮಾರುಕಟ್ಟೆಯ ಬೇಡಿಕೆಯನ್ನು ಪಡೆಯಬಹುದು. 10 ಕ್ಕಿಂತ ಕಡಿಮೆ ಅಥವಾ ಸಮಾನವಾಗಿರುವ ಯಾವುದೇ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯನ್ನು $25-2p$ ಎಂದು ನೀಡಲಾಗಿದೆ. 10ಕ್ಕಿಂತ ಅಧಿಕವಾಗಿರುವ ಯಾವುದೇ ಬೆಲೆಯಲ್ಲಿ ಮತ್ತು 15ಕ್ಕಿಂತ ಕಡಿಮೆ ಅಥವಾ ಸಮಾನವಾಗಿರುವ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯು $15-p$ ಆಗಿದೆ. 15 ಕ್ಕಿಂತ ಅಧಿಕವಾಗಿರುವ ಯಾವುದೇ ಬೆಲೆಯಲ್ಲಿ ಮಾರುಕಟ್ಟೆ ಬೇಡಿಕೆಯು '0' ಶೂನ್ಯವಾಗಿದೆ.

## 2.6. ಬೇಡಿಕೆ ಸ್ಥಿತಿಸ್ಥಾಪಕತ್ವ *Elasticity of Demand*

ಸರಕೊಂದರ ಬೇಡಿಕೆಯು ಅದರ ಬೆಲೆಯೊಂದಿಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ. ಆದರೆ ಬೆಲೆಯಲ್ಲಿನ ಬದಲಾವಣೆಯ ಪರಿಣಾಮ ಯಾವಾಗಲೂ ಒಂದೇ ಆಗಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಬೆಲೆಯಲ್ಲಿನ ಸಣ್ಣ ಬದಲಾವಣೆ ಒಂದು ಸರಕಿನ ಬೇಡಿಕೆಯಲ್ಲಿ ಗಮನಾರ್ಹವಾದ ಬದಲಾವಣೆಗೆ ಕಾರಣವಾಗುತ್ತದೆ. ಮತ್ತೊಂದು ಕಡೆ, ಕೆಲವು ಸರಕುಗಳ ಬೇಡಿಕೆ ಪ್ರಮಾಣ ಬೆಲೆಯ ಬದಲಾವಣೆಯಿಂದ ಹೆಚ್ಚು ಪ್ರಭಾವಕ್ಕೆ ಒಳಗಾಗುವುದಿಲ್ಲ. ಕೆಲವು ಸರಕುಗಳ ಬೇಡಿಕೆಯು ಬೆಲೆಯ ಬದಲಾವಣೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದರೆ,

ಇನ್ನೂ ಕೆಲವು ಸರಕುಗಳ ಬೇಡಿಕೆಯು ಬೆಲೆಯ ಬದಲಾವಣೆಗೆ ಅಷ್ಟೊಂದು ಪ್ರತಿಕ್ರಿಯೆ ನೀಡುವುದಿಲ್ಲ. ಒಂದು ಸರಕಿನ ಬೇಡಿಕೆಯು ಅದರ ಬೆಲೆಯಲ್ಲಿನ ಬದಲಾವಣೆಗನುಗುಣವಾಗಿ ಪ್ರತಿಕ್ರಿಯಿಸುವುದನ್ನು ಮಾಪನ ಮಾಡುವ ಪರಿಕಲ್ಪನೆಯೇ ಬೆಲೆಯ ಬೇಡಿಕೆಯ ಸ್ಥಿತಿಸ್ಥಾಪಕತ್ವ.

**ಸರಕೊಂದರ ಬೇಡಿಕೆಯ** ಪ್ರಮಾಣದಲ್ಲಿನ ಶೇಕಡವಾರು ಬದಲಾವಣೆಯನ್ನು ಅದೇ ಸರಕಿನ ಬೆಲೆಯ ಪ್ರಮಾಣದಲ್ಲಿನ ಶೇಕಡವಾರು ಬದಲಾವಣೆಯಿಂದ ಭಾಗಿಸುವುದನ್ನು ಬೆಲೆಯ ಬೇಡಿಕೆ ಸ್ಥಿತಿಸ್ಥಾಪಕತ್ವ ಎಂದು ವ್ಯಾಖ್ಯಾನಿಸಲಾಗಿದೆ. ಒಂದು ಸರಕಿನ ಬೆಲೆಯ ಬೇಡಿಕೆ ಸ್ಥಿತಿಸ್ಥಾಪಕತ್ವ ಈ ಕೆಳಗಿನಂತಿರುತ್ತದೆ.

$$e_D = \frac{\text{ಸರಕಿನ ಬೇಡಿಕೆಯಲ್ಲಿನ ಶೇಕಡವಾರು ಬದಲಾವಣೆ}}{\text{ಸರಕಿನ ಬೆಲೆಯಲ್ಲಿನ ಶೇಕಡವರು ಬದಲಾವಣೆ}} \qquad (2.16a)$$

$$= \frac{\frac{\Delta Q}{Q}\times 100}{\frac{\Delta P}{Q}\times 100} = \left(\frac{\Delta Q}{Q}\right)\times\left(\frac{P}{\Delta P}\right) \qquad (2.16b)$$

ಇಲ್ಲಿ $\Delta P$ ಯು ಸರಕಿನ ಬೆಲೆಯ ಬದಲಾವಣೆಯಾಗಿದೆ ಮತ್ತು $\Delta Q$ ಸರಕಿನ ಪ್ರಮಾಣದ ಬದಲಾವಣೆಯಾಗಿದೆ.

### ಉದಾಹರಣೆ 2.2

ಒಬ್ಬ ವ್ಯಕ್ತಿಯು ಒಂದು ಬಾಳೆಹಣ್ಣಿಗೆ 5ರೂನಂತೆ, 15 ಬಾಳೆಹಣ್ಣುಗಳನ್ನು ಕೊಳ್ಳುತ್ತಾಳೆಂದುಕೊಳ್ಳೋಣ, ಬೆಲೆಯು ಒಂದು ಬಾಳೆಹಣ್ಣುಗೆ ರೂ 7 ಕಕ್ಕೆ ಏರಿದಾಗ, ಆಕೆಯು ತನ್ನ ಬೇಡಿಕೆಯನ್ನು 12 ಬಾಳೆಹಣ್ಣಿಗಳಿಗೆ ಕಡಿಮೆ ಮಾಡುತ್ತಾಳೆ.

| ಪ್ರತಿಬಾಳೆಹಣ್ಣಿನ ಬೆಲೆ (ರೂ) : P | ಬಾಳೆಹಣ್ಣಿನ ಬೇಡಿಕೆಯ ಪ್ರಮಾಣ $Q_1$ =15 |
|---|---|
| ಹಳೆಯ ಬೆಲೆ : $P_1 = 5$ | ಹಳೆಯ ಪ್ರಮಾಣ : $Q_1 = 15$ |
| ಹೊಸ ಬೆಲೆ : $P_2 = 7$ | ಹೊಸ ಪ್ರಮಾಣ : $Q_2 = 12$ |

ಅನುಭೋಗಿಯ ಬಾಳೆಹಣ್ಣಿನ ಬೇಡಿಕೆಯ ಸ್ಥಿತಿಸ್ಥಾಪಕವನ್ನು ಕಂಡು ಹಿಡಿಯಲು ಮೇಲಿನ ಕೋಷ್ಟಕದಲ್ಲಿನ ಮಾಹಿತಿಯ್ನನು ಬಳಸಿಕೊಂಡು ಬೇಡಿಕೆಯ ಪ್ರಮಾಣ ಮತ್ತು ಅದರ ಬೆಲೆಯ ಶೇಕಡವಾರು ಬದಲಾವಣೆಯನ್ನು ಕಂಡು ಕೊಳ್ಳುತ್ತೇವೆ.

ಒಂದು ಸರಕಿನ ಬೇಡಿಕೆಯು ಅದರ ಬೆಲೆಯೊಂದಿಗೆ ಋಣಾತ್ಮಕ ಸಂಬಂಧವನ್ನು ಹೊಂದಿರುವುದರಿಂದ, ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು ಒಂದು ಋಣಾತ್ಮಕ ಸಂಖ್ಯೆಯಾಗಿದೆ. ಆದಾಗ್ಯೂ ಸರಳತೆಗಾಗಿ ನಾವು ಯಾವಾಗಲೂ ಸ್ಥಿತಸ್ಥಾಪಕತ್ವದ ನಿರಪೇಕ್ಷ ಮೌಲ್ಯವನ್ನು ಉಲ್ಲೇಖಿಸುತ್ತೇವೆ.

ಬೇಡಿಕೆ ಪ್ರಮಾಣದಲ್ಲಿನ ಶೇಕಡವಾರು ಬದಲಾವಣೆಗೆ $= \frac{\Delta Q}{Q}\times 100$

$$= \left(\frac{Q_1 - Q_1}{Q_1}\right)\times 100$$

$$= \frac{12-15}{15}\times 100 = -20$$



ಮಾರುಕಟ್ಟೆ ಬೆಲೆಯಲ್ಲಿನ ಶೇಕಡವಾರು ಬದಲಾವಣೆ $= \frac{\Delta P}{P} \times 100$

$$= \left( \frac{P_2 - P_1}{P_1} \right) \times 100$$

$$= \frac{7-5}{5} \times 100 = 40$$

ಆದ್ದರಿಂದ ನಮ್ಮ ಉದಾಹರಣೆಯಲ್ಲಿ, ಬಾಳೆಹಣ್ಣಿನ ಬೆಲೆಯು ಶೇಕಡ 40ರಷ್ಟು ಹೆಚ್ಚಾದರೆ ಅದರ ಬೇಡಿಕೆಯ ಪ್ರಮಾಣವು ಶೇಕಡ 20ರಷ್ಟು ಕಡಿಮೆಯಾಗುತ್ತದೆ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವು $|e| = \frac{20}{40} = 0.5$

ಬಾಳೆಹಣ್ಣಿನ ಬೆಲೆಯ ಬದಲಾವಣೆಗೆ ಬಾಳೆಹಣ್ಣಿನ ಬೇಡಿಕೆಯು ಅಷ್ಟೊಂದು ಸ್ಪಂಧಿಸಿಲ್ಲವೆಂದು ನಮಗೆ ಸ್ಪಷ್ಟವಾಗುತ್ತದೆ. ಮಾರುಕಟ್ಟೆ ಬೆಲೆಯ ಶೇಕಡವಾರು ಬದಲಾವಣೆಗಿಂತ ಬೇಡಿಕೆ ಪ್ರಮಾಣದ ಶೇಕಡವಾರು ಬದಲಾವಣೆಯು ಕಡಿಮೆ ಇದ್ದಾಗ $|e_D|$ ಯನ್ನು ಒಂದಕ್ಕಿಂತ ಕಡಿಮೆ ಎಂದು ಅದಾಜಿಸಲಾಗುತ್ತದೆ ಮತ್ತು ಆ ಬೆಲೆಯಲ್ಲಿ ಸರಕಿನ ಬೇಡಿಕೆಯು ಅಸ್ಥಿತಿಸ್ಥಾಪಕತ್ವನ್ನು ಹೊಂದಿರುತ್ತದೆಂದು ಹೇಳಲಾಗುತ್ತದೆ. ಅಗತ್ಯ ಸರಕುಗಳ ಬೇಡಿಕೆಯು ಹೆಚ್ಚಾಗಿ ಅಸ್ಥಿತಿಸ್ಥಾಪಕತೆಯನ್ನು ಹೊಂದಿರುವುದು ಕಂಡುಬರುತ್ತದೆ.



ಮಾರುಕಟ್ಟೆ ಬೆಲೆಯ ಶೇಕಡವಾರು ಬದಲಾವಣೆಗಿಂತ ಬೇಡಿಕೆ ಪ್ರಮಾಣದ ಶೇಕಡವಾರು ಬದಲಾವಣೆಯು ಅಧಿಕವಾಗಿದ್ದಾಗ ಬೇಡಿಕೆಯು ಮಾರುಕಟ್ಟೆ ಬೆಲೆ ಬದಲಾವಣೆಗಳಿಗೆ ಹೆಚ್ಚು ಸ್ಪಂಧಿಸುತ್ತದೆಂದು ಹೇಳಲಾಗುತ್ತದೆ ಮತ್ತು ಅಂದಾಜಿಸಿದ $|e_D|$ ಯು ಒಂದಕ್ಕಿಂತ ಹೆಚ್ಚು ಇರುತ್ತದೆ. ಆ ಬೆಲೆಯಲ್ಲಿ ಸರಕಿನ ಬೇಡಿಕೆಯು ಸ್ಥಿತಿಸ್ಥಾಪಕತೆಯನ್ನು ಹೊಂದಿರುತ್ತದೆಂದು ಹೇಳಲಾಗುತ್ತದೆ.

ಮಾರುಕಟ್ಟೆ ಬೆಲೆಗಳಲ್ಲಿನ ಬದಲಾವಣೆಗೆ ವಿಲಾಸಿ ಸರಕುಗಳ ಬೇಡಿಕೆಯು ಹೆಚ್ಚು ಸ್ಪಂದಿಸುತ್ತವೆಂಬುದನ್ನು ನಾವು ಕಾಣುತ್ತೇವೆ ಮತ್ತು $|e_D| > 1$ ಆಗಿರುತ್ತದೆ.

ಮಾರುಕಟ್ಟೆ ಬೆಲೆಯಲ್ಲಿನ ಶೇಕಡವಾರು ಬದಲಾವಣೆಗೆ ಬೇಡಿಕೆ ಪ್ರಮಾಣದ ಶೇಕಡವಾರು ಬದಲಾವಣೆಯು ಸಮವಾಗಿದ್ದಾಗ $|e_D|$ ಯನ್ನು ಒಂದಕ್ಕೆ ಸಮನಾಗಿರುತ್ತದೆಂದು ಅಂದಾಜಿಸಲಾಗುತ್ತದೆ ಮತ್ತು ಆ ಬೆಲೆಯಲ್ಲಿ ಸರಕಿನ ಬೇಡಿಕೆಯು ಸರಿಸಮ–ಸ್ಥಿತಿಸ್ಥಾಪಕತೆಯನ್ನು ಹೊಂದಿರುತ್ತದೆ ಹೇಳಲಾಗುತ್ತದೆ ಬೇರೆ ಬೇರೆ ಕೆಲವು ಸರಕುಗಳಿಗೆ ಬೆಲೆಗಳಲ್ಲಿ ಬೇಡಿಕೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿರಬಹುದು ಸರಿಸಮ ಸ್ಥಿತಿಸ್ಥಾಪಕತ್ವವನ್ನು ಹೊಂದಿರಬಹುದು ಮತ್ತು ಅಸ್ಥಿತಿಸಸ್ಥಾಪಕತ್ವವನ್ನು ಹೊಂದಿರಬಹುದು ಎಂಬುದನ್ನು ಗಮನಿಸಿ. ಮುಂದಿನ ವಿಭಾಗದಲ್ಲಿ ಸರಳರೇಖಾ ಬೇಡಿಕೆ ರೇಖೆಯೊಂದಿಗಿನ ಸ್ಥಿತಿಸ್ಥಾಪಕತ್ವವನ್ನು ಬೇರೆ ಬೇರೆ ಬೆಲೆಗಳಲ್ಲಿ ಅಂದಾಜಿಸಲಾಗಿದೆ ಮತ್ತು ಇಳಿಮುಖ ಇಳಿಜಾರನ್ನು ಹೊಂದಿರುವ ಬೇಡಿಕೆ ರೇಖೆಯ ಪ್ರತಿಯೊಂದು ಬಿಂದುವಿನಲ್ಲಿ ಇದನ್ನು ತೋರಿಸಲಾಗಿದೆ.

### 2.6.1 ಸರಳಾರೇಖಾ ಬೇಡಿಕೆ ರೇಖೆಯೊಂದಿಗಿನ ಸ್ಥಿತಿಸ್ಥಾಪಕತ್ವ *Elasticity along a Linear Demand Curve*

ನಾವೀಗ ಬೇಡಿಕೆ ರೇಖೆಯ ಸರಳರೇಖಾ ಬಿಂಬಕವು $q = a - bp$ ಆಗಿದೆ ಎಂದು ಪರಿಗಣಿಸೋಣ.

ಬೇಡಿಕೆಯ ರೇಖೆಯ ಮೇಲಿನ ಯಾವುದೇ ಬಿಂದುವಿನಲ್ಲಿ ಬೆಲೆಯಲ್ಲಾದ ಬದಲಾವಣೆಯಿಂದಾಗಿ, ಬೇಡಿಕೆ ಪ್ರಮಾಣದ ಪ್ರತಿ ಘಟಕದಲ್ಲಾಗುವ ಬದಲಾವಣೆಯು $\frac{\Delta q}{\Delta P} = -b$ ಆಗುತ್ತದೆ.

$\frac{\Delta q}{\Delta P}$ ಮೌಲ್ಯವನ್ನು 2.16 ಸಮೀಕರಣದಲ್ಲಿ ಆದೇಶಿಸಿದಾಗ *(substituting)* ನಾವು ಈ ಕೆಳಗಿನ ಸಮೀಕರಣವನ್ನು ಪಡೆಯುತ್ತೇವೆ.

$$e_D = -b\frac{P}{q} = -\frac{bp}{a - bp} \quad (2.17)$$

ರೇಖಾಚಿತ್ರ 2.17ರಿಂದ ಸ್ಪಷ್ಟವಾಗುವುದೇನೆಂದರೆ ಸರಳಾರೇಖಾ ಬೇಡಿಕೆ ರೇಖೆಯ ಮೇಲಿನ ವಿವಿಧ ಬಿಂದುಗಳು ವಿಭಿನ್ನವಾದ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ. ಬೆಲೆ $p = 0$ ಆಗಿದ್ದಾಗ ಸ್ಥಿತಿಸ್ಥಾಪಕತ್ವ ಶೂನ್ಯವಾಗಿದೆ. $q = 0$ ಆದಾಗ ಸ್ಥಿತಿಸ್ಥಾಪಕತ್ವ $\infty$ (ಅನಂತ) ಆಗಿದೆ.

$P = \frac{a}{2b}$ ಬೆಲೆಯಲ್ಲಿ ಸ್ಥಿತಿಸ್ಥಾಪಕತ್ವ 1 ಆಗಿದೆ.ಯಾವುದೇ ಬೆಲೆಯಲ್ಲಿ ಅಂದರೆ ಶೂನ್ಯಕ್ಕಿಂತ ಹೆಚ್ಚಾಗಿದ್ದು, $\frac{a}{2b}$ ಗಿಂತ ಕಡಿಮೆಯಿದ್ದಾಗ, ಸ್ಥಿತಿಸ್ಥಾಪಕತ್ವ '1' ಕ್ಕಿಂತ ಕಡಿಮೆಯಿರುತ್ತದೆ. ಬೆಲೆ $\frac{a}{2b}$ ಗಿಂತ ಹೆಚ್ಚಾಗಿ ಇದ್ದರೆ ಸ್ಥಿತಿಸ್ಥಾಪಕತ್ವವು '1' ಕ್ಕಿಂತ ಹೆಚ್ಚಾಗಿರುತ್ತದೆ. ಈ ರೀತಿ ಸರಳಾರೇಖಾ ಬಿಂಬಕದ ಬೇಡಿಕೆರೇಖೆಯುದ್ದಕ್ಕೂ ಬೆಲೆಯ ಬೇಡಿಕೆ ಸ್ಥಿತಿಸ್ಥಾಪಕತ್ವವನ್ನು ಸಮೀಕರಣ 2.17 ಮತ್ತು ರೇಖಾ ಚಿತ್ರ 2.19 ರಲ್ಲಿ ವಿವರಿಸಲಾಗಿದೆ.




**ರೇಖಾಚಿತ್ರ 2.19** ಸರಳಾರೇಖಾ ಬೇಡಿಕೆ ರೇಖೆಯೊಂದಿಗಿನ ಸ್ಥಿತಿಸ್ಥಾಪಕತ್ವ. ಸರಳಾರೇಖಾ ಬೇಡಿಕೆ ರೇಖೆಯ ಮೇಲಿನ ವಿವಿಧ ಬಿಂದುಗಳಲ್ಲಿ ಬೆಲೆಯ ಬೇಡಿಕೆಯ ಸ್ಥಿತಿಸ್ಥಾಪಕತ್ವ ವಿಭಿನ್ನವಾಗಿರುತ್ತದೆ.

**ಒಂದು ಸರಳರೇಖಾ ಬೇಡಿಕೆ ರೇಖೆಯುದ್ದಕ್ಕೂ ಸ್ಥಿತಿಸ್ಥಾಪಕತ್ವದ ರೇಖಾಗಣಿತೀಯ ಮಾಪನ**

ಸರಳಾರೇಖಾ ಬೇಡಿಕೆರೇಖೆಯ ಮೇಲೆ ಸ್ಥಿತಿಸ್ಥಾಪಕತ್ವವನ್ನು ರೇಖಾಗಣಿತಾತ್ಮಕವಾಗಿ ಸುಲಭವಾಗಿ ಮಾಪನ ಮಾಡಬಹುದು. ಬೇಡಿಕೆಯ ಸರಳರೇಖೆಯ ಮೇಲಿನ ಯಾವುದೇ ಬಿಂದುವಿನಲ್ಲಿ ಆ ಬಿಂದುವಿನ ಮೇಲ್ಭಾಗ ಮತ್ತು ಕೆಳಭಾಗದ ಅನುಪಾತದಿಂದ ಸ್ಥಿತಿಸ್ಥಾಪಕತೆಯನ್ನು ಪಡೆಯಬಹುದು. ಇದು ಹೀಗೇಕೆ ಎಂದು ತಿಳಿಯಲು ಈ ಕೆಳಗೆ ನೀಡಿರುವ $q = a - bp$. ಎಂಬ ಬೇಡಿಕೆ ರೇಖೆಯನ್ನು ಪರಿಶೀಲಿಸೋಣ.




$p^0$, ಬೆಲೆಯಲ್ಲಿ ಸರಕಿನ ಬೇಡಿಕೆ $q^0$ ಆಗಿದೆ ಎಂದುಕೊಳ್ಳೋಣ. ನಾವೀಗ ಬೆಲೆಯಲ್ಲಿ ಒಂದು ಸಣ್ಣ ಬದಲಾವಣೆಯನ್ನು ಪರಿಗಣಿಸೋಣ. ಹೊಸ ಬೆಲೆ $p^1$ ಮತ್ತು ಈ ಬೆಲೆಯಲ್ಲಿ ಸರಕಿನ ಹೊಸ ಬೇಡಿಕೆ $q^1$ ಆಗಿದೆ.

$\Delta q = q^1q^0 = \text{CD}$ ಮತ್ತು $\Delta p = p^1p^0 = \text{CE}$

ಆದ್ದರಿಂದ $= e_D = \frac{\Delta q / q^0}{\Delta p / p^0} = \frac{\Delta q}{\Delta P} \times \frac{P^0}{q^0} = \frac{q^1q^0}{p^1p^0} \times \frac{\text{OP}^0}{\text{O}q^0} = \frac{\text{CD}}{\text{CE}} \times \frac{op^0}{oq^0}$

ಆದ್ದರಿಂದ EC ಮತ್ತು $\text{BP}^0\text{D}$ ಗಳು ಒಂದೇ ರೀತಿಯ ತ್ರಿಭುಜಗಳಾಗಿವೆ.

$\frac{\text{CD}}{\text{CE}} = \frac{P^0\text{D}}{P^0\text{B}}$ ಆದರೆ $\frac{p^0\text{D}}{p^0\text{B}} = \frac{\text{O}q^0}{p^0\text{B}}$ $ed = \frac{\text{OP}^0}{\text{P}^0\text{B}} = \frac{q^0\text{D}}{p^0\text{B}}$

ಆದ್ದರಿಂದ $BP^0D$ ಮತ್ತು $BOA$ ಗಳು ಒಂದೇ ರೀತಿಯ ತ್ರಿಭುಜಗಳಾಗಿರುವುದರಿಂದ

$$\frac{q^0D}{p^0B} = \frac{DA}{DB} \qquad \text{ಈ ರೀತಿ} \qquad e_D = \frac{DA}{DB}$$

ಈ ವಿಧಾನದ ಮೂಲಕ ಸರಳಾರೇಖಾ ಬೇಡಿಕೆ ರೇಖೆಯ ಮೇಲಿನ ವಿವಿದ ಬಿಂದುಗಳಲ್ಲಿ ಸ್ಥಿತಿಸ್ಥಾಪಕತ್ವವನ್ನು ಪಡೆಯಬಹುದು. ಬೇಡಿಕೆರೇಖೆಯು ಸಮಾನಾಂತರ ಅಕ್ಷವನ್ನು ಸಂಧಿಸುವಲ್ಲಿ ಸ್ಥಿತಿಸ್ಥಾಪಕತ್ವ ಶೂನ್ಯವಾಗಿರುತ್ತದೆ. ಇದು ಲಂಬಾಂತರ ಅಕ್ಷವನ್ನು ಸಂಧಿಸುವಲ್ಲಿ ಬೇಡಿಕೆ ಸ್ಥಿತಿಸ್ಥಾಪಕತ್ವ ($\infty$) ಅನಂತರವಾಗಿರುತ್ತದೆ. ಬೇಡಿಕೆರೇಖೆಯ ಮಧ್ಯಭಾಗದಲ್ಲಿ ಸ್ಥಿತಿಸ್ಥಾಪಕತ್ವ ಒಂದಕ್ಕೆ ಸಮನಾಗಿರುತ್ತದೆ. ಈ ಮಧ್ಯಬಿಂದುವಿನ ಎಡಭಾಗದಲ್ಲಿ ಬರುವ ಯಾವುದೇ ಬಿಂದುವಿನಲ್ಲಿ ಸ್ಥಿತಿಸ್ಥಾಪಕತ್ವ 1 ಕ್ಕಿಂತ ಹೆಚ್ಚಾಗಿರುತ್ತದೆ. ಹಾಗೆಯೇ ಬಲಭಾಗಕ್ಕೆ ಬರುವ ಯವುದೇ ಬಿಂದುವಿನಲ್ಲಿ ಸ್ಥಿತಿಸ್ಥಾಪಕತ್ವವು 1 ಕ್ಕಿಂತ ಕಡಿಮೆಯಾಗಿರುತ್ತದೆ. ಸಮಾನಾಂತರ ಅಕ್ಷದಲ್ಲಿ $p = 0$ ಆಗಿದ್ದರೆ, ಲಂಬಾತರ ಅಕ್ಷದಲ್ಲಿ $q = 0$ ಆಗಿರುತ್ತದೆ. ಮತ್ತು ಬೇಡಿಕೆ ರೇಖೆಯ ಮಧ್ಯಬಿಂದುವು $P = \frac{a}{2b}$ ಆಗಿರುತ್ತದೆ.

**ಸ್ಥಿರ ಸ್ಥಿತಿಸ್ಥಾಪಕತ್ವದ ಬೇಡಿಕೆ ರೇಖೆಗಳು**

ಸರಳಾರೇಖಾ ಬೇಡಿಕೆಯ ರೇಖೆಯ ಮೇಲಿನ ವಿವಿದ ಬಿಂದುಗಳು '0'(ಶೂನ್ಯ) ದಿಂದ (ಅನಂತ)$\infty$ ವರೆಗಿನ ವಿವಿಧ ಸ್ಥಿತಿಸ್ಥಾಪಕತ್ವವನ್ನು ವ್ಯಕ್ತಪಡಿಸುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಬೇಡಿಕೆ ರೇಖೆಯ ಉದ್ದಕ್ಕೂ ಬೇಡಿಕೆಯ ಸ್ಥಿತಿಸ್ಥಾಪಕತ್ವ ಸ್ಥಿರವಾಗಿರಬಹುದು.





**ಉದಾಹರಣೆಗೆ,** ರೇಖಾಚಿತ್ರ 2.20($a$) ರಲ್ಲಿ ನೀಡಿರುವ ಉದಾಹರಣೆಯನ್ನು ಪರಿಗಣಿಸೋಣ ಇಲ್ಲಿ ಬೇಡಿಕೆರೇಖೆಯು ಲಂಬಾಂತರವಾಗಿದೆ. ಬೆಲೆಯಲ್ಲಿ ಏನೇ ಬದಲಾವಣೆಯಾದರು ಬೇಡಿಕೆ ಪ್ರಮಾಣ ಮಾತ್ರ $\bar{q}$ ಮಟ್ಟಕ್ಕೆ ಸ್ಥಿರವಾಗಿದೆ. ಬೆಲೆಯಲ್ಲಿನ ಯಾವುದೇ ಬದಲಾವಣೆಗೆ ಕಾರಣವಾಗುವುದಿಲ್ಲ. ಮತ್ತು $|e_D|$ ಯಾವಾಗಲೂ ಶೂನ್ಯಕ್ಕೆಸಮನಾಗಿರುತ್ತದೆ.ಆದ್ದರಿಂದ ಲಂಬಾಂತರ ಬೇಡಿಕೆ ರೇಖೆಯು ಪರಿಪೂರ್ಣ ಅಸ್ಥಿತಿಸ್ಥಾಪಕತ್ವ ರೇಖೆಯಾಗಿದೆ.

ರೇಖಾಚಿತ್ರ 2.20(b)ಯು ಸಮತಲ ಬೇಡಿಕೆ ರೇಖೆಯನ್ನು ತೋರಿಸುತ್ತದೆ. ಇಲ್ಲಿ ಸರಕಿನ ಬೇಡಿಕೆಯ ಪ್ರಮಾಣವು ಎಷ್ಟೇ ಇದ್ದರೂ, ಮಾರುಕಟ್ಟೆ ಬೆಲೆ $\bar{P}$ ನಲ್ಲಿ ಸ್ಥಿರವಾಗಿರುತ್ತದೆ. ಬೇರೆ ಯಾವುದೇ ಬೆಲೆಯಲ್ಲಿ ಬೇಡಿಕೆಯ ಪ್ರಮಾಣ ಶೂನ್ಯಕ್ಕೆ ಇಳಿಯುತ್ತದೆ, ಆದ್ದರಿಂದ $|e_d| = \infty$ ಆಗಿರುತ್ತದೆ. ಸಮತಲ ಬೇಡಿಕೆಯ ರೇಖೆಯು ಪರಿಪೂರ್ಣ ಅಸ್ಥಿತಿಸ್ಥಾಪಕತೆಯನ್ನು ಹೊಂದಿರುತ್ತದೆ.

ರೇಖಾಚಿತ್ರ 2.20($c$) ನಲ್ಲಿ ಆಯತಕಾರದ ಪರಾವಲಯದ (*Rectangular hyperbola*) ಆಕಾರದಲ್ಲಿರುವ ಬೇಡಿಕೆ ರೇಖೆಯನ್ನು ತೋರಿಸಲಾಗಿದೆ. ಈ ಬೇಡಿಕೆ ರೇಖೆಯು ಒಂದು ಪ್ರಮುಖ ಲಕ್ಷಣದಿಂದ ಕೂಡಿದೆ. ಅದೆಂದರೆ ಬೆಲೆಯಲ್ಲಾಗುವ ಶೇಕಡವಾರು ಬದಲಾವಣೆಯು ಬೇಡಿಕೆ ರೇಖೆಯುದ್ದಕ್ಕೂ ಅಷ್ಟೇ ಪ್ರಮಾಣದ ಬದಲಾವಣೆಗೆ ಕಾರಣವಾಗುತ್ತದೆ. ಆದ್ದರಿಂದ ಈ ರೇಖೆಯ ಪ್ರತಿಯೊಂದು ಬಿಂದುವಿನ ಸ್ಥಿತಿಸ್ಥಾಪಕತ್ವ $|e_D| = 1$ ಆಗಿರುತ್ತದೆ. ಇಂತಹ ಬೇಡಿಕೆ ರೇಖೆಯನ್ನು ಸರಿಸಮ ಸ್ಥಿತಿಸ್ಥಾಪಕತ್ವದ ಬೇಡಿಕೆ ರೇಖೆ ಎಂದು ಕರೆಯುತ್ತೇವೆ.




**ರೇಖಾಚಿತ್ರ 2.20:** ಸ್ಥಿರ ಸ್ಥಿತಿಸ್ಥಾಪಕತ್ವದ ಬೇಡಿಕೆಯ ರೇಖೆಗಳು: ರೇಖಾಚಿತ್ರದ ಪಲಕ (*a*) ನಲ್ಲಿ ತೋರಿಸಿರುವಂತೆ ಲಂಬಾಂತರ ಬೇಡಿಕೆರೇಖೆಯುದ್ದಕ್ಕೂ ಇರುವ ಎಲ್ಲಾ ಬಿಂದುಗಳ ಬೇಡಿಕೆ ಸ್ಥಿತಿಸ್ಥಾಪಕತ್ವವು ಶೂನ್ಯವಾಗಿರುತ್ತದೆ. ಪಲಕ (*b*) ಭಾಗದಲ್ಲಿರುವ ಬೇಡಿಕೆ ರೇಖೆಯ ಮೇಲಿರುವ ಎಲ್ಲಾ ಬಿಂದುಗಳ ಸ್ಥಿತಿಸ್ಥಾಪಕತ್ವವು ಅನಂತವಾಗಿರುತ್ತದೆ. ಪಲಕ (*c*) ಭಾಗದಲ್ಲಿರುವ ಬೇಡಿಕೆ ರೇಖೆಯ ಮೇಲಿರುವ ಎಲ್ಲಾ ಬಿಂದುಗಳ ಸ್ಥಿತಿಸ್ಥಾಪಕತ್ವವು ಒಂದಕ್ಕೆ ಸಮನಾಗಿರುತ್ತದೆ.

### 2.6.2. ಒಂದು ಸರಕಿನ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ನಿರ್ಧರಿಸುವ ಅಂಶಗಳು *Factors Determining Price Elasticity of Demand for a Good*

ಒಂದು ಸರಕಿನ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು ಆ ಸರಕಿನ ಸ್ವರೂಪ ಮತ್ತು ನಿಕಟ ಬದಲಿ ಸರಕುಗಳ ಲಭ್ಯತೆಯನ್ನು ಅವಲಂಬಿಸಿರುತ್ತದೆ. ಜೀವನಾವಶ್ಯ ಆಹಾರ ಸರಕುಗಳನ್ನು ಉದಾಹರಣೆಗೆ ತೆಗೆದುಕೊಳ್ಳೋಣ. ಇವು ಜೀವನಾವಶ್ಯ ಸರಕುಗಳಾಗಿರುವುದರಿಂದ, ಇಂತಹ ಸರಕುಗಳ ಬೇಡಿಕೆಯು ಬೆಲೆಯ ಬದಲಾವಣೆಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರತಿಕ್ರಿಯಿಸುವುದಿಲ್ಲ ಅಂದರೆ, ಈ ಸರಕುಗಳ ಬೆಲೆ ಹೆಚ್ಚಳವು ಬೇಡಿಕೆಯ ಮೇಲೆ ಪ್ರಭಾವ ಬೀರುವುದಿಲ್ಲ. ಆದರೆ ಮತ್ತೊಂದು ಕಡೆ, ವಿಲಾಸಿ ಸರಕುಗಳ ಬೇಡಿಕೆಯು ಬೆಲೆ ಬದಲಾವಣೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತದೆ. ಸಾಮಾನ್ಯವಾಗಿ ಅವಶ್ಯಕ ಸರಕುಗಳಿಗೆ ಬೆಲೆ ಬೇಡಿಕೆಯ ಅಸ್ಥಿತಿಸ್ಥಾಪಕತ್ವ ಇದ್ದರೆ, ವಿಲಾಸಿ ಸರಕುಗಳಿಗೆ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ ಇರುತ್ತದೆ.

ಆಹಾರ ಪದಾರ್ಥಗಳ ಬೇಡಿಕೆಯು ಅಸ್ಥಿತಿಸ್ಥಾಪಕತ್ವ ಹೊಂದಿದ್ದಾಗ್ಯೂ ಸಹ ಕೆಲವು ಆಹಾರ ಸರಕುಗಳ ಬೇಡಿಕೆ ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ಹೊಂದಿರಬಹುದು ಉದಾಹರಣೆಗೆ ನಿರ್ದಿಷ್ಟ ದ್ವಿದಳ ಧಾನ್ಯವನ್ನು ತೆಗೆದುಕೊಳ್ಳೋಣ ಬೇಡಿಕೆ ಈ ದ್ವಿದಳ ಧಾನ್ಯಗಳ ಬೆಲೆ ಹೆಚ್ಚಾದರೆ ಗ್ರಾಹಕರು ಆ ದ್ವಿದಳ ಧಾನ್ಯಗಳ ಬದಲಿಗೆ ಲಭ್ಯವಿರುವ ಸಮೀಪದ ಬದಲಿ ದ್ವಿದಳಧಾನ್ಯಕ್ಕೆ ತಮ್ಮ ಬೇಡಿಕೆಯನ್ನು ವರ್ಗಾಯಿಸುತ್ತಾರೆ. ಈ ರೀತಿ ಸಮೀಪದ ಬದಲಿ ಸರಕುಗಳು ಲಭ್ಯವಿದ್ದರೆ ಆಗ ಬೇಡಿಕೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ. ಒಂದುವೇಳೆ ಸಮೀಪದ ಬದಲಿ ವಸ್ತುಗಳು ಲಭ್ಯವಿಲ್ಲದಿದ್ದರೆ ಅಂತಹ ಸರಕುಗಳ ಬೇಡಿಕೆಯು ಅಸ್ಥಿತಿಸ್ಥಾಪಕತ್ವದಿಂದ ಕೂಡಿರುತ್ತದೆ.

### 2.6.3. ಸ್ಥಿತಿಸ್ಥಾಪಕತ್ವ ಮತ್ತು ವೆಚ್ಚ *Elasticity and Expenditure*

ಸರಕೊಂದರ ಮೇಲೆ ಮಾಡುವ ವೆಚ್ಚ ಆ ಸರಕಿನ ಬೇಡಿಕೆ ಪ್ರಮಾಣ ಮತ್ತು ಅದರ ಬೆಲೆಗೆ ಸಮನಾಗಿರುತ್ತದೆ. ಒಂದು ಸರಕಿನ ಬೆಲೆಯ ಬದಲಾವಣೆಯಿಂದಾಗಿ ಆ ಸರಕಿನ ಮೇಲೆ ಮಾಡುವ ವೆಚ್ಚವು ಹೇಗೆ ಬದಲಾಗುತ್ತದೆ ಎಂಬುದನ್ನು ತಿಳಿದುಕೊಳ್ಳುವುದು, ಮುಖ್ಯವಾಗುತ್ತದೆ. ಒಂದು ಸರಕಿನ ಬೆಲೆ ಮತ್ತು ಬೇಡಿಕೆಯು ಪರಸ್ಪರ ವಿರುದ್ಧ ಸಂಬಂಧ ಹೊಂದಿವೆ. ಅನೇಕ ಬಾರಿ ಒಂದು ಸರಕಿನ ಬೆಲೆಯ ಹೆಚ್ಚಳದಿಂದಾಗಿ ಅ ಸರಕಿನ ಮೇಲೆ ಮಾಡಬಹುದಾದ ವೆಚ್ಚವು ಹೆಚ್ಚಾಗುತ್ತದೆಯೋ ಅಥವಾ ಕಡಿಮೆಯಾಗುತ್ತದೆಯೋ ಎಂಬ ಸಂಗತಿಯು ಬೆಲೆಯ ಬದಲಾವಣೆಗೆ ಬೇಡಿಕೆಯು ಯಾವ ದರದಲ್ಲಿ ಪ್ರತಿಕ್ರಿಯಿಸುತ್ತದೆ ಎಂಬ ಅಂಶವನ್ನು ಅವಲಂಬಿಸಿರುತ್ತದೆ.

ಒಂದು ಸರಕಿನ ಬೆಲೆ ಹೆಚ್ಚಾಗಿದೆಯೆಂದು ಪರಿಗಣಿಸೋಣ. ಆ ಸರಕಿನ ಶೇಕಡವಾರು ಬೆಲೆಯ ಹೆಚ್ಚಳಕ್ಕಿಂತ ಶೇಕಡವಾರು ಬೇಡಿಕೆಯ ಇಳಿಕೆಯೇ ಹೆಚ್ಚಾಗಿದ್ದರೆ, ಆ ಸರಕಿನ ಮೇಲೆ ಮಾಡಬಹುದಾದ ವೆಚ್ಚವು ಕಡಿಮೆಯಾಗುತ್ತದೆ. ಉದಾಹರಣೆಗೆ, ಕೋಷ್ಟಕ 2.5ರ 2ನೇ ಅಡ್ಡಸಾಲವನ್ನು ನೋಡಿರಿ, ಇದು ಸರಕಿನ ಬೆಲೆ ಶೇಕಡ 10ರಷ್ಟು ಹೆಚ್ಚಾದಾಗ ಅದರ ಬೇಡಿಕೆಯು ಶೇಕಡ 12% ಇಳಿಕೆಯಾಗುತ್ತದೆ ಮತ್ತು ಇದರಿಂದ ಆ ಸರಕಿನ ಮೇಲಿನ ವೆಚ್ಚ ಕಡಿಮೆಯಾಗುತ್ತದೆಂಬುದನ್ನು ತೋರಿಸುತ್ತದೆ. ಮತ್ತೊಂದು ರೀತಿಯಲ್ಲಿ ಒಂದು ಸರಕಿನ ಶೇಕಡವಾರು ಬೆಲೆಯ ಹೆಚ್ಚಳಕ್ಕಿಂತ ಶೇಕಡವಾರು ಬೇಡಿಕೆಯ ಇಳಿಕೆ ಕಡಿಮೆಯಿದ್ದರೆ, ಆ ಸರಕಿನ ವೆಚ್ಚವು ಹೆಚ್ಚಾಗುತ್ತದೆ. (ಕೋಷ್ಟಕ 2.5ರ 1ನೇ ಅಡ್ಡ ಸಾಲನ್ನು ನೋಡಿರಿ) ಒಂದು ವೇಳೆ ಒಂದು ಸರಕಿನ ಶೇಕಡವಾರು ಬೆಲೆಯ ಹೆಚ್ಚಳವು ಆ ಸರಕಿನ ಶೇಕಡವಾರು ಬೇಡಿಕೆಯ ಇಳಿಕೆಗಳ ಪ್ರಮಾಣಕ್ಕೆ ಸಮನಾದರೆ ಆ ಸರಕಿನ ಮೇಲೆ ಮಾಡಬಹುದಾದ ವೆಚ್ಚದಲ್ಲಿ ಯಾವುದೇ ಬದಲಾವಣೆಯಗುವುದಿಲ್ಲ (ಕೋಷ್ಟಕ 2.5ರ 3ನೇ ಅಡ್ಡ ಸಾಲನ್ನು ನೋಡಿರಿ).

ನಾವೀಗ ಒಂದು ಸರಕಿನ ಬೆಲೆ ಕಡಿಮೆಯಾಗುತ್ತಿರುವುದನ್ನು ಪರಿಗಣಿಸೋಣ. ಬೆಲೆಯ ಶೇಕಡವಾರು ಇಳಿಕೆಗಿಂತಲೂ ಬೇಡಿಕೆಯ ಶೇಕಡವಾರು ಹೆಚ್ಚಳವು ಅಧಿಕವಾಗಿದ್ದರೆ, ಆ ಸರಕಿನ ಮೇಲಿನ ವೆಚ್ಚವು ಅಧಿಕವಾಗುತ್ತಾ ಹೋಗುತ್ತದೆ. (ಕೋಷ್ಟಕ 2.5ರ 4ನೇ ಅಡ್ಡ ಸಾಲನ್ನು ನೋಡಿರಿ) ಮತ್ತೊಂದು ಕಡೆ ಬೆಲೆಯ ಶೇಕಡವಾರು ಇಳಿಕೆಗಿಂತಲೂ, ಬೇಡಿಕೆಯ ಶೇಕಡವಾರು ಹೆಚ್ಚಳವು ಕಡಿಮೆಯಾದರೆ, ಆ ಸರಕಿನ ಮೇಲಿನ ವೆಚ್ಚವು ಕಡಿಮೆಯಾಗುತ್ತಾ ಹೋಗುತ್ತದೆ. (ಕೋಷ್ಟಕ 2.5ರ 5ನೇ ಅಡ್ಡ ಸಾಲನ್ನು ನೋಡಿರಿ) ಒಂದು ವೇಳೆ ಬೇಡಿಕೆಯ ಶೇಕಡವಾರು ಹೆಚ್ಚಳವು ಬೆಲೆಯ ಶೇಕಡವಾರು ಇಳಿಕೆಗೆ ಸಮನಾಗಿದ್ದರೆ, ಆ ಸರಕಿನ ಮೇಲಿನ ವೆಚ್ಚವು ಸ್ಥಿರವಾಗಿರುತ್ತದೆ (ಕೋಷ್ಟಕ 2.5ರ 6ನೇ ಅಡ್ಡ ಸಾಲನ್ನು ನೋಡಿರಿ).





ಬೇಡಿಕೆಯ ಶೇಕಡವಾರು ಬದಲಾವಣೆಯು, ಬೆಲೆಯ ಶೇಕಡವಾರು ಬದಲಾವಣೆಗಿಂತ ಅಧಿಕವಾಗಿದ್ದರೆ, ಸರಕಿಗೆ ಬೆಲೆಯ ಸ್ಥಿತಿಸ್ಥಾಪಕತ್ವವಿದ್ದರೆ, ಸರಕಿನ ಮೇಲಿನ ವೆಚ್ಚವು ಅದರ ಬೆಲೆಯ ಬದಲಾವಣೆಗೆ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತದೆ. (ಕೋಷ್ಟಕ 2.5ರ 2 ಮತ್ತು 4ನೇ ಅಡ್ಡ ಸಾಲನ್ನು ನೋಡಿರಿ) ಬೇಡಿಕೆಯ ಶೇಕಡವಾರು ಬದಲಾವಣೆಯು, ಅದರ ಬೆಲೆಯ ಶೇಕಡವಾರು ಬದಲಾವಣೆಗಿಂತ ಕಡಿಮೆಯಿದ್ದರೆ, ಅಂದರೆ ಸರಕಿಗೆ ಬೆಲೆಯ ಅಸ್ಥಿತಿಸ್ಥಾಪಕತ್ವವಿದ್ದರೆ, ಸರಕಿನ ಮೇಲಿನ ವೆಚ್ಚವು ಅದರ ಬೆಲೆಯ ಬದಲಾವಣೆಗೆ ನೇರ ದಿಕ್ಕಿನಲ್ಲಿ ಚಲಿಸುತ್ತದೆ. (ಕೋಷ್ಟಕ 2.5ರ 1 ಮತ್ತು 5ನೇ ಅಡ್ಡ ಸಾಲನ್ನು ನೋಡಿರಿ) ಬೇಡಿಕೆಯ ಶೇಕಡವಾರು ಬದಲಾವಣೆಯು ಬೆಲೆಯ ಶೇಕಡವಾರು ಬದಲಾವಣೆಗೆ ಸಮನಾಗಿದ್ದರೆ ಅಂದರೆ ಸರಕಿಗೆ ಸರಿಸಮಾನ ಸ್ಥಿತಿಸ್ಥಾಪಕತ್ವವಿದ್ದರೆ, ಸರಕಿನ ವೆಚ್ಚ ಸ್ಥಿರವಾಗಿರುತ್ತದೆ (ಕೋಷ್ಟಕ 2.5ರ 3 ಮತ್ತು 6ನೇ ಅಡ್ಡ ಸಾಲನ್ನು ನೋಡಿರಿ).

**ಕೋಷ್ಟಕ 2.5 : ಬೆಲೆ ಏರಿಕೆ ಮತ್ತು ಇಳಿಕೆಯ ಒಂದು ಕಾಲ್ಪನಿಮ ಸಂಗತಿಗಳಿಗೆ, ಈ ಕೆಳಗಿನ ಕೋಷ್ಟಕವೂ ಸ್ಥಿತಿಸ್ಥಾಪಕತ್ವ ಮತ್ತು ಬಿಂದು ಸರಕಿನ ಮೇಲಿನ ವೆಚ್ಚದ ನಡುವಿನ ಸಂಬಂಧವನ್ನು ಸಂಕ್ಷೇಪಿಸಿದೆ.**

| | ಬೆಲೆಯಲ್ಲಿನ ಬದಲಾವಣೆ (P) | ಬೇಡಿಕೆಯಲ್ಲಿನ ಬದಲಾವಣೆ (Q) | ಬೆಲೆಯಲ್ಲಿನ ಶೇಕಡವಾರು ಬದಲಾವಣೆ | ಬೇಡಿಕೆಯಲ್ಲಿನ ಶೇಕಡವಾರು ಬದಲಾವಣೆ | ವೆಚ್ಚದ ಮೇಲಿನ ಪರಿಣಾಮ $= P \times Q$ | ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವದ ಸ್ವರೂಪ $\|e_d\|$ |
|---|---|---|---|---|---|---|
| 1 | ↑ | ↓ | +10 | –8 | ↑ | ಬೆಲೆ ಅಸ್ಥಿತಿಸ್ಥಾಪಕತ್ವ |
| 2 | ↑ | ↓ | +10 | –12 | ↓ | ಬೆಲೆ ಸ್ಥಿತಿಸ್ಥಾಪಕತ್ವ |
| 3 | ↑ | ↓ | +10 | –10 | ಬದಲಾವಣೆಯಿಲ್ಲ | ಸರಿಸಮ ಸ್ಥಿತಿಸ್ಥಾಪಕತ್ವ |
| 4 | ↓ | ↑ | –10 | +15 | ↑ | ಬೆಲೆ ಸ್ಥಿತಿಸ್ಥಾಪಕತ್ವ |
| 5 | ↓ | ↑ | –10 | +7 | ↓ | ಬೆಲೆ ಅಸ್ಥಿತಿಸ್ಥಾಪಕತ |
| 6 | ↓ | ↑ | –10 | +10 | ಬದಲಾವಣೆಯಿಲ್ಲ | ಸರಿಸಮ ಸ್ಥಿತಿಸ್ಥಾಪಕತ್ವ |

**ಆಯತಕಾರದ ಪರವಲಯ**

ಇದರ ಸಮೀಕರಣದ ರೂಪ $xy = c$ ಆಗಿದೆ.




$x$ ಮತ್ತು $y$ ಎರಡು ಚಲಕಗಳಾಗಿವೆ. $c$ ಸ್ಥಿರಾಂಕವಾಗಿದೆ. ಈ ಸಮೀಕರಣದಿಂದ ಪಡೆದ ರೇಖೆ ಆಯತಕಾರದ ಪರವಲಯವಾಗಿದೆ. ರೇಖಾಚಿತ್ರದಲ್ಲಿ ತೋರಿಸುರುವಂತೆ ಇದು $x$-$y$ ಸಮತಲದಲ್ಲಿ ಇಳಿಮುಖ ಇಳಿಜಾರನ್ನು ಹೊಂದಿದೆ. ಈ ರೇಖೆಯ ಮೇಲಿರುವ $p$ ಮತ್ತು $q$ ಬಿಂದುಗಳಲ್ಲಿ $OY_1$ $PX_1$ ಮತ್ತು $OY_2$ $qx_2$ ಎರಡು ಆಯತಕಾರದ ವಿಸ್ತೀರ್ಣ 'C' ಗೆ ಸಮನಾಗಿದೆ.

ಬೇಡಿಕೆ ರೇಖೆಯ ಸಮೀಕರಣವು $pq = e$ ರೂಪದಲ್ಲಿದ್ದರೆ, '$e$' ಸ್ಥಿರಾಂಕವಾಗಿರುತ್ತದೆ. ಇದು ಆಯತಾಕಾರದ ಪರವಲಯವಾಗಿರುತ್ತದೆ. '$p$' ಬೆಲೆಯಾದರೆ '$q$' ಬೇಡಿಕೆ ಸ್ಥಿರವಾಗುತ್ತದೆ. ಇಂತಹ ಬೇಡಿಕೆಯ ರೇಖೆಯಲ್ಲಿ ಅನುಭೋಗಿಯ ವೆಚ್ಚವು ಯಾವಾಗಲೂ ಒಂದೇಯಾಗಿದ್ದು '$e$' ಸಮನಾಗಿರುತ್ತದೆ.

**ಸ್ಥಿತಿಸ್ಥಾಪಕತ್ವ ಮತ್ತು ಒಂದು ಸರಕಿನ ಮೇಲಿನ ವೆಚ್ಚದ ಬದಲಾವಣೆಗಳ ನಡುವಿನ ಸಂಬಂಧ**

$p$ ಬೆಲೆಯಲ್ಲಿ ಒಂದು ಸರಕಿನ ಬೇಡಿಕೆಯು $q$ ಆಗಿದೆಯೆಂದು ತಿಳಿಯೋಣ. $p + \Delta p$ ಬೆಲೆಯಲ್ಲಿ ಒಂದು ಸರಕಿಗಿರುವ ಬೇಡಿಕೆಯು $q + \Delta q$ ಆಗಿದೆ. $p$ ಬೆಲೆಯಲ್ಲಿ ಸರಕಿನ ಮೇಲೆ ಮಾಡುವ ಒಟ್ಟು ವೆಚ್ಚ $pq$ ಮತ್ತು $p + \Delta p$ ಬೆಲೆಯಲ್ಲಿ ಸರಕಿನ ಒಟ್ಟು ವೆಚ್ಚವು $(p + \Delta p)(q + \Delta q)$. ಆಗಿರುತ್ತದೆ.

ಬೆಲೆ $p$ ಯಿಂದ $p + \Delta p$ ಗೆ ಬದಲಾದರೆ, ಸರಕಿನ ವೆಚ್ಚದಲ್ಲಿನ ಬದಲಾವಣೆಯು $(p + \Delta p)(q + \Delta q) - pq = q\Delta p + p\Delta q + \Delta p\Delta q$

$\Delta p\Delta q$ ಪದದ ಮೌಲ್ಯವನ್ನು $\Delta p$ ಮತ್ತು $\Delta q$ ನ ಸಣ್ಣ ಮೌಲ್ಯಕ್ಕಾಗಿ ನಿರ್ಲಕ್ಷಿಸಲಾಗಿದೆ. ಈ ಪ್ರಕರಣದಲ್ಲಿ ಸರಕಿನ ಮೇಲಿನ ಬದಲಾದ ವೆಚ್ಚವು $q\Delta p + p\Delta q$ ಆಗುತ್ತದೆ.

ಸರಿಸುಮಾರು ವೆಚ್ಚದಲ್ಲಿನ ಅಂದಾಜು ಬದಲಾವಣೆಯು $= \Delta E = q\Delta p + p\Delta q$

$$= \Delta P\left(q + P\frac{\Delta q}{\Delta P}\right) = \Delta P\left[q\left(1 + \frac{\Delta qP}{\Delta pQ}\right)\right] = \Delta P\left[q\left(1 + e_D\right)\right]$$

ಗಮನಿಸಬೇಕಾದ ಸಂಗತಿಗಳು

$e_D < -1$ ಆದರೆ, $q(1 + e_D) < 0$ ಆಗಿರುತ್ತದೆ. ಆದ್ದರಿಂದ $\Delta E$ ಚಿಹ್ನೆ $\Delta p$ ಗೆ ವಿರುದ್ಧವಾಗಿದೆ.

$e_D > -1$ ಆದರೆ, $q(1 + e_D) > 0$ ಆಗಿರುತ್ತದೆ. ಆದ್ದರಿಂದ $\Delta E$ ಚಿಹ್ನೆ $\Delta p$ ಚಿಹ್ನೆ ಒಂದೇ ಆಗಿರುತ್ತವೆ.

$e_D = -1$ ಆದರೆ, $q(1 + e_D) = 0$ ಆಗಿರುತ್ತದೆ. ಆದ್ದರಿಂದ $\Delta E = 0$ ಆಗಿರುತ್ತದೆ.

## ಸಾರಾಂಶ (*Summary*)



- ನಿರ್ದಿಷ್ಟ ಮಾರುಕಟ್ಟೆ ಬೆಲೆಯಲ್ಲಿ, ನಿರ್ದಿಷ್ಟ ಆದಾಯದಲ್ಲಿ, ಅನುಭೋಗಿಸಿಕೊಳ್ಳಬಹುದಾದ ಸರಕುಗಳ ಎಲ್ಲಾ ಸಂಯೋಜನೆಗಳ ಸಮೂಹವೇ ಬಜೆಟ್‌ಗಣ.
- ಬಜೆಟ್‌ರೇಖೆಯು, ಅನುಭೋಗಿ, ತನ್ನ ಆದಾಯವನ್ನು ಸಂಪೂರ್ಣವಾಗಿ ಖರ್ಚುಮಾಡಿಕೊಳ್ಳಬಹುದಾದ ಸರಕುಗಳ ಎಲ್ಲಾ ಸಂಯೋಜನೆಗಳನ್ನು ಪ್ರತಿನಿಧಿಸುತ್ತದೆ. ಇದು ಇಳಿಮುಖ ಇಳಿಜಾರನ್ನು ಹೊಂದಿರುತ್ತದೆ.
- ಎರಡೂ ಸರಕುಗಳ ಬೆಲೆಯಲ್ಲಿ ಬದಲಾವಣೆಯಾದರೆ, ಅಥವಾ ಆದಾಯದಲ್ಲಿ ಬದಲಾವಣೆಯಾದರೆ ಬಜೆಟ್‌ಸೆಟ್‌ನಲ್ಲಿ ಬದಲಾವಣೆಯಾಗುತ್ತದೆ.
- ಅನುಭೋಗಿಗೆ ಸಾಧ್ಯವಿರುವ ಅನುಭೋಗದ ವಿವಿದ ಸಂಯೋಜನೆಗಳ ಸಮೂಹದಲ್ಲಿ ಅನುಭೋಗಿಯು ಸುಸ್ಪಷ್ಟ ಆದ್ಯತೆಗಳನ್ನು ಹೊಂದಿರುತ್ತಾಳೆ ಮತ್ತು ಆದ್ಯತೆಗನುಗುಣವಾಗಿ ಲಭ್ಯವಿರುವ ಸಂಯೋಜನೆಗಳಿಗೆ ಶ್ರೇಣಿಯನ್ನು ನೀಡುತ್ತಾಳೆ.
- ಅನುಭೋಗಿಯು ಏಕತಾನಾತ್ಮಕ ಒಲವನ್ನು ಹೊಂದಿರುತ್ತಾಳೆಂದು ಕಲ್ಪಿಸಿಕೊಳ್ಳಲಾಗಿದೆ.
- ವಿವಿದ ಸಂಯೋಜನೆಗಳನ್ನು ವ್ಯಕ್ತಪಡಿಸುವ ಎಲ್ಲಾ ಬಿಂದುಗಳನ್ನು ಒಳಗೊಂಡ ರೇಖೆಯೇ ಔದಾಸೀನ್ಯ ವಕ್ರರೇಖೆ. ಈ ಎಲ್ಲಾ ಬಿಂದುಗಳ ನಡುವೆ ಅನುಭೋಗಿಯು ಔದಾಸೀನ್ಯದಿಂದಿರುತ್ತಾಳೆ.
- ಆದ್ಯತೆಗಳ ಏಕತಾನಾತ್ಮಕ ಒಲವಿನ ಕಾರಣದಿಂದ ಔದಾಸೀನ್ಯ ವಕ್ರರೇಖೆಯು ಇಳಿಮುಖ ಇಳಿಜಾರನ್ನು ಹೊಂದಿರುತ್ತದೆ.
- ಸಾಮಾನ್ಯವಾಗಿ ಒಬ್ಬ ಅನುಭೋಗಿಯ ಆದ್ಯತೆಗಳನ್ನು, ಔದಾಸೀನ್ಯ ನಕ್ಷೆಯಿಂದ ಪ್ರತಿನಿಧಿಸಬಹುದು.
- ಸಾಮಾನ್ಯವಾಗಿ ಒಬ್ಬ ಅನುಭೋಗಿಯ ಆದ್ಯತೆಗಳನ್ನು ತುಷ್ಟಿಗುಣದ ಬಿಂಬಕದಿಂದಲೂ ಸಹ ವ್ಯಕ್ತಪಡಿಸಬಹುದು.
- ಒಬ್ಬ ವಿವೇಚನಾಶೀಲ ಅನುಭೋಗಿಯು ಯಾವಾಗಲೂ ಬಜೆಟ್ ಗಣದಿಂದ ತಾನು ಅತಿ ಹೆಚ್ಚು ಆದ್ಯತೆ ನೀಡುವ ಸಂಯೋಜನೆಯನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ.
- ಅನುಭೋಗಿಯ ಆದರ್ಶ ಸಂಯೋಜನೆಯನ್ನು ಬಜೆಟ್‌ರೇಖೆ ಮತ್ತು ಔದಾಸೀನ್ಯ ವಕ್ರರೇಖೆ ಸ್ಪರ್ಶಿಸುವ ಬಿಂದುವಿನಲ್ಲಿ ಗುರುತಿಸಲಾಗುತ್ತದೆ.
- ಇತರೆ ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ ಮತ್ತು ಅಭಿರುಚಿ ಮತ್ತು ಆದ್ಯತೆಗಳು ಸ್ಥಿರವಾಗಿದ್ದಾಗ, ವಿವಿದ ಬೆಲೆಗಳಲ್ಲಿ ಆತನು ಆಯ್ಕೆ ಮಾಡಿಕೊಳ್ಳುವ ಸರಕಿನ ಪ್ರಮಾಣವನ್ನು ಬೇಡಿಕೆ ರೇಖೆಯು ನೀಡುತ್ತದೆ.
- ಸಾಮಾನ್ಯವಾಗಿ ಬೇಡಿಕೆ ರೇಖೆಯು ಇಳಿಮುಖ ಇಳಿಜಾರನ್ನು ಹೊಂದಿರುತ್ತದೆ.
- ಸಾಮಾನ್ಯ ಸರಕಿನ ಬೇಡಿಕೆಯು ಅನುಭೋಗಿಯ ಆದಾಯದಲ್ಲಿನ ಹೆಚ್ಚಳ (ಇಳಿಕೆ)ದೊಂದಿಗೆ ಹೆಚ್ಚಾಗುತ್ತದೆ(ಇಳಿಕೆ).
- ಅನುಭೋಗಿಯ ಆದಾಯ ಹೆಚ್ಚಾದಂತೆ(ಕಡಿಮೆಯಾದರೆ) ಕೆಳದರ್ಜೆ ಸರಕಿನ ಬೇಡಿಕೆಯು ಕಡಿಮೆಯಾಗುತ್ತದೆ(ಹೆಚ್ಚಾಗುತ್ತದೆ).
- ಮಾರುಕಟ್ಟೆ ಬೇಡಿಕೆ ರೇಖೆಯು, ಮಾರುಕಟ್ಟೆಯಲ್ಲಿ ಎಲ್ಲಾ ಅನುಭೋಗಿಗಳು ನಿರ್ದಿಷ್ಟ ಸರಕನ್ನು ವಿವಿದ ಬೆಲೆಯ ಮಟ್ಟಗಳಲ್ಲಿ ಕೊಳ್ಳುವ ಬೇಡಿಕೆಯನ್ನು ಪ್ರತಿನಿಧಿಸುತ್ತದೆ.
- ನಿರ್ದಿಷ್ಟ ಸರಕಿನ ಬೇಡಿಕೆಯಲ್ಲಾದ ಶೇಕಡವಾರು ಬದಲಾಣೆಯನ್ನು, ಅದರ ಬೆಲೆಯಲ್ಲಾದ ಶೇಕಡವಾರು ಬದಲಾವಣೆಯಿಂದ ಭಾಗಿಸುವುದೇ ಬೆಲೆಯ ಬೇಡಿಕೆಯ ಸ್ಥಿತಿಸ್ಥಾಪಕತ್ವವೆಂದು ವ್ಯಾಖ್ಯಾನಿಸಲಾಗಿದೆ.
- ಬೇಡಿಕೆಯ ಸ್ಥಿತಿಸ್ಥಾಪಕತ್ವವು ಶುದ್ಧ ಸಂಖ್ಯೆಯಾಗಿದೆ.
- ಒಂದು ಸರಕಿನ ಬೇಡಿಕೆಯ ಸ್ಥಿತಿಸ್ಥಾಪಕತ್ವ ಮತ್ತು ಆ ಸರಕಿನ ಮೇಲಿನ ಒಟ್ಟು ವೆಚ್ಚವು ನಿಕಟ ಸಂಬಂಧವನ್ನು ಹೊಂದಿವೆ.

## ಪ್ರಮುಖ ಪರಿಭಾಷೆಗಳು *Key Concepts*

| | |
|---|---|
| ಬಜೆಟ್ ಗಣ | ಬಜೆಟ್ ರೇಖೆ |
| ಆದ್ಯತೆಗಳು | ಔದಾಸೀನ್ಯ |
| ಔದಾಸೀನ್ಯ ರೇಖೆ | ಬದಲಿಕೆಯ ದರ |
| ಏಕತಾನಾತ್ಮಕ ಒಲವು | ಬದಲಿಕೆಯ ಇಳಿಮುಖ ದರ, |
| ಔದಾಸೀನ್ಯ ನಕ್ಷೆ | ಅನುಭೋಗಿಯ ಆದರ್ಶ, |
| ತುಷ್ಟಿಗುಣ ಬಿಂಬಕ | ಬದಲಿಕೆ ಪರಿಣಾಮ, |
| ಬೇಡಿಕೆ | ಬೇಡಿಕೆ ನಿಯಮ |
| ಬೇಡಿಕೆ ರೇಖೆ | ಸಾಮಾನ್ಯ ಸರಕು |
| ಆದಾಯದ ಪರಿಣಾಮ | ಬದಲಿಸು |
| ಕೆಳದರ್ಜೆಯ ಸರಕುಗಳು | ಆದಾಯದ ಪರಿಣಾಮ |
| ಪೂರಕ ಸರಕುಗಳು | ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ |

## ಅಭ್ಯಾಸಗಳು *Exercises*

1. ಒಬ್ಬ ಅನುಭೋಗಿಯ ಬಜೆಟ್ ಗಣ ಎಂದರೇನು ?
2. ಬಜೆಟ್ ರೇಖೆ ಎಂದರೇನು ?
3. ಬಜೆಟ್ ರೇಖೆಯು ಇಳಿಮುಖ ಇಳಿಜಾರನ್ನು ಹೊಂದಿದೆ. ಏಕೆ ? ವಿವರಿಸಿ
4. ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸುತ್ತಾಳೆ. ಎರಡೂ ಸರಕುಗಳ ಬೆಲೆಯು ಅನುಕ್ರಮವಾಗಿ ₹4 ಮತ್ತು ₹5 ಅನುಭೋಗಿಯ ಆದಾಯ ₹20
   *i.* ಬಜೆಟ್ ರೇಖೆಯ ಸಮೀಕರಣವನ್ನು ಬರೆಯಿರಿ.
   *ii.* ಅನುಭೋಗಿಯು ಸರಕು1ರ ಮೇಲೆ ಸಂಪೂರ್ಣ ಆದಾಯವನ್ನು ಖರ್ಚುಮಾಡಿದರೆ, ಆ ಸರಕನ್ನು ಎಷ್ಟು ಪ್ರಮಾಣದಲ್ಲಿ ಅನುಭೋಗಿಸಬಹುದು?
   *iii.* ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಸರಕು2ರ ಮೇಲೆ ಖರ್ಚು ಮಾಡಿದರೆ ಅದನ್ನು ಎಷ್ಟು ಪ್ರಮಾಣದಲ್ಲಿ ಅನುಭೋಗಿಸಬಹುದು?
   *iv.* ಬಜೆಟ್ ರೇಖೆಯ ಇಳಿಜಾರು ಎಂದರೇನು?

   ಪ್ರಶ್ನೆ 5, 6 ಮತ್ತು 7ನೇ ಪ್ರಶ್ನೆಗಳು ಪಶ್ನೆ 4ಕ್ಕೆ ಸಂಬಂಧಿಸಿದ್ದಾಗಿದೆ.
5. ಬೆಲೆ ಸ್ಥಿರವಾಗಿದ್ದು, ಅನುಭೋಗಿಯ ಆದಾಯ ₹40 ಗಳಿಗೆ ಹೆಚ್ಚಾದರೆ ಬಜೆಟ್ ರೇಖೆಯು ಹೇಗೆ ಬದಲಾಗುತ್ತದೆ ?
6. ಸರಕು1 ರ ಬೆಲೆ ಮತ್ತು ಅನುಭೋಗಿಯ ಆದಾಯ ಸ್ಥಿರವಾಗಿದ್ದು ಸರಕು2ರ ಬೆಲೆಯು 1ರೂ ನಷ್ಟ ಕಡಿಮೆಯಾದರೆ ಬಜೆಟ್ ರೇಖೆಯು ಹೇಗೆ ಬದಲಾಗುತ್ತದೆ ?
7. ಬೆಲೆ ಹಾಗೂ ಆದಾಯ ಎರಡು ದ್ವಿಗುಣಗೊಂಡರೆ ಬಜೆಟ್ ಗಣಕ್ಕೆ ಏನಾಗುತ್ತದೆ ?
8. ಒಬ್ಬ ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚುಮಾಡಿದರೆ ಸರಕು1 ನ್ನು 6 ಘಟಕಗಳಷ್ಟು ಮತ್ತು ಸರಕು2 ನ್ನು 8 ಘಟಕಗಳಷ್ಟು ಪಡೆಯಬಹುದೆಂದು ಭಾವಿಸೋಣ. ಆ ಎರಡೂ ಸರಕುಗಳ ಬೆಲೆ ಕ್ರಮವಾಗಿ ₹6 ಮತ್ತು ₹8 ಹಾಗಾದರೆ ಅನುಭೋಗಿಯ ಆದಾಯವೆಷ್ಟು ?



9. ಅನುಭೋಗಿಯು ಪೂರ್ಣ ಘಟಕಗಳಲ್ಲಿ ಮಾತ್ರ ಲಭ್ಯವಿರುವ ಎರಡು ಸರಕುಗಳನ್ನು ಅನುಭೋಗಿಸುತ್ತಾಳೆಂದು ಭಾವಿಸೋಣ. ಎರಡು ಸರಕುಗಳ ಬೆಲೆ ಸಮಾನವಾಗಿ ₹10 ಮತ್ತು ಅನುಭೋಗಿಯ ಆದಾಯ ₹40

*a*. ಅನುಭೋಗಿಗೆ ಲಭ್ಯವಾಗುವ ಎಲ್ಲಾ ಸಂಯೋಜನೆಗಳನ್ನು ಬರೆಯಿರಿ.

*b*. ಅನುಭೋಗಿಗೆ ಲಭ್ಯವಿರುವ ಎಲ್ಲಾ ಸಂಯೋಜನೆಗಳಲ್ಲಿ ಯಾವ ಸಂಯೋಜನೆಯು ಪರಿಪೂರ್ಣವಾಗಿ ₹40 ವೆಚ್ಚಕ್ಕೆ ಸಮನಾಗಿದೆ ಎಂಬುದನ್ನು ಗುರುತಿಸಿ.

10. ಏಕತಾನಾತ್ಮಕ ಒಲವು(ಆದ್ಯತೆ) ಎಂದರೇನು ?

11. ಅನುಭೋಗಿಯು ಏಕತಾನಾತ್ಮಕ ಒಲವನ್ನು ಹೊಂದಿದ್ದರೆ, (10,8) ಮತ್ತು (8,6) ಸಂಯೋಜನೆಗಳ ನಡುವೆ ಔದಾಸೀನ್ಯದಿಂದಿರಬಹುದೇ ?

12. ಒಂದುವೇಳೆ ಒಬ್ಬ ಅನುಭೋಗಿಯ ಆದ್ಯತೆಗಳು ಏಕತಾನಾತ್ಮಕ ಒಲವನ್ನು ಹೊಂದಿವೆಯೆಂದುಕೊಳ್ಳೋಣ. (10,10), (10,9) ಮತ್ತು (9,9) ಸಂಯೋಜನೆಗಳಲ್ಲಿ ಅನುಭೋಗಿಯು ಆದ್ಯತೆಗಳನ್ನು ಶ್ರೇಣೀಕರಿಸುವದರ ಬಗ್ಗೆ ಏನನ್ನು ಹೇಳುತ್ತೀರಾ ?

13. ಒಂದು ವೇಳೆ ನಿಮ್ಮ ಸ್ನೇಹಿತ (5,6) ಮತ್ತು (6,6) ಸಂಯೋಜನೆಗಳಿಗೆ ಔದಾಸೀನ್ಯನಾಗಿರುತ್ತಾಳೆ ಎಂದುಕೊಳ್ಳೋಣ. ನಿಮ್ಮ ಸ್ನೇಹಿತನ ಆದ್ಯತೆಗಳು ಏಕತಾನಾತ್ಮಕವಾಗಿವೆಯೇ ?

14. ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಇಬ್ಬರು ಅನುಭೋಗಿಗಳಿದ್ದಾರೆ ಎಂದು ಕೊಳ್ಳೋಣ ಅವರ ಬೇಡಿಕೆಯ ಬಿಂಬಕ ಈ ಕೆಳಗಿನಂತಿವೆ. $d_1(p) = 20 - p$ ಸಮೀಕರಣದಲ್ಲಿ ಬೆಲೆಯು 20ಕ್ಕೆ ಸಮನಾಗಿರಬಹುದು ಅಥವಾ ಅದಕ್ಕಿಂತ ಕಡಿಮೆಯಿರಬಹುದು ಮತ್ತು $d_1(p)=0$ ಇದರಲ್ಲಿ ಯಾವುದೇ ಬೆಲೆಯು 20ಕ್ಕಿಂತ ಹೆಚ್ಚಾಗಿರುತ್ತದೆ.

$d_2(p)=30-2p$ ಯಾವುದೇ ಬೆಲೆಯು 15ಕ್ಕೆ ಸಮವಾಗಿರುತ್ತದೆ ಅಥವಾ ಅದಕ್ಕಿಂತ ಕಡಿಮೆಯಿರುತ್ತದೆ ಮತ್ತು $d_1(p) = 0$ ಇದರಲ್ಲಿ ಯಾವುದೇ ಬೆಲೆಯು 15 ಕ್ಕಿಂತ ಹೆಚ್ಚಾಗಿರುತ್ತದೆ. ಮಾರುಕಟ್ಟೆ ಬೇಡಿಕೆ ಬಿಂಬಕವನ್ನು ಗುರುತಿಸಿ.

15. ಒಂದು ಸರಕಿಗೆ 20 ಅನುಭೋಗಿಗಳಿದ್ದಾರೆಂದು ಭಾವಿಸೋಣ ಮತ್ತು ಅವರೆಲ್ಲಾ ಸಮನಾದ ಬೇಡಿಕೆ ಬಿಂಬಕವನ್ನು ಹೊಂದಿದ್ದಾರೆ.

$d(p)=10-3p$ ಇದು ಯಾವುದೇ ಬೆಲೆಯಲ್ಲಿ 10/3 ಕ್ಕಿಂತ ಕಡಿಮೆಯಾಗಿರುತ್ತದೆ ಅಥವಾ ಸಮನಾಗಿರುತ್ತದೆ ಮತ್ತು $d_1(p)=0$ ಇದರಲ್ಲಿ ಯಾವುದೇ ಬೆಲೆಯಲ್ಲಿ 10/3 ಕ್ಕಿಂತ ಹೆಚ್ಚಾಗಿರುತ್ತದೆ. ಮಾರುಕಟ್ಟೆ ಬೇಡಿಕೆ ಬಿಂಬಕವೇನು ?

16. ಇಬ್ಬರು ಅನುಭೋಗಿಗಳಿರುವ ಒಂದು ಮಾರುಕಟ್ಟೆಯನ್ನು ಪರಿಗಣಿಸೋಣ ಮತ್ತು ನಿರ್ದಿಷ್ಟ ಸರಕಿಗಿರುವ ಅವರ ಬೇಡಿಕೆಯು ಈ ಕೆಳಗಿನಂತಿದೆ.

| $P$ | $d_1$ | $d_2$ |
|---|---|---|
| 1 | 9 | 24 |
| 2 | 8 | 20 |
| 3 | 7 | 18 |
| 4 | 6 | 16 |
| 5 | 5 | 14 |
| 6 | 4 | 12 |

ಆ ಸರಕಿಗೆ ಮಾರುಕಟ್ಟೆ ಬೇಡಿಕೆಯನ್ನು ಲೆಕ್ಕಚಾರ ಮಾಡಿ

17. ಸಾಮಾನ್ಯ ಸರಕುಗಳೆಂದರೇನು ?

18. ಕೆಳದರ್ಜೆ ಸರಕುಗಳೆಂದರೇನು ? ಉದಾಹರಣೆ ಕೊಡಿ.

19. ಬದಲಿ ಸರಕುಗಳೆಂದರೇನು ? ಪರಸ್ಪರ ಬದಲಿ ಸರಕುಗಳಾಗಿರುವ ಯಾವುದಾದರು ಎರಡು ಸರಕುಗಳ ಉದಾಹರಣೆ ಕೊಡಿ.

20. ಪೂರಕ ಸರಕುಗಳೆಂದರೇನು ? ಪರಸ್ಪರ ಪೂರಕ ಸರಕುಗಳಾಗಿರುವ ಯಾವುದಾದರೂ ಎರಡು ಸರಕುಗಳ ಉದಾಹರಣೆ ಕೊಡಿ.

21. ಬೆಲೆ ಬೇಡಿಕೆ ಸ್ಥಿತಿ ಸ್ಥಾಪಕತ್ವವನ್ನು ವಿವರಿಸಿ.

22. ಒಂದು ಸರಕಿನ ಬೇಡಿಕೆಯನ್ನು ಪರಿಗಣಿಸಿ ರೂ.4 ಬೆಲೆಯಲ್ಲಿ ಆ ಸರಕಿಗೆ 25 ಘಟಕಗಳಷ್ಟು ಬೇಡಿಕೆಯಿದೆ. ಒಂದು ವೇಳೆ ಆ ಸರಕಿನ ಬೆಲೆ ₹5 ಗಳಿಗೆ ಹೆಚ್ಚಾಗಿದೆ, ಎಂದು ಕೊಳ್ಳೋಣ ಮತ್ತು ಅದರ ಪರಿಣಾಮವಾಗಿ ಆ ಸರಕಿನ ಬೇಡಿಕೆಯು 20 ಘಟಕಗಳಷ್ಟು ಕಡಿಮೆಯಾಗುತ್ತದೆ. ಬೆಲೆ ಸ್ಥಿತಿ ಸ್ಥಾಪಕತ್ವವನ್ನು ಲೆಕ್ಕಾಚಾರ ಮಾಡಿ.

23. ಬೇಡಿಕೆ ರೇಖೆ $d(p)=10-3P$ ನ್ನು ಪರಿಗಣಿಸಿ. 5/3 ರ ಬೆಲೆಯಲ್ಲಿ ಬೆಲೆಯ ಸ್ಥಿತಿ ಸ್ಥಾಪಕತ್ವವೇನು.?

24. ಒಂದು ಸರಕಿನ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವು –0.2 ಅಂದುಕೊಳ್ಳೋಣ. ಆ ಸರಕಿನ ಬೆಲೆಯಲ್ಲಿ ಶೇಕಡ 5 ರಷ್ಟು ಹೆಚ್ಚಾದರೆ, ಆ ಸರಕಿನ ಬೇಡಿಕೆಯು ಶೇಕಡವಾರು ಎಷ್ಟು ಪ್ರಮಾಣದಲ್ಲಿ ಕಡಿಮೆಯಾಗುತ್ತದೆ.

25. ಒಂದು ಸರಕಿನ ಬೆಲೆಯ ಬೇಡಿಕೆಯ ಸ್ಥಿತಿಸ್ಥಾಪಕತ್ವ –0.2 ಅಂದುಕೊಳ್ಳೋಣ. ಆ ಸರಕಿನ ಬೆಲೆಯು ಶೇಕಡ 10 ರಷ್ಟು ಹೆಚ್ಚಾದರೆ ಆ ಸರಕಿನ ಮೇಲಿನ ವೆಚ್ಚವು ಹೇಗೆ ಪ್ರಭಾವಿಸಲ್ಪಡುತ್ತದೆ.

26. ಒಂದು ಸರಕಿನ ಬೆಲೆ ಶೇಕಡ 4 ರಷ್ಟು ಕಡಿಮೆಯಾದರೆ, ಅದರ ಪರಿಣಾಮವಾಗಿ ಆ ಸರಕಿನ ಮೇಲಿನ ವೆಚ್ಚವು ಶೇಕಡ 2 ರಷ್ಟು ಹೆಚ್ಚಾಗುತ್ತದೆ. ಬೇಡಿಕೆಯ ಸ್ಥಿತಿಸ್ಥಾಪಕತ್ವದ ಬಗ್ಗೆ ನೀವು ಏನನ್ನು ಹೇಳುವಿರಿ?

❖ ❖ ❖ ❖

